ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2015
ಬೆಲೆ ರೂ. 1



## ದೆಹಲಿಯಲ್ಲಿ ಸ್ಥಳೀಯ ಕಲಾವಿದರಿಂದ 'ನಮ್ಮ ಕರ್ನಾಟಕ'





ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 3
ಡಿಸೆಂಬರ್ 2015, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ


## ನೇರ ಮಾತು

ಇತ್ತೀಚಿನ ದಿನಗಳಲ್ಲಿ ರಾಜ್ಯಕ್ಕೆ ಕೀರ್ತಿ ತೆಂದು ಕೊಟ್ಟಿರುವ ಹಲವಾರು ಮಹಾಪುರುಷರ ಜಯಂತಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇವು ನಡೆಯಲೇಬೇಕಾದ ಕಾರ್ಯಕ್ರಮಗಳೂ ಹೌದು. ಇಂದಿನ ಯುವ ಪೀಳಿಗೆಗೆ ಕರ್ನಾಟಕಕ್ಕೆ ಗೌರವ ತಂದುಕೊಟ್ಟವರ ಕುರಿತು ಈ ಆಚರಣೆಗಳ ಮೂಲಕವಾದರೂ ಅವರನ್ನು, ಅವರ ಸಾಹಿತ್ಯ ಕೃತಿಗಳನ್ನು, ಅವರ ಕೊಡುಗೆಗಳನ್ನು ನೆನಪಿಸಿಕೊಳ್ಳುವ ಮತ್ತು ಪರಿಚಯಿಸುವ ಕೆಲಸಗಳು, ಜೊತೆಗೆ ಮತ್ತಷ್ಟು ಇವರ ಕುರಿತು ಅಧ್ಯಯನ (ರಿಸರ್ಚ್) ಆಗುವಂತೆ ಮಾಡುವುದು ಇಂತಹ ಜಯಂತಿ ಆಚರಣೆಯ ಪ್ರಧಾನ ಆಶಯಗಳು. ಆದರೆ ವಾಸ್ತವವಾಗಿ ರಾಜ್ಯಕ್ಕೆ ಮತ್ತು ದೇಶಕ್ಕೆ ಮಾದರಿಯಾಗಿರುವ ಕರ್ನಾಟಕದ ಮಹಾ ಪುರುಷರನ್ನು ಜಾತಿ ಆಧಾರಿತವಾಗಿ ಆಚರಿಸುತ್ತಿರುವುದು ಕಂಡು ಬರುತ್ತಿದೆ. ಇದು ಅತ್ಯಂತ ಶೋಚನೀಯ ಮತ್ತು ಖಂಡನೀಯ.

ಈ ಮಹಾಪುರುಷರು ಯಾವುದೇ ಜಾತಿಯಲ್ಲಿ ಹುಟ್ಟಿರಲಿ, ಅವರು ರಾಜ್ಯಕ್ಕೆ, ದೇಶಕ್ಕೆ, ಅಥವಾ ಜಗತ್ತಿಗೆ ಮಾದರಿಯಾಗಿದ್ದಾರೆ ಎಂಬ ಹೆಮ್ಮೆಯಿಂದ ಅವರ 'ಸ್ವಜಾತಿ' ಬಾಂಧವರು ಸಂಭ್ರಮಿಸುವುದು ತಪ್ಪಲ್ಲ. ಆದರೆ ಅವರನ್ನು ಕೇವಲ ಜಾತಿಗೆ, ಸಮುದಾಯ ಅಥವಾ ಧರ್ಮಕ್ಕೆ ಸೀಮಿತವಾಗಿಸುವ ಕೆಲಸ ಮತ್ತು ಕಾರ್ಯಕ್ರಮಗಳನ್ನು ಮಾಡುವುದರಿಂದ ಅವರನ್ನು ಇತರರಿಂದ ದೂರವಿರಿಸಿದಂತಾಗುವುದು.

ಇತ್ತೀಚೆಗೆ ಕರ್ನಾಟಕ ಸರ್ಕಾರವು ಇಂತಹ ಆಚರಣೆಯ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಎಲ್ಲ ಕಾರ್ಯಕ್ರಮಗಳನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ದೃಷ್ಟಿಕೋನವನ್ನು ಇಟ್ಟುಕೊಂಡು ರಾಜಧಾನಿ ದೆಹಲಿಯಲ್ಲಿ ನಡೆಸಬೇಕು. ಆ ಮೂಲಕ ಈ ಮಹಾನ್ ಕನ್ನಡಿಗರನ್ನು ರಾಜಧಾನಿಯಲ್ಲಿರುವ ದೇಶದ ಇತರ ಭಾಷಿಗರಿಗೂ ಪರಿಚಯಿಸುವಂತಹ ಕೆಲಸವಾಗಬೇಕಾಗಿದೆ.

ಕರ್ನಾಟಕ ಸರ್ಕಾರ ಅಥವಾ ಸರ್ಕಾರದಿಂದ ಅನುದಾನಿತವಾಗಿ ನಡೆಯುವ ಅಕಾಡೆಮಿ ಅಥವಾ ಇತರ ಸಂಸ್ಥೆಗಳು ರಾಜಧಾನಿ ದೆಹಲಿಯಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಿಸಿದರೆ ಸಂಘವು ಸದಾ ಸ್ವಾಗತಿಸುತ್ತದೆ. ಜೊತೆಗೆ ಇತ್ತೀಚೆಗೆ ರಾಜಧಾನಿಯಲ್ಲಿ ಆರಂಭಗೊಂಡ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠವನ್ನು ಇಂತಹ ಕಾರ್ಯಕ್ರಮದೊಂದಿಗೆ ಸೇರಿಸಿಕೊಳ್ಳುವುದರಿಂದ ಇದನ್ನು ಇನ್ನೂ ಅರ್ಥಪೂರ್ಣವಾಗಿ ಮಾಡಬಹುದಾಗಿದೆ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ದೆಹಲಿ ಕರ್ನಾಟಕ ಸಂಘವು ಪ್ರತಿ ವರ್ಷದಂತೆ ಈ ಬಾರಿಯೂ ಸಹ ಕರ್ನಾಟಕ ರಾಜ್ಯೋತ್ಸವವನ್ನು ನವೆಂಬರ್ ತಿಂಗಳು ಪೂರ್ತಿ ಹಮ್ಮಿಕೊಂಡಿತ್ತು. ದೆಹಲಿಯ ಸ್ಥಳೀಯ ಕಲಾವಿದರಿಗೆ ಪ್ರಾಮುಖ್ಯತೆಯನ್ನು ನೀಡಿ "ನಮ್ಮ ಕರ್ನಾಟಕ" ಆಧಾರಿತ ಕರ್ನಾಟಕದ ಹಿರಿಮೆ ಗರಿಮೆಗಳನ್ನು ಸಾರುವ ಹಾಡುಗಳನ್ನೊಳಗೊಂಡ ಸಮೂಹ ನೃತ್ಯ ಕಾರ್ಯಕ್ರಮ, ಒಂದು ತಿಂಗಳಿನಿಂದ ಸ್ವತಃ ತರಬೇತಿ ಪಡೆದ ಕನ್ನಡದ ಸುಮಾರು 120ಕ್ಕೂ ಹೆಚ್ಚು ಕಲಾವಿದರು ಒಂದೇ ವೇದಿಕೆಯ ಮೇಲೆ ಪ್ರದರ್ಶನ ನೀಡಿದರು. ಇದೊಂದು ಹೊಸ ಇತಿಹಾಸ. ಏಕೆಂದರೆ ಪ್ರತಿ ಬಾರಿ ನಾವು ಹೊರಗಿನಿಂದ ಕಲಾವಿದರನ್ನು ಕರೆಸಿಕೊಂಡು ಕಾರ್ಯಕ್ರಮಗಳನ್ನು ನೋಡುತ್ತಿದ್ದೆವು. ಸ್ಥಳೀಯರಿಗೆ ಹೆಚ್ಚು ಹೆಚ್ಚಾಗಿ ಅವಕಾಶ ನೀಡಿ ಉತ್ತಮ ತರಬೇತಿಯೊಂದಿಗೆ ಸಂಘದ ವೇದಿಕೆಯನ್ನು ನೀಡಬೇಕೆಂಬುದು ಹಲವು ವರ್ಷಗಳಿಂದ ನಮ್ಮ ಆಸೆ ಮತ್ತು ಕನಸಾಗಿತ್ತು.

ನಮ್ಮ ಮಕ್ಕಳು ಕನ್ನಡವನ್ನೇ ಮರೆಯುತ್ತಿರುವಂತಹ ಈ ಸಂದರ್ಭದಲ್ಲಿ ನಮ್ಮ ವೇದಿಕೆ ಒಂದು ರೀತಿಯಲ್ಲಿ ಹೊಸ ಪೀಳಿಗೆಗೆ ಕರ್ನಾಟಕವನ್ನೇ ಸೃಷ್ಟಿಸಿತು. ಇನ್ನು ಮುಂದೆ ಬರುವ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ಸ್ಥಳೀಯ ಕಲಾವಿದರುಗಳನ್ನೇ ಒಳಗೊಂಡು ಮಾಡಲು ಪ್ರಯತ್ನಿಸುತ್ತೇವೆ.

ಅಭಿಮತದ ಬೆಳ್ಳಿ ಸಂಪುಟದ ವಿಶೇಷ ಸಂಚಿಕೆಯ ಬಿಡುಗಡೆ ಇದೇ ಡಿಸೆಂಬರ್ 6ರಂದು ನಡೆಯಿತು. ಕಳೆದ 25 ವರ್ಷಗಳಲ್ಲಿ ಅಭಿಮತಕ್ಕಾಗಿ ಸೇವೆ ಸಲ್ಲಿಸಿದ ಎಲ್ಲರಿಗೂ ಕೃತಜ್ಞತೆಗಳು. ಈ ವಿಶೇಷ ಸಂಚಿಕೆಯನ್ನು ಹೊರತರುವಲ್ಲಿ ಅತ್ಯಂತ ಶ್ರಮವಹಿಸಿದ ಸಂಪಾದಕರಾದ ಬಾಲಕೃಷ್ಣ ನಾಯ್ಕ್ ಡಿ. ಹಾಗೂ ಸಂಪಾದಕ ಮಂಡಳಿಗೆ ಅಭಿನಂದನೆಗಳು. ಇವರ ಸಂಪಾದಕತ್ವದ ಎರಡು ವರ್ಷಗಳಲ್ಲಿ ಅಭಿಮತವು ಅದ್ಭುತವಾಗಿ ಮೂಡಿ ಬಂದಿದೆ. ಇದೇ ಕಾರ್ಯಕ್ರಮದ ಸಂದರ್ಭದಲ್ಲಿ ಇನ್‌ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಸಹಯೋಗದೊಂದಿಗೆ ಸ್ವರಾಮೃತ ತಂಡ ವಿಶ್ವೇಶ್ ಭಟ್ ನೇತೃತ್ವದಲ್ಲಿ ಆಯೋಜಿಸಿದ ವಿವಿಧ ಭಾಷೆಗಳ ಕಲಾತ್ಮಕ ಗೀತೆಗಳ ಸಂಗೀತೋತ್ಸವ ಕಾರ್ಯಕ್ರಮ ಅದ್ಭುತವಾಗಿ ಮೂಡಿ ಬಂತು.

ಇತ್ತೀಚೆಗೆ ನಮ್ಮ ನೆರೆಯ ರಾಜ್ಯ ತಮಿಳುನಾಡಿನಲ್ಲಿ ಭಾರಿ ಮಳೆಯಿಂದ ಸಾಕಷ್ಟು ಕಷ್ಟ ನಷ್ಟಗಳು ಉಂಟಾಗಿವೆ. ಈ ಭೀಕರ ಪ್ರಕೃತಿ ವಿಕೋಪಕ್ಕೆ ಸಿಲುಕಿ ದುರ್ಮರಣ ಹೊಂದಿದದವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸೋಣ.

ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ, ಪಿಕ್‌ನಿಕ್ ಮತ್ತು ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಆಯೋಜನೆ ಮಾಡಲಾಗುವುದು.

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ
# ತಿಂಗಳ ಕಾರ್ಯಕ್ರಮ

**12** **ಡಿಸೆಂಬರ್ 2015** ಶನಿವಾರ ಮಧ್ಯಾಹ್ನ : 1.00 ಗಂಟೆಗೆ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ ಮತ್ತು ದೆಹಲಿ ಕರ್ನಾಟಕ ಸಂಘದ
ಸಹಯೋಗದೊಂದಿಗೆ
**ದೆಹಲಿಯಲ್ಲಿ ಸಾಂಸ್ಕೃತಿಕ ಸಂಗಮ** ಕಾರ್ಯಕ್ರಮ

**ಗೌಡರ ಸಿರಿ ಸಂಸ್ಕೃತಿ ದರ್ಶನ**–ನಾಟ್ಯ ಮಿಲನ ನೃತ್ಯ ಶಾಲೆ, ಭಾಗಮಂಡಲ
**ಅರೆಭಾಷೆ ಸಂಪ್ರದಾಯ ಕೋಲಾಟ**–ಶ್ರೀ ಕುದುಪ್ರಜ್ಜೆ ಪ್ರಕಾಶ್ ಮತ್ತು ಬಳಗ, ಭಾಗಮಂಡಲ
**ಹೆಜ್ಜೆಗೆಜ್ಜೆ ನಿನಾದೊಳಗೆನುಟ್ಟು**–ಮಿದೂಷಿ ಪ್ರಮೀಳಾ ಲೋಕೇಶ್ ಮತ್ತು ಬಳಗ, ಪುತ್ತೂರು
**ಭರತನಾಟ್ಯ**–ಮನಸ್ವಿ ರಾಜೇಂದ್ರ, ದೆಹಲಿ
**ಅರೆಭಾಷೆ ಯಕ್ಷಗಾನ ವೈಭವ**–ಮಾ. ಎ.ವಿ. ಲವಿನ್, ಕು. ಎ.ವಿ. ರಕ್ಷಾ, ಮಂಡೆಕೋಲು,
**ಸೋಬಾನೆ**–ಜಯಶ್ರೀನಿವಾಸ, ದೆಹಲಿ
**ಕೋಲಾಟ**–ಟಿ.ಪಿ. ಬೆಳ್ಳಿಯಪ್ಪ ಮತ್ತು ಬಳಗ, ನವದೆಹಲಿ
**ರಾಧಾಕೃಷ್ಣ ನೃತ್ಯ ಲೀಲೆ**–ಕಲಾಸಿರಿ, ಮಡಿಕೇರಿ
**ಅರೆಭಾಷೆ ಹಾಡು**–ಶ್ರೀ ಲಕ್ಷ್ಮೀಕಾಂತ ಮೂಲೆಮಜಲು, ಪೆರಾಜೆ
**ವೀರ ಪರಂಪರೆ**–ಕೊಡಗು ಗೌಡ ಯುವ ವೇದಿಕೆ, ಮಡಿಕೇರಿ

**ಜನವರಿ ಮತ್ತು ಫೆಬ್ರವರಿ 2016** **ಆಟೋಟ ಸ್ಪರ್ಧೆಗಳು**

ದೆಹಲಿ ಕರ್ನಾಟಕ ಸಂಘವು 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಿವಿಧ ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಆಯೋಜಿಸುವ ಬಗ್ಗೆ ಕಾರ್ಯಪ್ರವೃತ್ತವಾಗಿದೆ. . ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

(ಕ್ರೀಡಾ ಸ್ಪರ್ಧೆಗಳ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸಲಾಗುವುದು.)

'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು. **(dksangha@gmail.com)**

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

*ಸಂಪಾದಕ ಮಂಡಳಿ*

## ಅಭಿಮತ ರಸಪ್ರಶ್ನೆ

1. ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ನಾಟಕ ರಕ್ತರಾತ್ರಿಯನ್ನು ಬರೆದವರು ಯಾರು?

2. ದೆಹಲಿ ಕರ್ನಾಟಕ ಸಂಘದ 2015ರ ಸಾಲಿನ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ಶ್ರೀ ಬಿ.ಎನ್. ರಾವ್ ಅವರು ದೆಹಲಿಯಲ್ಲಿರುವಾಗ ಎಲ್ಲಿ, ಯಾವ ವೃತ್ತಿಯಲ್ಲಿದ್ದರು?

3. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾದ ಕನ್ನಡ ಅಧ್ಯಯನ ಪೀಠವನ್ನು ಯಾರು ಉದ್ಘಾಟಿಸಿದರು ಮತ್ತು ಅವರು ಏನಾಗಿದ್ದಾರೆ?

4. ದೆಹಲಿ ಕನ್ನಡ ಶಾಲೆಯಲ್ಲಿ 2015ರ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಯಾವ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು?

5. ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 2015ರ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 'ಹಚ್ಚೇವು ಕನ್ನಡ ದೀಪ' ಹಾಡನ್ನು ಹಾಡಿದ ತಂಡ ಯಾವುದು ಮತ್ತು ಎಲ್ಲಿಯದು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.12.2015ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 13 ಡಿಸೆಂಬರ್, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 13 ಡಿಸೆಂಬರ್, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 27 ಡಿಸೆಂಬರ್, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 27 ಡಿಸೆಂಬರ್, 2015 ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 3
ಡಿಸೆಂಬರ್ 2015

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

## ಸಂಪಾದಕೀಯ

# ನೈಸರ್ಗಿಕ ದುರಂತದ ಎಚ್ಚರಿಕೆಯ ಗಂಟೆ

ದೆಹಲಿಯ ಕಳವಳಕಾರಿಯಾದ ವಾಯುಮಾಲಿನ್ಯ ಮತ್ತು ಚೆನ್ನೈ ನಗರದ ಜಲವಿಕೋಪಗಳು ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಬಂಧ ಅಧೋಗತಿಗೆ ಇಳಿದಿದೆ ಎಂಬುದಕ್ಕೆ ಪುರಾವೆಯಾಗಿವೆ. ದೆಹಲಿಯ ವಾಯುಪ್ರದೇಶದಲ್ಲಿ ವಿಷಯುಕ್ತ ಅನಿಲಗಳು ಮತ್ತು ಧೂಳಿನ ಕಣಗಳು ಆವರಿಸಿಕೊಂಡು ಜನರು ಉಸಿರಾಡದಂತಹ ವಾತಾವರಣ ಸೃಷ್ಟಿಯಾಗಿದೆ. ವಾತಾವರಣದಲ್ಲಿ ಮನುಷ್ಯರಿಗೆ ಮಾರಕವಾದ ಟಾಕ್ಸಿಕ್ ಅಂಶ ಅತ್ಯಧಿಕ ಪ್ರಮಾಣದಲ್ಲಿದೆ. ದೆಹಲಿಯ ಗಾಳಿಯನ್ನು ದೀರ್ಘಕಾಲ ಸೇವಿಸುವುದರಿಂದ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಉಂಟಾಗುವ ಅಪಾಯವಿದೆ. ಏರುತ್ತಿರುವ ವಾಯುಮಾಲಿನ್ಯಕ್ಕೆ ಕಾರಣಗಳು ಮುಖ್ಯವಾಗಿ ಹೆಚ್ಚುತ್ತಿರುವ ಜನಸಂಖ್ಯೆ, ಹಿಮಾಲಯ ಪರ್ವತ ಪ್ರದೇಶದ ಕೆಳಗಿನ ಮೈದಾನ ಪ್ರದೇಶದಲ್ಲಿರುವ ದೆಹಲಿಯ ವಿಪರೀತ ಬಿಸಿಲು ಮತ್ತು ಚಳಿಯ ಹವಾಮಾನ, ನಗರವಾಸಿಗಳು ತಮ್ಮ ವಾಹನಗಳಿಗೆ ಹಾಗೂ ವಿದ್ಯುತ್ ಉತ್ಪಾದನೆಗೆ ಬಳಸುವ ಇಂಧನಗಳಾಗಿವೆ. ವಾಹನಗಳ ದಟ್ಟಣೆ ಮತ್ತು ಕಾರ್ಖಾನೆಗಳು ಹೊರಹಾಕುವ ವಾಯು, ಜಲ ಮತ್ತು ಘನತ್ಯಾಜಗಳಿಂದ ಉಂಟಾಗುವ ಮಾಲಿನ್ಯವು ಇಡೀ ದೆಹಲಿಯ ಹವಾಮಾನದಲ್ಲಿ ತುಂಬಿ ಬದುಕಲು ಅಸಾಧ್ಯವೆನಿಸುವ ಮಟ್ಟಿಗೆ ಬಂದಿದೆ. ದೆಹಲಿಯಲ್ಲಿ ವಾಯು ಮಾಲಿನ್ಯ ಕಳವಳಕಾರಿಯಾದ ಮಟ್ಟದಲ್ಲಿ ಹೆಚ್ಚಾಗಿದ್ದು ದೆಹಲಿ ಹೈಕೋರ್ಟ್ ಕಠಿಣ ಕ್ರಮಕೈಗೊಳ್ಳಲು ಸರಕಾರಕ್ಕೆ ಸೂಚಿಸಿದೆ.

ಚೆನ್ನೈ ಮಹಾನಗರದಲ್ಲಿ ಇತಿಹಾಸದಲ್ಲಿ ಇದುವರೆಗೆ ಆಗದಷ್ಟು ದಾಖಲೆಯ ಮಳೆಯಾಗಿದೆ. ಮಳೆಯ ನೀರು ಮನೆಯೊಳಗೆ ಬಂದಿದೆ. ನಿರಂತರ ಧೋ ಎಂದು ಬಿದ್ದ ಮಳೆಗೆ ಜನ ತತ್ತರಿಸಿದ್ದಾರೆ. ಮಳೆನೀರು ಹರಿದು ಹೋಗದೇ ನಗರದ ಜನರ ಕೋಟ್ಯಾಂತರ ರೂಪಾಯಿಗಳ ಸ್ವತ್ತು ನಷ್ಟವಾಗಿದೆ. ಸಾವು ನೋವು ಅಪಾರವಾಗಿದೆ. ಸಂಕಷ್ಟದಲ್ಲಿರುವವರ ನೋವಿಗೆ ಪ್ರತಿಸ್ಪಂದನೆ ಎಲ್ಲೆಡೆಯಿಂದಲೂ ಬಂದಿದೆ. ಚೆನ್ನೈಯಲ್ಲಿ ಆದ ಪ್ರಕೃತಿಯ ವಿಕೋಪಕ್ಕೆ ಮಾನವ ನಿರ್ಮಿತ ತಪ್ಪುಗಳೇ ಕಾರಣವಾಗಿದೆ. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಕಟ್ಟಡಗಳ ಸಾಂದ್ರತೆ, ಕೊಳಚೆ ನೀರು ಮತ್ತು ಮಳೆಯ ನೀರು ಹರಿದು ಹೋಗಲು ವ್ಯವಸ್ಥಿತ ಕಾಲುವೆಗಳು, ಚರಂಡಿಗಳು ಇರದೇ ಇರುವುದು, ಹಿಂದೊಮ್ಮೆ ಮಳೆನೀರು ಹರಿದು ಹೋಗುತ್ತಿದ್ದ ಕಡೆಯಲ್ಲಿ ಕಟ್ಟಡಗಳನ್ನು ನಿರ್ಮಿಸಿದುದು ಚೆನ್ನೈಯಲ್ಲಿ ನಡೆದ ಅನಾಹುತಕ್ಕೆ ಮುಖ್ಯ ಕಾರಣವೆನ್ನಲಾಗಿದೆ. ಚೆನ್ನೈ ಮತ್ತು ದೆಹಲಿಯ ಪ್ರಕೋಪಗಳು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಸದ್ಯದಲ್ಲಿಯೇ ಮರುಕಳಿಸುವ ಎಲ್ಲಾ ಮುನ್ಸೂಚನೆಗಳನ್ನು ನಾವು ಕಾಣಬಹುದು. ನಗರಾಡಳಿತ ಸಂಸ್ಥೆಗಳು, ಸರಕಾರದ ಇಲಾಖೆಗಳು ಮಾಲಿನ್ಯದಲ್ಲಿ ಬೆಂಗಳೂರು ಮತ್ತೊಂದು ದೆಹಲಿ ಅಥವಾ ಚೆನ್ನೈ ಆಗದಂತೆ ಎಚ್ಚರದಿಂದಿರಬೇಕು.

ಭಾರತದ ಎರಡು ಪ್ರಮುಖ ಮಹಾನಗರಗಳಲ್ಲಿ ನೈಸರ್ಗಿಕ ದುರಂತವಾಗುತ್ತಿರುವ ಸಂದರ್ಭದಲ್ಲಿಯೇ ಪ್ಯಾರಿಸ್‌ನಲ್ಲಿ ವಿಶ್ವ ಸಂಸ್ಥೆಯು ಹವಾಮಾನ ವೈಪರೀತ್ಯದ ಕುರಿತು 21ನೇ ಶೃಂಗ ಸಭೆಯನ್ನು ನಡೆಸುತ್ತಿದೆ. ಏರುತ್ತಿರುವ ಜಾಗತಿಕ ತಾಪಮಾನಕ್ಕೆ ಕಡಿವಾಣ ಹಾಕಲು ನಿರ್ಧರಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಡೀ ಭೂಮಿಯಲ್ಲಿ ಜೀವಿಗಳು ನಾಶವಾಗುವ ಸಮಯವಿನ್ನು ದೂರವಿಲ್ಲ ಎಂದುಕೊಂಡಿರುವ ವಿಜ್ಞಾನಿಗಳು ಎಲ್ಲಾ ರಾಷ್ಟ್ರಗಳ ರಾಜಕೀಯ ನಾಯಕರು ಈ ಕುರಿತು ಧೃಡವಾದ ನಿರ್ಣಯಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಪ್ರಪಂಚವು ವಿನಾಶದಂಚಿನಲ್ಲಿದ್ದರೂ ಅನನ್ಯವಾದ ಪ್ರಕೃತಿ ಸಂಪತ್ತನ್ನು ಹೊಂದಿರುವ ಕರ್ನಾಟಕದಲ್ಲಿಯೂ ಪರಿಸರವಿರೋಧಿ ಯೋಜನೆಗಳನ್ನು ಜನಾಭಿಪ್ರಾಯಕ್ಕೆ ವಿರೋಧವಾಗಿ ಕೈಗೊಳ್ಳುತ್ತಿರುವುದು ವಿಷಾದನೀಯವಾಗಿದೆ. ಪಶ್ಚಿಮ ಘಟ್ಟದಂಚಿನಲ್ಲಿ ಹುಟ್ಟುವ ನೇತ್ರಾವತಿ ನದಿಯ ಮೂಲ ತೊರೆಗಳಿಗೆ ಒಡ್ಡು ಕಟ್ಟಿ ನೀರನ್ನು ಬಯಲು ಸೀಮೆಗೆ ದಾಟಿಸುವ ಯೋಜನೆಯೊಂದು ಕಾರ್ಯಗತಗೊಂಡಿದ್ದು ಜನರು ಹೋರಾಟಕ್ಕಿಳಿದಿದ್ದಾರೆ. ದಟ್ಟ ಅರಣ್ಯದ ನಡುವಿನ ಕಣಿವೆಯಲ್ಲಿ ಭೀಮಗಾತ್ರದ ಕಬ್ಬಿಣದ ಪೈಪುಗಳನ್ನು ಅಳವಡಿಸಿಕೊಂಡ ಈ ನದಿತಿರುವು ಯೋಜನೆಯನ್ನು ಮರುಪರಿಶೀಲಿಸುವ ಅಗತ್ಯ ಪರಿಸರ ಸಂರಕ್ಷಣೆಯ ನೆಪದಲ್ಲಿಯಾದರೂ ಆಗಬೇಕಾದುದು ಅಗತ್ಯವಾಗಿದೆ. ಭೂಮಿಯ ರಕ್ಷಣೆಯ ಹೊಣೆ ನಮ್ಮೆಲ್ಲರದು ಎಂಬುದನ್ನು ಅರಿತುಕೊಳ್ಳುವ ಅಗತ್ಯ ಎಂದಿಗಿಂತಲೂ ಹೆಚ್ಚು ಈಗ ಇದೆ. ಅ

**ಬಾಲಕೃಷ್ಣ ನಾಯ್ಕ್ ಡಿ.**

# ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ

## ಕನ್ನಡ ನಾಡನ್ನೇ ದೆಹಲಿಗೆ ತಂದ ಸ್ಥಳೀಯ ಕಲಾವಿದರು



ದೆಹಲಿ ಕರ್ನಾಟಕ ಸಂಘದ ವತಿಯಿಂದ 60ನೇ ಕರ್ನಾಟಕ ರಾಜ್ಯೋತ್ಸವವನ್ನು ನವಂಬರ್ 29ರಂದು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕದ ಮಾಜಿ ಸಚಿವ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕರ್ನಾಟಕ ರಾಜ್ಯದ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ವಹಿಸಿದ್ದರು.

ನಮ್ಮ ಕರ್ನಾಟಕ ಎಂಬ ಶೀರ್ಷಿಕೆಯಡಿಯಲ್ಲಿ ನೂರಕ್ಕೂ ಹೆಚ್ಚು ಮಂದಿ ಸ್ಥಳೀಯ ಕಲಾವಿದರು ಹಾಡು ಕುಣಿತಗಳ ಮೂಲಕ ತಮ್ಮ ಪ್ರತಿಭೆಯನ್ನು ಸಂಘದ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಕನ್ನಡಿಗರ ಸಮ್ಮುಖದಲ್ಲಿ ತೆರೆದಿಟ್ಟರು.

ಶ್ರೀ ಸಿಂಧ್ಯಾ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ದೇಶದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘವು ಸಮಸ್ತ ಕನ್ನಡಿಗರ ರಾಯಭಾರಿಯಾಗಿ ದೇಶ ಹಾಗೂ ವಿದೇಶಗಳಿಗೆ ಕನ್ನಡದ ಕಂಪನ್ನು ಹರಡಿಸುತ್ತಿರುವುದು ತುಂಬಾ ಶ್ಲಾಘನೀಯವಾದದ್ದು ಎಂದು ನುಡಿದರು. ದೇಶದಲ್ಲಿ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ, ಅಮೇರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಜರ್ಮನಿ ಮೊದಲಾದ ದೇಶಗಳಲ್ಲಿ ಕನ್ನಡಿಗರ ಮಾಡಿರುವ ಸಾಧನೆ ಮತ್ತು ಅಲ್ಲಿ ನಡೆಯುತ್ತಿರುವ ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯ ಕುರಿತು ವಿವರಿಸಿದರು. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಲನಚಿತ್ರ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡಿಗರ ಕೊಡುಗೆ ಹಾಗೂ ಯಶಸ್ಸನ್ನು ಶ್ರೀ ಸಿಂಧ್ಯಾ ಅವರು ಕೊಂಡಾಡಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅತಿಥಿಗಳನ್ನು ಹಾಗೂ ನೆರೆದವರನ್ನು ಸ್ವಾಗತಿಸುತ್ತಾ, ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ, ವಿವಿಧ ಕಲಾ ಪರಂಪರೆಗಳ ಉಳಿವು ಮತ್ತು ಬೆಳವಣಿಗೆಗಾಗಿ ದುಡಿಯಲು ದೆಹಲಿ ಕರ್ನಾಟಕ ಸಂಘ ಸದಾ ಕಂಕಣಬದ್ಧವಾಗಿದೆ ಎಂದರು. ಕರ್ನಾಟಕದಲ್ಲಿ ಇತ್ತೀಚೆಗೆ ಪ್ರತ್ಯೇಕತೆಯ ಕೂಗು ಕೇಳಿ ಬರುತ್ತಿರುವ ವಿಚಾರದ ಬಗ್ಗೆ ನೋವನ್ನು ವ್ಯಕ್ತಪಡಿಸಿದ ಶ್ರೀ ವಸಂತ ಶೆಟ್ಟಿ ಅವರು ಯಾವುದೇ ಒಂದು ಭಾಷೆ ತನ್ನ

> **ಸಂಘವು ಸಮಸ್ತ ಕನ್ನಡಿಗರ ರಾಯಭಾರಿಯಾಗಿ ದೇಶ ಹಾಗೂ ವಿದೇಶಗಳಿಗೆ ಕನ್ನಡದ ಕಂಪನ್ನು ಹರಡಿಸುತ್ತಿರುವುದು ತುಂಬಾ ಶ್ಲಾಘನೀಯವಾದದ್ದು**

ಅಭಿವೃದ್ಧಿಗಾಗಿ ಎಲ್ಲಾ ತರದ ಹೋರಾಟಗಳನ್ನು ಸಂವಿಧಾನಾತ್ಮಕವಾಗಿ ಮಾಡಬೇಕೇ ಹೊರತು ಪ್ರತ್ಯೇಕತೆಯ ಕೂಗು ಕೂಗುವುದು ಸಮಂಜಸವಲ್ಲ ಎಂದು ನುಡಿದರು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಕಳೆದ 25 ವರ್ಷಗಳಿಂದ ದೆಹಲಿಯಲ್ಲಿ ಕನ್ನಡ ಸೇವೆಯನ್ನು ಮಾಡಿದವರಿಗೆ ನೀಡುತ್ತಾ ಬಂದಿರುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕರಾಗಿ ನಿವೃತ್ತರಾದ ಶ್ರೀ ಬಿ.ಎಸ್. ರಾವ್ ಮತ್ತು ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಮಹಾ ಪ್ರಬಂಧಕರಾದ ಶ್ರೀ ಕೆ. ದೇವಾನಂದ ಉಪಾಧ್ಯಾಯ ಅವರಿಗೆ ನೀಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತ ಶ್ರೀ ರಾವ್ ಅವರು ತಾವು ದೆಹಲಿಯಲ್ಲಿದ್ದ 40 ವರ್ಷಗಳ ಕಾಲ ದೆಹಲಿ ಕರ್ನಾಟಕ ಸಂಘದ ಜೊತೆಗೆ ಕಳೆದ ತಮ್ಮ ಅಮೂಲ್ಯ ಕ್ಷಣಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡರು. ಶ್ರೀ ಉಪಾಧ್ಯಾಯರು ಮಾತನಾಡುತ್ತ 'ನನಗೆ ದೊರೆತ ಈ ಗೌರವ ಅಭಿನಂದನೆ ನನ್ನ ಎಲ್ಲ ಸಾಧನೆಗಳಿಗೆ, ಕನ್ನಡ ಸೇವೆಗೆ ಸದಾ ಪ್ರೋತ್ಸಾಹಿಸುತ್ತಾ ಬಂದ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲ ನನ್ನ ಸಹೋದ್ಯೋಗಿಗಳಿಗೆ ವಿನಮ್ರದಿಂದ ಸಮರ್ಪಿಸುತ್ತಿದ್ದೇನೆ' ಎಂದು ನುಡಿದರು. ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣ ಸಂದರ್ಭದಲ್ಲಿ ತನಗೆ ದೆಹಲಿ ಕರ್ನಾಟಕ ಸಂಘದ ಹಲವಾರು ಕನ್ನಡ ಮಿತ್ರರೊಡನೆ ಬೆರೆತು ಕೆಲಸ ಮಾಡುವ ಅವಕಾಶ ದೊರೆತದ್ದನ್ನು ಹೆಮ್ಮೆಯಿಂದ ಸ್ಮರಿಸಿಕೊಂಡರು.

ನವದೆಹಲಿಯಲ್ಲಿ ರಾಷ್ಟ್ರಪತಿಯವರಿಂದ ರಾಷ್ಟ್ರಪ್ರಶಸ್ತಿ ಸ್ವೀಕಾರ ಮಾಡಿದ ಕರ್ನಾಟಕದ ಆರು ಮಂದಿ ಅಂಗನವಾಡಿ ಕಾರ್ಯಕರ್ತೆಯರನ್ನು ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಇದೇ ಸಂದರ್ಭದಲ್ಲಿ ಪುಷ್ಪಗುಚ್ಛ ಮತ್ತು ಸಂಘದ ಸ್ಮರಣಿಕೆಯನ್ನು ನೀಡಿ ಗೌರವಿಸಿದರು.

ಸಂಘದ ಮಹಿಳಾ ಕಲಾವಿದರಿಂದ ನಾಡಗೀತೆಯೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಮುಖ್ಯ ಅತಿಥಿಗಳಿಂದ ಕಾರ್ಯಕ್ರಮದ ಉದ್ಘಾಟನೆಗೆ ಜ್ಯೋತಿ ಬೆಳಗುವ ಸಂದರ್ಭದಲಿ ಗುರ್‌ಗಾಂವ್‌ನ ಶ್ರೀಗಂಧ ಮಹಿಳಾ ತಂಡದವರು 'ಹಚ್ಚೇವು ಕನ್ನಡದ ದೀಪ' ಎಂಬ ಹಾಡನ್ನು ಸುಮಧುರವಾಗಿ ಹಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

### ನಮ್ಮ ಕರ್ನಾಟಕ

ಸಭಾ ಕಾರ್ಯಕ್ರಮದ ನಂತರ ಶ್ರೀ ಸಿ.ಎಂ. ನಾಗರಾಜ ಅವರು ಅತ್ಯಂತ ಮುತುವರ್ಜಿಯಿಂದ ಸಂಯೋಜಿಸಿದ 'ಸಾಂಸ್ಕೃತಿಕ ಕಾರ್ಯಕ್ರಮ ನಮ್ಮ ಕರ್ನಾಟಕ'ವು ಬಹಳ ಅದ್ಭುತವಾಗಿ ಮೂಡಿಬಂದಿತು. ಗಾಯಕಿ ಹಾಗೂ ಸಂಘದ ಸಮಿತಿ ಸದಸ್ಯೆಯಾದ ಶ್ರೀಮತಿ ಪೂಜಾ ಪಿ. ರಾವ್ ಅವರು ಬಹಳ ವಿನೂತನವಾಗಿ ನಡೆಸಿಕೊಟ್ಟ ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 14 ತಂಡಗಳ ಸುಮಾರು 100ಕ್ಕೂ ಹೆಚ್ಚು ಸ್ಥಳೀಯ ಪ್ರತಿಭೆಗಳು ಬಹಳ ಅರ್ಥಗರ್ಭಿತವಾಗಿ ಪ್ರತಿಬಿಂಬಿಸಿದವು. ಅಚ್ಚುಕಟ್ಟಾದ ನೃತ್ಯ ಸಂಯೋಜನೆ, ರಂಗಸಜ್ಜಿಕೆ, ವಸ್ತ್ರಾಲಂಕಾರ, ಬೆಳಕು, ಸಂಗೀತ ವಿವಿಧ ರಂಗ ಪರಿಕರಗಳನ್ನು ಉಪಯೋಗಿಸಿಕೊಂಡು ಈ ಕಲಾವಿದರು ತಾವು ಯಾವುದೇ ವೃತ್ತಿಪರ ಕಲಾವಿದರುಗಳಿಗೆ ಕಡಿಮೆಯಿಲ್ಲ ಎಂದು ಸಾರಿ ಮೆರೆದರು. ಹಾಡು ಕುಣಿತಗಳ ಮಧ್ಯೆ ನೆರೆದಿದ್ದ ಸಭಿಕರನ್ನು ಶ್ರೀಮತಿ ಪೂಜಾ ರಾವ್ ಅವರು ಸಂದರ್ಭೋಚಿತವಾದ ರಸಪ್ರಶ್ನೆಗಳ ಮೂಲಕ ಹಿಡಿದಿಟ್ಟರು. ಕನ್ನಡದ ವಿವಿಧ ಕವಿಪುಂಗವರುಗಳ ಗೀತ ಸಂಗೀತಕ್ಕೆ ಅತ್ಯಂತ ಲಯಬದ್ಧವಾದ ಸುಂದರ ಹಾಡು ಕುಣಿತಗಳು ನೆರೆದಿದ್ದ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದವು. ಇಡೀ ಸಭಾಂಗಣದ ತುಂಬೆಲ್ಲಾ ಕನ್ನಡ ಬಾವುಟ ಹಾರಾಡಿ ಕನ್ನಡಾಂಬೆಯ ಜೈ ಜೈಕಾರ ಪ್ರತಿಧ್ವನಿಸಿತು.

ತಾಯಿ ಭುವನೇಶ್ವರಿಯ ಸುಂದರವಾದ ತೈಲ ಚಿತ್ರ, ಮಲ್ಲಿಗೆ, ಸೇವಂತಿಗೆ ಹೂವಿನ ಹಾರಗಳಿಂದ ಸಭಾಂಗಣದಲ್ಲಿ ರಾರಾಜಿಸುತ್ತಿತ್ತು. ಪುಟಾಣಿಗಳ ಅ,ಆ,ಇ,ಈ... ಕನ್ನಡ ಅಕ್ಷರಮಾಲೆಯಿಂದ ಶುರುವಾಗಿ, ಎಲ್ಲಾದರೂ ಇರು ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕವಿವಾಣಿಗೆ ತಾಳ, ಲಯಬದ್ಧವಾಗಿ ನರ್ತಿಸಿ ಕನ್ನಡಾಂಬೆಯನ್ನು ರಂಗದ ಮೇಲೆ ಪ್ರತ್ಯಕ್ಷವಾಗಿ ಆಹ್ವಾನಿಸಿದಂತಹ ಅನುಭವ. ಕಾವೇರಿಯ ವೈಯ್ಯಾರ, ಜೋಗದ ಜಲಪಾತದ ಧುಮುಕುವಿಕೆ ಒಂದೆಡೆಯಾದರೆ, ಕಾಡಿನ ಕಿರಾತಕರ ರೂಪದಲ್ಲಿ ಕನ್ನಡಾಂಬೆಯನ್ನು ಪೂಜಿಸುವ ಗಂಭೀರ ನೃತ್ಯ ಇನ್ನೊಂದೆಡೆ. ಇದೆಲ್ಲದಕ್ಕೂ ಕಲಶವಿಟ್ಟಂತೆ ಕಂಸಾಳೆ, ಭೂತಕೋಲ ಹಾಗೂ ಹುಲಿವೇಷ ನೃತ್ಯಗಳನ್ನೊಳಗೊಂಡ ಅಮೋಘ ನೃತ್ಯ ದರ್ಶನ ಮರೆಯಲಾಗದ ಕ್ಷಣಗಳಾಗಿದ್ದವು. ಅ

**ಸಖಾರಾಮ ಉಪ್ಪೂರು**

# ದೆಹಲಿ ಕರ್ನಾಟಕ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ-2015 ಪುರಸ್ಕೃತರು

## ಬಿ.ಎನ್. ರಾವ್

ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) 1971ರಲ್ಲಿ ಅಸಿಸ್ಟೆಂಟ್ ಲೈಬ್ರೇರಿಯನ್ ಆಗಿ ಸೇರಿಕೊಂಡ ಶ್ರೀ ಬಿ.ಎನ್. ರಾವ್ ಅವರು 30 ವರುಷಗಳ ಸೇವೆ ಸಲ್ಲಿಸಿ 2001 ರಲ್ಲಿ ನಿವೃತ್ತರಾದರು. ಕೋಲಾರ್ ಗೋಲ್ಡ್ ಫೀಲ್ಡ್ಸ್‌ನಿಂದ 40 ಕಿ.ಮೀ. ದೂರದಲ್ಲಿರುವ ಅಪ್ಪೇನ ಹಳ್ಳಿಯಲ್ಲಿ 1939ರಲ್ಲಿ ತಂದೆ ಭೀಮರಾವ್ ಮತ್ತು ತಾಯಿ ಲಕ್ಷ್ಮಮ್ಮನವರ ಐದನೇ ಮಗನಾಗಿ ಜನಿಸಿದ ಅವರು ಕಡು ಬಡತನದಲ್ಲಿಯೇ ಬೆಳೆದರು. ಕನ್ನಡ ಮಾಧ್ಯಮದಲ್ಲಿಯೇ ಓದಿ ಎಸ್.ಎಸ್.ಎಲ್.ಸಿ.ಯಲ್ಲಿ ಮೊದಲನೇ ದರ್ಜೆಯಲ್ಲಿ ಪಾಸಾದ ಶ್ರೀ ರಾವ್ ಅವರು ಪಿ.ಯು.ಸಿ.ವರೆಗೆ ಬೆಂಗಳೂರಿನಲ್ಲಿ ಓದಿದರು.

ಶ್ರೀ ರಾವ್ ಅವರು ಆ ಸಮಯದ ಹೆಸರಾಂತ ಲೇಖಕರಾದ ತ.ರಾ.ಸು, ಅ.ನ.ಕೃ., ಕುವೆಂಪು, ಎಸ್.ಎಲ್. ಭೈರಪ್ಪ ಇವರ ಕಾದಂಬರಿಗಳು, ಸಣ್ಣಕತೆಗಳು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಡಿ.ವಿ.ಜಿ. ಅವರ ಗೀತೆಗಳು, ನಿಬಂಧಗಳು ಗೋಕಾಕ್, ತೀ.ನಂ.ಶ್ರೀ ಕಂಠಯ್ಯನವರ ಕೃತಿಗಳನ್ನೂ ಓದತೊಡಗಿದರು. ಶ್ರೀ ರಾವ್ ಅವರು ಹೈಸ್ಕೂಲ್‌ನಲ್ಲಿದ್ದಾಗ ಎರಡು ನಾಟಕಗಳನ್ನು ಬರೆದು ಸ್ವತಃ ನಿರ್ದೇಶನ ಮಾಡಿದರು. ಇವು ಆಕಾಶವಾಣಿಯಲ್ಲಿ ಪ್ರಸಾರವಾದುವು. ಇವರು ಕನ್ನಡ ಚರ್ಚಾಕೂಟಗಳಲ್ಲೂ ಭಾಗವಹಿಸುತ್ತಿದ್ದರು. ಶ್ರೀ ರಾವ್ ಅವರು ಸ್ಕೌಟ್‌ನಲ್ಲಿ ಭಾಗವಹಿಸಿ ಮೈಸೂರು, ದಾವಣಗೆರೆ ಮುಂತಾದ ಸ್ಥಳಗಳಿಗೆ ಶಾಲೆಯ ಕಡೆಯಿಂದ ಹೋಗಿದ್ದರು. ಇವರು ಕಟ್ಟಾ ಕನ್ನಡ ಅಭಿಮಾನಿಯಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರು ಹೆಸರಾಂತ ಕವಿ, ಕಾದಂಬರಿಕಾರರು, ಬುದ್ಧಿಜೀವಿಗಳ ಭಾಷಣಗಳು, ನಾಟಕ, ಕವಿಗೋಷ್ಠಿ, ಚರ್ಚೆ ಹೀಗೆ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳನ್ನು ನೋಡಲು ಹೋಗುತ್ತಿದ್ದರು.

ನಂತರ ಅವರ ಭಾವನವರಾದ ವಾಸುದೇವ ರಾವ್ ಶ್ರೀ ರಾವ್ ಅವರನ್ನು ದೆಹಲಿಗೆ ಕರೆಸಿ ಓದಿಸಿದರು. ಬಿ.ಎಸ್ಸಿ. ಆದ ನಂತರ ಅವರಿಗೆ ಕೆಲಸ ಸಿಕ್ಕಲಿಲ್ಲ. ಮುಂದೆ ಅವರು ಎಂ.ಎ. ಮಾಡಲು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದರು. ವಿಶ್ವವಿದ್ಯಾಲಯದಲ್ಲಿ ಕನ್ನಡ ಡಿಪಾರ್ಟ್‌ಮೆಂಟ್ ಬಹಳ ಚುರುಕಾಗಿ ಕೆಲಸ ಮಾಡುತ್ತಿತ್ತು. ಎಂ.ಎ. ಮುಗಿಸಿಕೊಂಡು ಮತ್ತೆ ಕೆಲಸಕ್ಕೆ ಪರದಾಟ. ಕರ್ನಾಟಕದಲ್ಲಿ ಎಲ್ಲೂ ಕೆಲಸ ಸಿಗಲಿಲ್ಲ. ಆಗ ಪ್ರೊಫೆಶನಲ್ ಕೋರ್ಸ್ ಆದ ಲೈಬ್ರೆರಿ ಸೈನ್ಸ್ ಓದಲು ಅವರು ದೆಹಲಿಯ ಹೆಸರಾಂತ 'ಲೈಬ್ರೇರಿ ಸೈನ್ಸ್ ಇನ್ಸ್ಟಿಟ್ಯೂಟ್'ಗೆ ಬಂದು ಸೇರಿಕೊಂಡರು. ಮುಂದೆ ಲೈಬ್ರೇರಿ ಸೈನ್ಸ್ ಆದ ನಂತರ ಒಂದು ಪುಟ್ಟ ಕೆಲಸ ಅವರಿಗೆ ಕುರುಕ್ಷೇತ್ರ ಯುನಿವರ್ಸಿಟಿಯಲ್ಲಿ ಸಿಕ್ಕಿತು. ಮುಂದೆ ಶ್ರೀ ರಾವ್ ಅವರು ಮಾಸ್ಟರ್ ಆಫ್ ಲೈಬ್ರೇರಿ ಸೈನ್ಸ್ ಕೂಡಾ ಓದಿದರು.

ಜೆಎನ್‌ಯುನಲ್ಲಿ ಕೆಲಸ ಮಾಡುತ್ತಿದ್ದಂತೆ ಸಮಾಜಶಾಸ್ತ್ರದಲ್ಲಿ ಶ್ರೀ ರಾವ್ ಅವರು ಎಂ.ಫಿಲ್. ಮಾಡಿದರು. ಅವರ ಕೆಲಸದ ಅವಧಿಯಲ್ಲಿ ದೆಹಲಿ ಸ್ಟೇಟ್ ಬುಕ್ ಸೆಲ್ಲರ್ಸ್ ಪಬ್ಲಿಷರ್ಸ್ ಅಸೋಸಿಯೇಶನ್ 1997ರಲ್ಲಿ ಅವರ ಕೆಲಸವನ್ನು ಮೆಚ್ಚಿ 'ಬೆಸ್ಟ್ ಯುನಿವರ್ಸಿಟಿ ಲೈಬ್ರೇರಿಯನ್' ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿದೆ. 'ದೆಹಲಿ ಕನ್ನಡಿಗ' ಪತ್ರಿಕೆ ಪ್ರತಿ ವರ್ಷವೂ ತಪ್ಪದೆ ನಡೆಸುತ್ತಿದ್ದ ರಾಷ್ಟ್ರೀಯ ಕನ್ನಡ ಸಮ್ಮೇಳನಗಳಲ್ಲಿ ಅತ್ಯಂತ ಆಸಕ್ತಿಯಿಂದ ಭಾಗವಹಿಸುತ್ತಿದ್ದ ಶ್ರೀ ರಾವ್ ಅವರನ್ನು 1998ರಲ್ಲಿ ಸನ್ಮಾನ್ನಿಸಲಾಗಿತ್ತು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಶ್ರೀ ರಾವ್ ಅವರು 40 ವರುಷಗಳಿಂದ ಸಂಘದೊಡನೆ ಸಂಬಂಧವಿಟ್ಟುಕೊಂಡಿದ್ದಾರೆ. ಸಂಘದ ಎಲ್ಲ ಚಟುವಟಿಕೆಗಳಲ್ಲಿ, ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವೂ ಸೇರಿದಂತೆ, ಆಸಕ್ತಿಯಿಂದ ಭಾಗವಹಿಸಿದ್ದಾರೆ.

## ಕೆ. ದೇವಾನಂದ ಉಪಾಧ್ಯಾಯ

ಕರ್ನಾಟಕದ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಶ್ರೀ ಕೆ. ದೇವಾನಂದ ಉಪಾಧ್ಯಾಯರು ತಾನು ವಿಜ್ಞಾನವನ್ನು ಕಲಿತು ಮುಂದೆ ಸಂಶೋಧಕರಾಗ ಬಯಸಿದ್ದರು. ಶ್ರೀ ಉಪಾಧ್ಯಾಯರು ಕುಟುಂಬದ ಆರ್ಥಿಕ ಹೊರೆಯನ್ನು ನಿಭಾಯಿಸುವ ಹೊಣೆಯರಿತು ಪದವಿ ಪೂರೈಸಿ ತಕ್ಷಣ ಬ್ಯಾಂಕ್ ನೌಕರಿಗೆ ಸೇರಿಕೊಂಡರು.

ಕೈಗೊಂಡ ವೃತ್ತಿಯ ಮೇಲಿನ ಪ್ರೀತಿ ಮತ್ತು ನಿರಂತರ ಕಲಿಕೆ ಶ್ರೀ ಉಪಾಧ್ಯಾಯರನ್ನು ಸಿಂಡಿಕೇಟ್ ಬ್ಯಾಂಕಿನ ಮಹಾಪ್ರಬಂಧಕ ಹುದ್ದೆಗೆ ಏರಿಸಿದೆ. ವೃತ್ತಿಗೆ ಸೇರಿದ ಬಳಿಕವೇ ಕಾನೂನು ಪದವಿ, ಎಂ.ಬಿ.ಎ. ಮೊದಲಾದ ಉನ್ನತ ಪದವಿಗಳನ್ನು ಪಡೆದಿದ್ದು ಅವರ ನಿರಂತರ ಕಲಿಕೆಗೆ ಸಾಕ್ಷಿ. ದೆಹಲಿಗೆ ನಾಲ್ಕನೇ ಬಾರಿಗೆ ವರ್ಗಾವಣೆಗೊಂಡು ಬಂದ ಶ್ರೀ ಉಪಾಧ್ಯಾಯರು ಆರಂಭದಲ್ಲೇ ಜನ ಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ನೀಡಬೇಕೆನ್ನುವ ಸರ್ಕಾರದ ದೂರದೃಷ್ಟಿಗೆ ಪೂರಕವಾಗಿ 'ಸಿಂಡ್ ಸೇವಿಂಗ್ ಕ್ಲಿನಿಕ್' ಎಂಬ ವಿನೂತನ ಕಾರ್ಯಕ್ರಮವನ್ನು ದೆಹಲಿಯ 50 ವಸತಿ ಪ್ರದೇಶಗಳಲ್ಲಿ ಬಿರುಸಿನಿಂದ ಆರಂಭಿಸಿದ್ದರು. ಅದರಂತೆ 'ಮನೆ ಬಾಗಿಲಿಗೆ ಬ್ಯಾಂಕ್' ಎಂಬ ಅವರ ಕನಸು ದೆಹಲಿಯ ವಿವಿಧ ಶಾಖೆಗಳ ಮೂಲಕ ಕ್ಷಿಪ್ರ ಕಾರ್ಯಾಚರಣೆ ನಡೆಸಿತ್ತು.

ಶ್ರೀ ಉಪಾಧ್ಯಾಯರು ಕರ್ನಾಟಕ ರಾಜ್ಯ ಜೇಸಿಸ್‌ನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮುಂಬಯಿಯಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಕರ್ನಾಟಕ ಎಲ್ಲಾ ಎಂಟು ಪ್ರಶಸ್ತಿಗಳನ್ನು ಬಗಲಿಗೇರಿಸಿದ್ದು ಇಂದಿಗೂ ಒಂದು ದಾಖಲೆ. ಅವರು ಮುಂದೆ ಭಾರತೀಯ ಜೂನಿಯರ್ ಛೇಂಬರ್‌ನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಅವರು ನಿವೃತ್ತಿಯ ನಂತರ ಮಣಿಪಾಲ್ ಅಕಾಡೆಮಿ ಆಫ್ ಬ್ಯಾಂಕಿಂಗ್, ಬೆಂಗಳೂರುನಲ್ಲಿ ಅಸೋಸಿಯೇಟ್ ಡೀನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆ ಪ್ರತಿ ವರ್ಷ 5000 ಪದವೀಧರರನ್ನು 21 ಬ್ಯಾಂಕ್‌ಗಳಿಗೆ ನೂತನ ಜವಾಬ್ದಾರಿಯುತ ಅಧಿಕಾರಿಗಳಾಗಿ ಆಗಲು ಒಂದು ವರ್ಷದ ತರಬೇತಿ ನೀಡುವುದು. ಅಲ್ಲದೆ ಈ ಸಂಸ್ಥೆಯು ಶ್ರೀ ಉಪಾಧ್ಯಾಯರಿಗೆ 2013ರಲ್ಲಿ 'ಅತ್ಯುತ್ತಮ ಶಿಕ್ಷಕ' ಮತ್ತು 2014ರಲ್ಲಿ 'ಅತ್ಯುತ್ತಮ ಜನ ನಿರ್ವಾಹಕ' ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಸಿಂಡಿಕೇಟ್ ಬ್ಯಾಂಕಿನ ರಾಷ್ಟ್ರೀಯ ವಿನಿಮಯ ಕಂಪೆನಿಯ ಮಹಾಪ್ರಬಂಧಕರಾಗಿ ಶ್ರೀ ಉಪಾಧ್ಯಾಯರು ಗಲ್ಫ್ ರಾಷ್ಟ್ರ ದೋಹಾ ಕತಾರ್‌ಗೆ ತೆರಳಿದ ಸಂದರ್ಭದಲ್ಲಿ ಅಲ್ಲಿ ಕರ್ನಾಟಕ ಸಂಘ ಮತ್ತು ತುಳು ಕೂಟಗಳನ್ನು ಸ್ಥಾಪಿಸಿ ಅದರ ಬೆಳವಣಿಗೆಗೆ ಕಾರಣರಾಗಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ದೆಹಲಿಯಲ್ಲಿದ್ದಾಗ ಶ್ರೀ ಉಪಾಧ್ಯಾಯರು ದೆಹಲಿಯ ಕನ್ನಡಪರ ಚಟುವಟಿಕೆಗಳಿಗೆ ನೀಡಿದ ಬೆಂಬಲ ಅತ್ಯಂತ ವಿಶಿಷ್ಟವಾದದ್ದು. ತಮ್ಮ ಎಲ್ಲಾ ಕಾರ್ಯಚಟುವಟಿಕೆಗಳ



## ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು

| | |
|---|---|
| 1990 | ಶ್ರೀ ಎಚ್.ಸಿ. ವಿಶ್ವೇಶ್ವರಯ್ಯ, ಪ್ರೊ. ಎ. ರಮೇಶ್ ರಾವ್, ಶ್ರೀ ರಾಮಚಂದ್ರ ಕಲ್ಲಪ್ಪ ಪೂಜಾರ್, ಶ್ರೀ ಭೀಮರಾವ್ ಮುರಗೋಡ, ಶ್ರೀ ಬಾ. ಸಾಮಗ |
| 1992 | ಶ್ರೀ ಎ. ಗವಿಸಿದ್ದಪ್ಪ |
| 1993 | ಶ್ರೀ ಎಚ್.ಸಿ. ರಾಜಗೋಪಾಲ ಮತ್ತು ಶ್ರೀ ಜಾಫರ್ ಸೈಫುಲ್ಲ |
| 1994 | ಶ್ರೀ ಬಿ.ವಿ. ಸತ್ಯವತಿ, ಶ್ರೀ ಟಿ.ಎಂ. ಶಂಭು |
| 1995 | ಶ್ರೀ ಪಿ.ವಿ. ಇಂದಿರೇಶನ್, ಡಾ. ಎನ್.ಶೇಷಗಿರಿ, ಶ್ರೀ ಮ್ಯಾಕ್ಸ್‌ವೆಲ್ ಫೆರೇರಾ |
| 1996 | ಶ್ರೀ ಕೆ.ಎನ್. ಭಟ್, ಶ್ರೀಮತಿ ಅನುನಾಯಕ್ ಮತ್ತು ಶ್ರೀ ರಂಗನಾಥ್ |
| 1997 | ಶ್ರೀ ಎಂ.ಕೆ. ಧರ್ಮರಾಜ್, ಶ್ರೀ ಎನ್.ಎಸ್. ರಾಮಚಂದ್ರನ್, ಪ್ರೊ. ವಿ.ಆರ್. ಪಂಚಮುಖಿ ಹಾಗೂ ಡಾ. ಸಂಪತ್ ಕುಮಾರ್ |
| 1999 | ಡಾ. ಎಲ್.ಎಸ್. ಭಟ್ ಮತ್ತು ಡಾ. ಸಿ.ಆರ್. ಹಿರೇಮಠ್ |
| 2000 | ಶ್ರೀ ವಾಸುದೇವ ಆತ್ರಿ, ಶ್ರೀ ಎಚ್.ವೈ. ಶಾರದಾಪ್ರಸಾದ್, ಡಾ.ಪಿ.ವಿ. ಇಂದಿರೇಶನ್ |
| 2001 | ಡಾ. ಪಿ.ಡಿ. ಶೆಣೈ ಮತ್ತು ಶ್ರೀಮತಿ ಸರಳಾ ಗೋಪಾಲನ್ |
| 2002 | ಡಾ. ಎನ್.ಆರ್. ಶೆಟ್ಟಿ |
| 2003 | ಲೆಫ್ಟಿನೆಂಟ್ ಜನರಲ್ ಬೋಪಣ್ಣ, ಶ್ರೀಮತಿ ಸುಧಾರಾವ್, ಕಲಾವಿದ ಅರುಣ್ |
| 2004 | ಶ್ರೀ ಬಿ.ಎಸ್. ಕಲ್ಲೂರು, ಶ್ರೀ ಸಿ.ವಿ. ಗೋಪಿನಾಥ್ |
| 2005 | ಪ್ರೊ. ಎಚ್.ಎಸ್. ಶಿವಪ್ರಕಾಶ್ |
| 2006 | ಶ್ರೀ ವಿ.ವಿ. ಭಟ್ |
| 2007 | ಶ್ರೀ ಅಲೆನ್ ಸಿ.ಎ. ಫೇರರಾ |
| 2008 | ಡಾ. ಅಹಲ್ಯಾ ಚಿಂತಾಮಣಿ |
| 2009 | ಶ್ರೀ ಐ. ರಾಮಮೋಹನ ರಾವ್ ಮತ್ತು ಶ್ರೀಮತಿ ನೇತ್ರಾವತಿ ಮಯ್ಯ |
| 2010 | ಶ್ರೀ ಅಗ್ರಹಾರ ಕೃಷ್ಣಮೂರ್ತಿ |
| 2011 | ಶ್ರೀ ಎನ್.ಜೆ. ಕಾಮತ್, ಶ್ರೀ ಎಂ. ವೀರಪ್ಪ ಮತ್ತು ಶ್ರೀಮತಿ ಸುಮಿತ್ರಾ ರಾವ್ |
| 2012 | ಶ್ರೀ ಕೆ.ಐ. ಭಟ್, ಶ್ರೀ ಎಸ್.ಎಸ್. ಜವಳಿ, ಶ್ರೀ ಎಚ್.ಎಸ್. ಕುಲಕರ್ಣಿ ಮತ್ತು ಶ್ರೀಮತಿ ಸಾವಿತ್ರಿ ಶಾಸ್ತ್ರಿ |
| 2013 | ಶ್ರೀ ಎಸ್.ಕೆ. ಕುಲಕರ್ಣಿ, ಶ್ರೀಮತಿ ಮಾಲಾ ಹೊನ್ನತ್ತಿ |
| 2014 | ಶ್ರೀ ಟಿ.ಎಂ. ಶಿರೂರು, ಶ್ರೀ ಕೆ.ಆರ್. ಸುಬ್ಬಣ್ಣ |
| 2015 | ಶ್ರೀ ಬಿ.ಎನ್. ರಾವ್, ಶ್ರೀ ಕೆ. ದೇವಾನಂದ ಉಪಾಧ್ಯಾಯ |

ನಡುವೆಯೂ ಅವರು ಸದಾ ನಗುನಗುತ್ತಾ ಕನ್ನಡಿಗರ ಆಗು-ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇದಕ್ಕೆ ನಿದರ್ಶನವೆಂಬಂತೆ ಅವರು ದೆಹಲಿಯ ರಾಜೇಂದ್ರ ನಗರ ಕನ್ನಡ ಬಳಗದ ಅಧ್ಯಕ್ಷರಾಗಿದ್ದರು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ಉದ್ಘಾಟನಾ ಸಮಾರಂಭದ ಸ್ಮರಣ ಸಂಚಿಕೆಯ ಗೌರವ ಸಂಪಾದಕರಾಗಿ ಆ ಸಂಚಿಕೆಗೆ ಅವರು ರೂ. 18 ಲಕ್ಷಕ್ಕೂ ಮೀರಿ ಜಾಹೀರಾತು ಸಂಗ್ರಹಿಸಿದ್ದು ಒಂದು ವಿಶಿಷ್ಟ ಸಾಧನೆ. ಸಂಘದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳನ್ನು ಉತ್ತೇಜಿಸುವ ಅವರ ಕಳಕಳಿ ಉಲ್ಲೇಖನೀಯ.

ಶ್ರೀ ಉಪಾಧ್ಯಾಯರ ಕೊಡುಗೆಗಳಿಗೆ ಬೆಂಗಳೂರಿನ ಕಲಾನಿಕೇತನ ಸಂಸ್ಥೆಯು 'ಸಾಧನಾ ಚೈತ್ರ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅ

*ಸಖಾರಾಮ ಉಪ್ಪೂರು*




### ನಮ್ಮ ಕರ್ನಾಟಕ-ಆಧಾರಿತ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಘದ ಕಲಾವಿದರು.

**ದೆಹಲಿ ಪೋಲಿಸ್ ಮಹಿಳಾ ತಂಡ :** ಜಯಲಕ್ಷ್ಮೀ, ಲೀಲಾದೇವರಾಜ್, ಸ್ವಾತಿ, ಜಯಾ ಶ್ರೀನಿವಾಸ, ಗಾನವಿ, ತೃಪ್ತಿ, ಶಾಂತಿ, ದಿವ್ಯ, ಕಾವ್ಯಶ್ರೀ – **ನೃತ್ಯ ಸಂಯೋಜನೆ :** ಜಯಲಕ್ಷ್ಮೀ ರಾಜಕುಮಾರ್

**ಕಿನ್ನಾರಿ ತಂಡ :** ಮಾನಸಿ, ಕೀರ್ತನ, ಯಶಸ್, ಧರ್ಮ, ಶ್ರೀಜನ್, ಅಯಿಶಾ – **ನೃತ್ಯ ಸಂಯೋಜನೆ :** ಸ್ವಪ್ನಾ ವೆಂಕಟೇಶ್

**ಚಿನ್ನಾರಿ ತಂಡ :** ಅವನಿ ನೆಲ್ಲಿ, ಓಶಿನ್ ಮುರಗೋಡ, ಸಾನ್ವಿ ಕುಮಾರ್, ಧನ್ವಿನ್, ಸುಮಂತ್, ಚೈತ್ರ – **ನೃತ್ಯ ಸಂಯೋಜನೆ :** ಸವಿತಾ ನೆಲ್ಲಿ

**ಕಾವೇರಿ ತಂಡ :** ರಮ್ಯ, ರಚನಾ, ಪ್ರಿಯಾಂಕ, ನಂದಿನಿ, ಪುಷ್ಪ – **ನೃತ್ಯ ಸಂಯೋಜನೆ :** ಸುಷ್ಮಿತಾ ಜಗದೀಶ್

**ಗೆಳೆಯರ ಬಳಗ ತಂಡ :** ಶರಣ್, ಚಿರಂತನ್, ಅಶ್ವಿನ್, ಸಿಲೆಸ್ಟಿನ್, ಡಿಯೋನ್, ನವಾಜ್, ಮಯೂರ್, ದರ್ಶನ್, ಗೌತಮ್ – **ನೃತ್ಯ ಸಂಯೋಜನೆ :** ಸುಪ್ರಿತಾ ಜಗದೀಶ್

**ಹೊಂಗಿರಣ ತಂಡ :** ತಾರಾ ರಮೇಶ್, ಸೀಮಾ ಬಿರಾದಾರ, ಪ್ರವೀಣಾ ಕೋಟೆ, ಕೃಷ್ಣರಾಜ್, ಎಸ್. ಹರಿಪ್ರಿಯ, ಮಹಾದೇವ – **ನೃತ್ಯ ಸಂಯೋಜನೆ :** ಆಶಾಲತ ಎಂ

**ಹೊಂಗಿರಣ (ಮಕ್ಕಳು) ತಂಡ :** ಓಶೋ ಮುರಗೋಡ, ಭುವನ್, ಸೂರಜ್, ರಿಷಿ, ಧನುಶ್ ಗೌಡ, ವಿಶ್ರುತ್ ಕೋಟೆ, ಅಥರ್ವ್ **ನೃತ್ಯ ಸಂಯೋಜನೆ :** ಆಶಾಲತ ಎಂ

**ಹೊಂಬೆಳಕು ತಂಡ :** ಕೃಷ್ಣ, ಋತ್ವಿಕ್ ನೆಲ್ಲಿ, ಲಿಖಿತ್, ರಕ್ಷಿತಾ, ಶ್ರೀವಿದ್ಯಾ, ವಿಸ್ಮಯ್ **ನೃತ್ಯ ಸಂಯೋಜನೆ :** ಆಶಾಲತ ಎಂ

**ಕರ್ನಾಟಕ ಭವನ ಫೇಸ್-2(ಹುಡುಗರು) ತಂಡ :** ರಜತ್, ಶ್ರೀಜನ್, ಶ್ರೀಧನ್, ಶಶಾಂಕ್, ಹರಿ, ದೀಪ್ತಿ – **ನೃತ್ಯ ಸಂಯೋಜನೆ :** ಶಕುಂತಲಾ ನಾಯಕ್

**ರಂಗತರಂಗ (ಮಕ್ಕಳು) ತಂಡ :** ಲಕ್ಷ್ಯನಾಗರಾಜ, ಅಭಿಷೇಕ್, ಕ್ಷಿತಿಜ್, ನವ್‌ಯುಗ್, ಶಾಶ್ವತ್, ರಜತ್ – **ನೃತ್ಯ ಸಂಯೋಜನೆ :** ಶೋಭಾ ನಾಗರಾಜ


**ಕರ್ನಾಟಕ ಭವನ ಫೇಸ್-2(ಹುಡುಗಿಯರು) ತಂಡ :** ಪೃಥ್ವಿ, ಅನನ್ಯ, ಲಿಖಿತಾ, ಭಾಗ್ಯಶ್ರೀ, ಜಯಶ್ರೀ, ಶ್ರುತಿ – **ನೃತ್ಯ ಸಂಯೋಜನೆ :** ಸಿ.ಪಿ. ಭಾರ್ಗವಿ

**ಶ್ರೀಗಂಧ ತಂಡ :** ಸವಿತಾ ನೆಲ್ಲಿ, ಶೈಲಾ ಕುಮಾರ್, ನೇತ್ರಾವತಿ ಕುಮಾರ್, ಆಶಾಲತಾ ಎಂ., ಸುಮಿತಾ ಮುರಗೋಡ, ರಶ್ಮಿ – **ನೃತ್ಯ ಸಂಯೋಜನೆ :** ಸವಿತಾ ನೆಲ್ಲಿ

**ರಂಗತರಂಗ (ಮಹಿಳೆಯರು) ತಂಡ :** ಶಿಲ್ಪಾ ಹರಿಪ್ರಿಯ, ಶೋಭಾ ನಾಗರಾಜ, ಪ್ರತಿಭಾ ಗೌಡ, ರೂಪಶ್ರೀ, ದೀಪಾ, ಹೇಮಶ್ರೀ – **ನೃತ್ಯ ಸಂಯೋಜನೆ :** ಶೋಭಾ ನಾಗರಾಜ

**ದೆಹಲಿ ತುಳು ಸಿರಿ ತಂಡ :** ಪ್ರದೀಪ್ ಕುಮಾರ್, ಮನೀಶ್ ಪೂಜಾರಿ, ಸುಖೇಶ್ ಶೆಟ್ಟಿ, ಕಾರ್ತಿಕ್ ಶೆಟ್ಟಿ, ಸಾಯಿ ಅಮಾರ್ತ್ಯ ಶೆಟ್ಟಿ, ಅಶ್ವಿತಾ ಶೆಟ್ಟಿ, ಮಿತೇಶ್ ಶೆಟ್ಟಿ – **ನೃತ್ಯ ಸಂಯೋಜನೆ :** ಡಾ. ಸಾಯಿಪ್ರಶಾಂತಿ ಶೆಟ್ಟಿ

# ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠದ ಉದ್ಘಾಟನೆ



## ಕನ್ನಡವು ದೇಶದ ಅತ್ಯುತ್ತಮ ಭಾಷೆಗಳಲ್ಲಿ ಒಂದು

ದೆಹಲಿ ಕರ್ನಾಟಕ ಸಂಘದ ನಿರಂತರ ಪ್ರಯತ್ನದಿಂದ ಕರ್ನಾಟಕ ಸರಕಾರದ ವಾರ್ಷಿಕ ಅನುದಾನದಿಂದ ನವದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಭಾರತೀಯ ಭಾಷಾ ಕೇಂದ್ರದಲ್ಲಿ ಸ್ಥಾಪಿತಗೊಂಡ ಕನ್ನಡ ಅಧ್ಯಯನ ಪೀಠದ ಉದ್ಘಾಟನೆಯು ಖ್ಯಾತ ಇತಿಹಾಸತಜ್ಞ ಮತ್ತು ಸಂಶೋಧಕರಾದ ಪ್ರೊ. ಷ. ಶೆಟ್ಟರ್ ಅವರ ವಿಶೇಷ ಉಪನ್ಯಾಸದೊಂದಿಗೆ ಇದೇ ನವಂಬರ್ 26ರಂದು ನಡೆಯಿತು.

ಹಿರಿಯ ವಿಜ್ಞಾನಿ ಹಾಗೂ ಜೆಎನ್‌ಯುವಿನ ಕುಲಾಧಿಪತಿ ಪ್ರೊ. ಕೆ. ಕಸ್ತೂರಿ ರಂಗನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡಿ, ದೇಶದ ಅತ್ಯುತ್ತಮ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಪೀಠ ಆರಂಭವಾಗುತ್ತಿರುವ ಕುರಿತು ಸಂತಸ ವ್ಯಕ್ತಪಡಿಸಿದರು. ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸಲು ದೆಹಲಿ ಕರ್ನಾಟಕ ಸಂಘವು ಮಾಡಿದ ಪ್ರಯತ್ನವನ್ನು ಅವರು ಶ್ಲಾಘಿಸಿದರು. ರಾಜ್ಯ ಸರಕಾರ ಮತ್ತು ಜೆಎನ್‌ಯು ಸೇರಿ ಪೀಠವನ್ನು ಒಂದು ಮಾದರಿ ಪೀಠವನ್ನಾಗಿ ಮಾಡಲು ತಾನು ಎಲ್ಲ ರೀತಿಯಲ್ಲೂ ಸಹಕರಿಸುವೆ ಎಂದರು.

ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿವಿಯ ಕುಲಪತಿ ಡಾ. ಸುಧೀರ್ ಸೊಪೋರಿ ಅವರು ಮಾತಾಡಿ, ಸದ್ಯದಲ್ಲಿಯೇ ಕನ್ನಡದೊಂದಿಗೆ ಒಡಿಯಾ, ಮರಾಠಿ, ಬಾಂಗ್ಲಾ ಮತ್ತು ಅಸ್ಸಾಮೀ ಭಾಷೆಗಳು ಭಾರತೀಯ ಭಾಷಾ ಕೇಂದ್ರಕ್ಕೆ ಸೇರ್ಪಡೆಯಾಗಲಿದ್ದು, ಈ ಕೇಂದ್ರವನ್ನು ಒಂದು ಸ್ಕೂಲ್ ಆಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ರೆಕ್ಟರ್ ಡಾ. ಸುಧಾ ಪೈ ಮತ್ತು ಡೀನ್ ಡಾ. ರೇಖಾ ರಾಜನ್ ಮಾತನಾಡಿದರು. ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು. ಕರ್ನಾಟಕದ ಮಹಿಳಾ ಮತ್ತು ಮಹಿಳಾ ಕಲ್ಯಾಣ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರ ಅನುಪಸ್ಥಿತಿಯಲ್ಲಿ ಅವರು ಕಳುಹಿಸಿದ ಸಂದೇಶವನ್ನು ಶ್ರೀ ಸಖಾರಾಮ ಉಪ್ಪೂರು ಅವರು ಸಭೆಗೆ ಓದಿ ತಿಳಿಸಿದರು.

ಹಿರಿಯ ವಿದ್ವಾಂಸರು, ಶಿಕ್ಷಣ ತಜ್ಞರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಅನೇಕ ಕನ್ನಡಿಗರು ಈ ಸಮಾರಂಭದಲ್ಲಿ ಭಾಗವಹಿಸಿ ಆಧುನಿಕ ಕಾಲದಲ್ಲಿ ಕನ್ನಡ ಭಾಷೆಯಲ್ಲಿ ಉನ್ನತ ಅಧ್ಯಯನಕ್ಕಾಗಿ ಸ್ಥಾಪಿತಗೊಂಡ ಈ ಪೀಠದ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾದರು. ಮಾಜಿ ಸಚಿವ ಶ್ರೀ ಪಿ.ಜಿ.ಆರ್. ಸಿಂಧ್ಯಾ, ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಎನ್.ಜೆ. ಕಾಮತ್, ಜೆಎನ್‌ಯುನಲ್ಲಿ ಪ್ರೊಫೆಸರ್ ಆಗಿರುವ ವಿದ್ವಾಂಸ, ಕವಿ, ಲೇಖಕ ಪ್ರೊ. ಎಚ್.ಎಸ್. ಶಿವಪ್ರಕಾಶ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷೆ ಶ್ರೀಮತಿ ಎಸ್.ಸಿ. ಹೇಮಲತ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು, ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಿದರು.

ಉದ್ಘಾಟನಾ ಸಮಾರಂಭದ ನಂತರ ಬೆಂಗಳೂರಿನ ಯಕ್ಷ ಕಲಾ ಅಕಾಡೆಮಿಯವರಿಂದ ವೀರ ಅಭಿಮನ್ಯು ಯಕ್ಷಗಾನ ಪ್ರಸಂಗದ ಪ್ರದರ್ಶನವು ನಡೆಯಿತು. ಅ

***ಬಾಲಕೃಷ್ಣ ನಾಯ್ಕ್ ಡಿ.***

# ಕನ್ನಡ ಅಧ್ಯಯನ ಪೀಠಕ್ಕೆ ಹಿರಿಯ ವಿದ್ವಾಂಸರ ಹಾರೈಕೆಗಳು

***ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಈಚೆಗೆ ಆರಂಭವಾದ ಕನ್ನಡ ಅಧ್ಯಯನ ಪೀಠದ ಉದ್ಘಾಟನಾ ಸಂದರ್ಭದಲ್ಲಿ ಕನ್ನಡದ ಅನೇಕ ಹಿರಿಯ ಬರೆಹಗಾರರು ಶುಭ ಹಾರೈಸಿ ಬರೆದ ಕೆಲವು ಪತ್ರಗಳ ಆಯ್ದ ಭಾಗಗಳನ್ನು ನೀಡಲಾಗಿದೆ. ಈ ಮಹನೀಯರ ಕನ್ನಡ ಕಾಳಜಿ, ಕೈ ಸೇರಿದ ಆಮಂತ್ರಣಕ್ಕೆ ತಕ್ಷಣವೇ ಉತ್ತರ ಬರೆಯುವ ಉತ್ಸಾಹ ನಮಗೆಲ್ಲ ಮಾದರಿಯಾಗಲಿ– ಸಂಪಾದಕ***

ಈ ದಿನ ಅಧಿಕೃತವಾಗಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವು ಆರಂಭವಾಗುತ್ತಿದೆ. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿರುವ ಕುಲಾಧಿಪತಿಗಳಾದ ಪ್ರೊ. ಕೆ. ಕಸ್ತೂರಿ ರಂಗನ್ ಅವರಿಗೂ, ಪ್ರಖ್ಯಾತ ಸಂಶೋಧಕರಾದ ಎಸ್. ಶೆಟ್ಟರ್ ಅವರಿಗೂ ನಾನು ಅಭಿನಂದಿಸಲು ಬಯಸುತ್ತೇನೆ. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಇಂತಹ ಮಹತ್ವದ ಯೋಜನೆಯೊಂದು ಅನುಷ್ಠಾನಗೊಳ್ಳುತ್ತಿರುವುದು ಕನ್ನಡದ ಸಾಂಸ್ಕೃತಿಕ ಲೋಕದ ಹಿರಿಮೆಯಾಗಿದೆ. ಇದು ಡಾ. ಪುರುಷೋತ್ತಮ ಬಿಳಿಮಲೆ ಅವರ ನೇತೃತ್ವದಲ್ಲಿ ಉತ್ತಮವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

2000 ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ಕನ್ನಡ ಭಾಷೆ ಭಾರತೀಯ ಭಾಷೆಗಳಲ್ಲಿ ಬಹಳ ಮಹತ್ವದ ಸ್ಥಾನವನ್ನು ಹೊಂದಿದೆ. ಇಂತಹ ಭಾಷೆಯ ಚಾರಿತ್ರಿಕ ಅಧ್ಯಯನ ಬೆಳವಣಿಗೆ ಕುರಿತಂತೆ ಈ ಅಧ್ಯಯನ ಪೀಠವು ರಚನಾತ್ಮಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂಬ ಆಶಯ ನನ್ನದು. ಈ ದಿಸೆಯಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಭಾರತೀಯ ಭಾಷಾ ಕೇಂದ್ರವು ಕಾರ್ಯನಿರ್ವಹಿಸುತ್ತದೆ ಎಂದು ನಂಬಿದ್ದೇನೆ.

***ಉಮಾಶ್ರೀ***
***ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು, ಕರ್ನಾಟಕ ಸರ್ಕಾರ***

'ನಿಮ್ಮ ಪತ್ರ ತಲುಪಿತು, ಪುರುಷೋತ್ತಮ ಬಿಳಿಮಲೆಯವರ ಆಹ್ವಾನ, ಜವಾಹರಲಾಲ್ ವಿಶ್ವವಿದ್ಯಾಲಯಕ್ಕೆ–ಖುಷಿಯಾಗಿ ಬರುತ್ತಿದ್ದೆ, ಆದರೆ ಒಂದೂವರೆ ವರ್ಷದಿಂದ ತೀವ್ರ ಅನಾರೋಗ್ಯವಾಗಿದೆ. ಮನೆಯಲ್ಲಿ ಸಹಾ ಗಾಲಿ ಕುರ್ಚಿಯಲ್ಲಿ ಓಡಾಡುತ್ತಿದ್ದೇನೆ. ಆದ್ದರಿಂದ ಬರಲು ಸಾಧ್ಯವಿಲ್ಲವಾಗಿದೆ. ದಯವಿಟ್ಟು ಕ್ಷಮಿಸಿ. ತಮ್ಮ ಎಲ್ಲ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಕೋರುತ್ತೇನೆ'

***ಎಲ್.ಎಸ್. ಶೇಷಗಿರಿ ರಾವ್***
***ಪ್ರಖ್ಯಾತ ವಿಮರ್ಶಕರು, ಬೆಂಗಳೂರು.***

ಜೆಎನ್‌ಯು ವಿನಲ್ಲಿ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ನೀವು ನೇಮಕಗೊಂಡ ಸುದ್ದಿ ಗೊತ್ತಾದಾಗಲೇ ನಾನು ಪತ್ರ ಬರೆದು ಅಭಿನಂದಿಸುವ ಆತುರದಲ್ಲಿದ್ದೆ. ಆದರೆ ಅಷ್ಟರಲ್ಲಿ ಮನೆಯಲ್ಲಿ ಬಿದ್ದು ನನ್ನ ಬಲಗಾಲು ತೊಡೆಗೆ ಫ್ರಾಕ್ಚರ್ ಆಗಿ ಆಪರೇಶನ್ ಮಾಡಿಸಿಕೊಂಡು ಮಲಗಬೇಕಾಯಿತು. ಈಗ ಆರೋಗ್ಯ ಸ್ವಲ್ಪ ಸುಧಾರಿಸಿದ್ದು ಬಡಿಗೆ ಹಿಡಿದುಕೊಂಡು ಅಡ್ಡಾಡುತ್ತಿದ್ದೇನೆ. ದೆಹಲಿಯಲ್ಲಿ ಕನ್ನಡ ಅಧ್ಯಯನ ಪೀಠದ ಅವಶ್ಯಕತೆ ತುಂಬಾ ಇತ್ತು. ಕರ್ನಾಟಕ ಸರಕಾರಕ್ಕೂ ಒತ್ತಾಯ ತರುತ್ತಲೇ ಇದ್ದೆವು. ಕೊನೆಗೂ ಕನಸು ನನಸಾಯಿತು. ನಮ್ಮ ಮನಸ್ಸಿನಲ್ಲಿ ನಿಮ್ಮ ಹೆಸರೇ ಮೊದಲಿನಿಂದಲೇ ಇತ್ತು. ಅದೂ ಈಡೇರಿದಂತಾಯಿತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಕನ್ನಡಕ್ಕೆ ದೊರಕುವ ಎಲ್ಲ ಕಾರ್ಯಯೋಜನೆಗಳೂ ಕನ್ನಡ ಅಧ್ಯಯನ ಪೀಠದ ಮುಖಾಂತರ ಫಲಕಾರಿಯಾಗಲೆಂದು ತುಂಬು ಹೃದಯದಿಂದ ಹಾರೈಸುತ್ತೇನೆ'

***ಚೆನ್ನವೀರ ಕಣವಿ***
***ಹಿರಿಯ ಕವಿಗಳು, ಧಾರವಾಡ***

'ಕನ್ನಡ ಅಧ್ಯಯನ ಪೀಠದ ಮಹತ್ಕಾರ್ಯದ ವ್ಯಾಪ್ತಿಯನ್ನು ನಿಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದೀರಿ. ಅದು ಶ್ಲಾಘನೀಯ ಉದ್ದೇಶ. ಕನ್ನಡ ಸಾಹಿತ್ಯದ ವೈಶಾಲ್ಯದ ಮಹತ್ವವನ್ನು ದೇಶದ ಇತರ ಭಾಷಿಕರಿಗೆ ಹಾಗೂ ಪ್ರಪಂಚದ ಇತರ ದೇಶಗಳಿಗೆ ಶೃತಪಡಿಸುವುದು ಅಗತ್ಯ. ಅಲ್ಲಿ ನೀವು ಮಾಡುವ ಕೆಲಸ ಇಲ್ಲಿಯ ನಮ್ಮ ಜನ ತಿಳಿಯಬೇಕು. ಅದನ್ನು ತಿಳಿದು ಇಲ್ಲಿಯ ಜನ ಬದುಕಬೇಕು.

***ಡಾ. ಕೋ. ಚೆನ್ನಬಸಪ್ಪ***
***ನಿವೃತ್ತ ನ್ಯಾಯವಾದಿಗಳು, ಬೆಂಗಳೂರು***

'ಕನ್ನಡ ವಿವಿ ತೊರೆದಂದಿನಿಂದ ನೀವು ನವದೆಹಲಿ ಸೇರಿದ ನಂತರ ಜನ ನುಡಿಗಾಗಿ ಬಹಳಷ್ಟು ಕೆಲಸ ಮಾಡಿರುವಿರಿ. ಅವುಗಳಲ್ಲಿ ಇಂದು ನೀವು ಕೈಗೊಂಡಿರುವ ಈ ಕಾರ್ಯ ಪ್ರಮುಖವಾದುದು. ಕನ್ನಡ ಅಧ್ಯಯನ ಪೀಠವು ಕನ್ನಡ ಭಾಷೆಗೆ ರಾಜಧಾನಿಯಲ್ಲಿ ಹೆಚ್ಚಿನ ಸ್ಥಾನ ಮಾನ ತಂದು ಕೊಡಲಿ ಎಂದು ಹಾರೈಸುತ್ತೇನೆ'

***ನಾ. ಡಿ'ಸೋಜಾ***
***ಹಿರಿಯ ಸಾಹಿತಿಗಳು, ಸಾಗರ***

'ಕನ್ನಡ ಅಧ್ಯಯನ ಪೀಠದ ಮೂಲಕ ಕನ್ನಡ ಸಂಸ್ಕೃತಿಯನ್ನು ವಿಕಾಸಗೊಳಿಸುವ ಐತಿಹಾಸಿಕ ಕಾರ್ಯಯೋಜನೆಗಳು ರೂಪುಗೊಳ್ಳಲಿ ಎಂದಾಶಿಸುತ್ತೇನೆ'

***ಅರವಿಂದ ಜತ್ತಿ***
***ಅಧ್ಯಕ್ಷರು, ಬಸವ ಸಮಿತಿ, ಬೆಂಗಳೂರು***

'ನೀವು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಆಯ್ಕೆಯಾದುದು ಅರ್ಹತೆಗೆ ಸಿಕ್ಕ ವಿಷಯ. ನಿಮ್ಮನ್ನು ಆಯ್ಕೆ ಮಾಡಿದ ತಜ್ಞರ ಸಮಿತಿಗೂ, ವಿಶ್ವವಿದ್ಯಾಲಯಕ್ಕೂ ತಮಗೂ ಹಾರ್ದಿಕ ಅಭಿನಂದನೆಗಳು. ರಾಷ್ಟ್ರದ ಕೇಂದ್ರ ರಾಜಧಾನಿ ನವದೆಹಲಿಯಲ್ಲಿ ಭಾರತದ ಶ್ರೇಷ್ಠ ಭಾಷೆಗಳಲ್ಲಿ ಒಂದಾದ ಕನ್ನಡವನ್ನು ಬೆಳೆಸುವ ಕೆಲಸಗಳಲ್ಲಿ ನಿಮಗೆ ಖಂಡಿತಾ ಯಶಸ್ಸು ದೊರಕುತ್ತದೆ. ವಿಭಾಗವನ್ನು ಬೆಳೆಸಿ, ಶ್ರೇಷ್ಠ ಸಂಶೋಧನಾ ಕಾರ್ಯಗಳನ್ನು ಮುಂದುವರಿಸಿರಿ. ದೆಹಲಿಯಲ್ಲಿರುವ ಪ್ರಾಚೀನ ಸಂಗ್ರಹಾಲಯಗಳಲ್ಲಿರುವ ಹಸ್ತಪ್ರತಿ ದಾಖಲೆಗಳನ್ನು ಪರಿಶೀಲಿಸಿ ಅಪ್ರಕಟಿತವಾದುವುಗಳನ್ನು ಪ್ರಕಟಿಸಿ. ಕನ್ನಡ ವಿಭಾಗವನ್ನು ಶ್ರೇಷ್ಠ ಸೃಜನಶೀಲ ಕೇಂದ್ರವಾಗಿ, ಸಂಶೋಧನಾ ಕೇಂದ್ರವಾಗಿ ಬೆಳೆಸಿ, ಕನ್ನಡವನ್ನು ಇನ್ನೂ ಹೆಚ್ಚಾಗಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿ.

***ಡಾ. ಎಂ. ಚಿದಾನಂದಮೂರ್ತಿ***
***ಹಿರಿಯ ಸಂಶೋಧಕರು, ಬೆಂಗಳೂರು***

'ಹೊರನಾಡನ್ನೊಳಗೊಂಡು ನಾಡಿನಾದ್ಯಂತ 59ನೇ ಕನ್ನಡ ರಾಜ್ಯೋತ್ಸವ ಆಚರಿಸಿಕೊಳ್ಳುತ್ತಿರುವ ಈ ಶುಭ ಸಂದರ್ಭದಲ್ಲಿ ದೆಹಲಿಯಲ್ಲಿ ಕನ್ನಡ ಅಧ್ಯಯನ ಪೀಠದ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಔಚಿತ್ಯಪೂರ್ಣವಾದದ್ದು ಮತ್ತು ಸಮಸ್ತ ಕನ್ನಡಿಗರೂ ಹೆಮ್ಮೆ ಪಡುವಂಥ ವಿಚಾರ. ಶಾಸ್ತ್ರೀಯ ಭಾಷೆಯೆಂಬ ಅಗ್ರಗಣ್ಯ ಮಾನ್ಯತೆ ಪಡೆದ ಕನ್ನಡ ಭಾಷೆಯು ಈ ಅಧ್ಯಯನ ಪೀಠದ ಮುಖೇನ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸಹ ವಿಶೇಷ ಮನ್ನಣೆ ಪಡೆಯಬೇಕೆಂಬುದು ನಮ್ಮ ಹೆಬ್ಬಯಕೆ. ಕನ್ನಡದ ಅಭ್ಯುದಯಕ್ಕಾಗಿ ನನ್ನ ಸಹಕಾರ ಸದಾ ಇರುತ್ತದೆ'

***ಅನಂತ ಕುಮಾರ್***
***ಕೇಂದ್ರ ಸಚಿವರು***

'ನಾನು ಸದಾ ತಮ್ಮ ಜೊತೆಗೇ ಇದ್ದೇನೆ. ತಮ್ಮ ಈ ಸಾಹಸೋತ್ಕರ್ಷದ ಬೆಳವಣಿಗೆಯನ್ನು ಕಂಡು ತಮ್ಮ ತಂದೆ ತಾಯಿ ಪಟ್ಟಷ್ಟೇ ಸಂತೋಷ ಅಭಿಮಾನ ಪಟ್ಟಿರುವೆ. ಕನ್ನಡ ಕುರಿತಂತೆ ತಮ್ಮ ಯೋಚನೆ–ಯೋಜನೆಗಳೆಲ್ಲ ಸಾಕಾರಗೊಳ್ಳಲಿ ಎಂದು ಆಶಿಸುವೆ'

***ಪ್ರೊ. ಮ.ಗು. ಬಿರಾದಾರ***
***ನಿವೃತ್ತ ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ***

'ತಮ್ಮ ಸಮರ್ಥ ನೇತೃತ್ವ ದಲ್ಲಿ ಕನ್ನಡ ಇನ್ನಷ್ಟು ಎತ್ತರಕ್ಕೇರಲಿ ಎಂದು ಆಶಿಸುತ್ತೇನೆ'

***ಗೋ.ರು. ಚನ್ನಬಸಪ್ಪ***
***ಜಾನಪದ ವಿದ್ವಾಂಸರು, ಬೆಂಗಳೂರು***

'ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ'ದ ಕನ್ನಡ ಅಧ್ಯಯನ ಪೀಠದ ಉದ್ಘಾಟನೆ ನವಂಬರ 26ರಂದು ನಡೆಯುತ್ತಿರುವುದು ಬಹಳ ಸಂತೋಷದ ಸಂಗತಿ. ಕೊನೆಗೂ ದೆಹಲಿ ಕನ್ನಡಿಗರ ಬಹುದಿನಗಳ ಕನಸು ನನಸಾಗಿದೆ. ಅದರ ಸ್ಥಾಪಕ ಪ್ರಾಧ್ಯಾಪಕರಾಗಿ ಅದನ್ನು ವಿಶಿಷ್ಟವಾಗಿ ಭಿನ್ನವಾಗಿ ನೀವು ಕಟ್ಟುತ್ತೀರಿ ಎನ್ನುವುದು ನಮ್ಮೆಲ್ಲರ ವಿಶ್ವಾಸ. ನಿಮ್ಮ ಅನುಭವ, ಕರ್ತೃತ್ವ ಶಕ್ತಿ, ಪ್ರಾಮಾಣಿಕ ದುಡಿಮೆ, ಬಹುತ್ವದ ಚಿಂತನೆಗಳ ಮೂಲಕ ಈ ಕನ್ನಡ ಅಧ್ಯಯನ ಪೀಠ ಒಂದು ಜಾಗತಿಕ ಮಟ್ಟದ ಅಧ್ಯಯನ ಕೇಂದ್ರವಾಗಿ ಬೆಳೆಯಬಲ್ಲುದು ಎನ್ನುವ ನಂಬಿಕೆಯನ್ನು ಹೊಂದಿದ್ದೇನೆ .

ಕನ್ನಡದ ಕೆಲಸಗಳು ಎಲ್ಲ ಕಡೆ ಬಹುವಿಧಗಳಲ್ಲಿ ನಡೆಯುವುದು ಒಳ್ಳೆಯ ಬೆಳವಣಿಗೆ. ಬಿಡುವಿನಲ್ಲಿ ನಿಮ್ಮಲ್ಲಿಗೆ ಬರುತ್ತೇನೆ . ನಿಮ್ಮ ಸಂಸ್ಥೆಯು ನಮ್ಮೆಲ್ಲರ ಸಂಸ್ಥೆಯಾಗಿ ಬೆಳೆಯಲು ನಾವೆಲ್ಲಾ ಒಟ್ಟಿಗೆ ಕೆಲಸ ಮಾಡೋಣ?

***ಪ್ರೊ. ಬಿ.ಎ. ವಿವೇಕ ರೈ***
***ನಿವೃತ್ತ ಕುಲಪತಿಗಳು***
***ಕನ್ನಡ ವಿಶ್ವವಿದ್ಯಾಲಯ, ಮಂಗಳೂರು***

# ಕನ್ನಡಕ್ಕೆ ಅಂತಾರಾಷ್ಟ್ರೀಯವಾದ ಮನ್ನಣೆ ದೊರಕಿಸಿ ಕೊಡುವಲ್ಲಿ ಪೀಠ ಸಹಕರಿಸಲಿದೆ- ಡಾ. ಪುರುಷೋತ್ತಮ ಬಿಳಿಮಲೆ



*ಡಾ. ಪುರುಷೋತ್ತಮ ಬಿಳಿಮಲೆ ಅವರು ನವದೆಹಲಿಯ ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯದಲ್ಲಿ ಸ್ಥಾಪಿತವಾದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ನೇಮಕಗೊಂಡ ಸಂದರ್ಭದಲ್ಲಿ* **ಅಭಿಮತ***ದ ಸಂಪಾದಕ ಮಂಡಳಿಯ* ***ಚಂದ್ರಶೇಖರ್ ಎನ್.ಪಿ.*** *ಅವರೊಂದಿಗೆ ಅವರ ಹಿಂದಿನ ಅನುಭವಗಳು ಮತ್ತು ಮುಂದಿನ ಶೈಕ್ಷಣಿಕ ಮತ್ತು ಸಾಹಿತ್ಯಕ ಯೋಜನೆಗಳ ಬಗ್ಗೆ ನಡೆಸಿದ ಮಾತುಕತೆಯ ಆಯ್ದ ಭಾಗ.*

ಪ್ರಶ್ನೆ : ಸುಮಾರು ಎರಡು ದಶಕಗಳ ನಂತರ ಮತ್ತೆ ಕನ್ನಡ ಪ್ರಾಧ್ಯಾಪಕರಾಗಿ ನೀವು ನೇಮಕಗೊಳ್ಳುತ್ತಿರುವಿರಿ. ಈ ಸಂದರ್ಭವನ್ನು ನೀವು ಹೇಗೆ ಆನಂದಿಸುತ್ತಿರುವಿರಿ?

**ಡಾ. ಬಿಳಿಮಲೆ:** ಮತ್ತೆ ಕನ್ನಡದ ಕೆಲಸಗಳ ಕಡೆಗೆ ಬಂದಿರುವುದರಿಂದ ಸಹಜವಾಗಿ ತುಂಬ ಸಂತೋಷವಾಗುತ್ತಿದೆ. ಆದರೆ ಇದು ಸಂತೋಷದಿಂದ ಸಂಭ್ರಮಿಸುವ ಕಾಲವಲ್ಲ. ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯವೊಂದರಲ್ಲಿ ಕನ್ನಡ ಪೀಠವನ್ನು ಕಟ್ಟುವ ಹೊಸ ಜವಾಬ್ದಾರಿಯನ್ನು ಅತ್ಯಂತ ತ್ವರಿತಗತಿಯಲ್ಲಿ ನಿಭಾಯಿಸಲೇಬೇಕಾದ ಒತ್ತಡ ನನ್ನ ಮೇಲಿದೆ. ಸದ್ಯ ನನಗಿರುವ ಸೇವಾವಧಿ ಬಹಳ ಕಡಿಮೆಯದು, ವಿಶ್ವವಿದ್ಯಾಲಯದಲ್ಲಿ ಪೀಠವನ್ನು ಹೇಗೆ ಬೆಳೆಸಬೇಕೆಂಬುದರ ಬಗೆಗೆ ಒಂದು ಸಿದ್ಧಮಾದರಿಯಿಲ್ಲ, ಜೊತೆಗೆ ಕರ್ನಾಟಕ ಸರಕಾರದ ಅನುದಾನವೂ ಸೀಮಿತವಾದುದು. ಈ ಎಲ್ಲಾ ಮಿತಿಗಳ ನಡುವೆ ಕೆಲಸ ಮಾಡುತ್ತ ಪೀಠದ ಉಪಯುಕ್ತತೆಯನ್ನು ತೋರಿಸಲೇಬೇಕಾದ ಅನಿವಾರ್ಯತೆಯಲ್ಲಿ ಸದ್ಯ ಕೆಲಸ ಮಾಡುತ್ತಿದ್ದೇನೆ.

ಪ್ರಶ್ನೆ : ನಿಮ್ಮ ಬಾಲ್ಯ ಮತ್ತು ಶಾಲಾದಿನಗಳನ್ನು ಕುರಿತು ಒಂದೆರಡು ಮಾತು ಹೇಳುವಿರಾ?

**ಡಾ. ಬಿಳಿಮಲೆ:** ಪಶ್ಚಿಮ ಘಟ್ಟದ ಭಾಗವಾದ ಬಂಟಮಲೆಯಲಿ ನಾನು ಬೆಳೆದದ್ದು ಜಿಗಣೆಗಳೊಡನೆ. ತಿಳುವಳಿಕೆ ಮೂಡುವ ಸಂದರ್ಭದಲ್ಲಿ ಆಗಾಗ ಭೇಟಿ ಮಾಡುತ್ತಿದ್ದದ್ದು ದಲಿತ ವರ್ಗಕ್ಕೆ ಸೇರಿದ್ದ ಭೂತ ಕಟ್ಟುವ ಬೀರ ಅಜಿಲಾಯ ಮತ್ತು ಬೊಳಿಯ ಅಜಿಲಾಯ. ಹಗಲು ಹೊತ್ತಿನಲ್ಲಿ ಅಸ್ಪೃಶ್ಯರಾಗಿದ್ದ ಅವರು ರಾತ್ರಿ ಹೊತ್ತಿನಲ್ಲಿ ದೈವಗಳಾಗಿ ನಾವೆಲ್ಲ ಬದುಕುತ್ತಿದ್ದ ಇಡೀ ಸಮಾಜದ ಮೇಲೆ ಹಿಡಿತ ಸಾಧಿಸುತ್ತಿದ್ದರು. ನಾನು ಓದುತ್ತಿದ್ದ ಕೂತ್ಕುಂಜ ಶಾಲೆಯಲ್ಲಿ ಸಣ್ಣಣ್ಣ ಮಾಸ್ತರರು ದಿನಾ ಸಾಯಂಕಾಲ ರಾಮಾಯಣ, ಮಹಾಭಾರತಗಳ ಕತೆ ಹೇಳುತ್ತಿದ್ದರು. ಅವರು ಹೇಳುವ ಕತೆಗಳಲ್ಲಿ ನಾಯಕನು ಯಾವಾಗಲೂ ವೈರಿಗಳನ್ನು ಸದೆಬಡೆದು ಗೆದ್ದು ಪಟ್ಟವೇರಿ ಸುಖವಾಗಿರುತ್ತಿದ್ದ. ಆದರೆ ಬೊಳ್ಯ ಮತ್ತು ಬೀರರು ಹೇಳುತ್ತಿದ್ದ ಕತೆಗಳಲ್ಲಿ ನಾಯಕರು ತಮ್ಮ ಮಧ್ಯವಯಸ್ಸಿನಲ್ಲಿ ಮಹತ್ ಸಾಧನೆ ಮಾಡಿ ಸತ್ತು ಹೋಗುತ್ತಿದ್ದರು. ಹೀಗೆ ನನ್ನ ಬಾಲ್ಯ ಮತ್ತು ಶಾಲೆ ಪರಸ್ಪರ ಎದುರು ಬದುರಾಗಿರುವ ಎರಡು ನಿರೂಪಣೆಗಳನ್ನು ಕೇಳಿಸಿತು. ಜೊತೆಗೆ ಒಮ್ಮೊಮ್ಮೆ ತಂದೆ ಪಂಜದಲ್ಲಿರುವ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ದೇವರನ್ನು ಬಹಳ ದೂರದಿಂದ ನೋಡಿ ಪ್ರಸಾದ ತೆಗೆದುಕೊಳ್ಳಬೇಕಾಗಿತ್ತು. ಆದರೆ ಕೂತ್ಕುಂಜದಲ್ಲಿ ನಡೆಯುತ್ತಿದ್ದ ಭೂತಾರಾಧನೆಯಲ್ಲಿ ಬೀರ ಅಜಲಾಯನು ಕುಣಿಯುತ್ತಾ ನನ್ನ ಬಳಿಗೆ ಬಂದು ನನ್ನ ತಲೆ ಮುಟ್ಟಿ ಏನೋ ಹೇಳಿ ಹೋಗುತ್ತಿದ್ದನು. ಈ ಆಪ್ತತೆ, ಮುಟ್ಟುವಿಕೆ ಮತ್ತು ಪ್ರೀತಿ ನನಗೆ ಮುಂದೆ ಇಷ್ಟವಾಗುತ್ತಾ ಹೋಯಿತು. ಈಗಲೂ ಅದರ ಪ್ರಯೋಜನವನ್ನು ನಾನು ಪಡೆಯುತ್ತಿದ್ದೇನೆ.

ಪ್ರಶ್ನೆ : ಕನ್ನಡ ಎಂ.ಎ. ಅಧ್ಯಯನವನ್ನು ಕರ್ನಾಟಕದಲ್ಲಿ ಮಾಡಿದವರಿಗಿಂತ ಭಿನ್ನವಾದ ಅನುಭವ ಮದರಾಸು ವಿ.ವಿ.ಯಲ್ಲಿ ಕನ್ನಡ ಎಂ.ಎ. ಮಾಡುವಾಗ ನಿಮಗೆ ಆಗಿದೆ ಅನಿಸುತ್ತಿದೆಯೇ? ಅಲ್ಲಿ ಮಾಡಿದ್ದರಿಂದ ನಿಮಗೆ ಅಧ್ಯಯನ ಮಾಡುವಾಗಲೇ ಕನ್ನಡೇತರ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಮನ್ವಯ, ಪರಸ್ಪರ ವಿಚಾರ ವಿನಿಮಯ ಸಾಧ್ಯವಾಗಲು ಅವಕಾಶವಾಗಿರಬಹುದಲ್ಲವೇ? ಅದು ಈಗ ಜೆಎನ್‌ಯು ವಿನಲ್ಲಿ ನಿಮಗೆ ಹೆಚ್ಚಿನ ನೆರವು ನೀಡಬಲ್ಲುದು ಅನ್ನಿಸುತ್ತದೆಯೇ?

**ಡಾ. ಬಿಳಿಮಲೆ:** ಅದು ನಿಜ. ಮದರಾಸಿನಲ್ಲಿ ನನಗೆ ದ್ರಾವಿಡ ಸಂಸ್ಕೃತಿಯ ಬಗೆಗೆ ಆಸಕ್ತಿ ಹುಟ್ಟಿತು. ಅಲ್ಲ ಸ್ವಲ್ಪ ತಮಿಳು ಕೂಡಾ ಕಲಿತಿದ್ದೆ. ಕರ್ನಾಟಕದಿಂದ ಹೊರಗಡೆಗೆ ಹೋಗಿ ಕಲಿಯುವ, ಬೇರೆ ಭಾಷೆಯ ವಿದ್ಯಾರ್ಥಿಗಳ ಜೊತೆಗೆ ಬೆರೆಯುವ ಅವಕಾಶ ಆಗ ಬಂದದ್ದು ಈಗ ಜೆಎನ್‌ಯು ವಿನಲ್ಲಿ ಪ್ರಯೋಜನಕ್ಕೆ ಬರುತ್ತಿದೆ. ಈಗಾಗಲೇ ತಮಿಳು ವಿದ್ಯಾರ್ಥಿಯೊಬ್ಬ ನನ್ನನ್ನು ಸಹಮಾರ್ಗದರ್ಶಕನಾಗಿ ಆಯ್ದುಕೊಂಡಿದ್ದಾನೆ.

ಪ್ರಶ್ನೆ : ಕನ್ನಡ ಎಂ.ಎ. ಮುಗಿಸಿ ಅದೆಷ್ಟೋ ಪದವೀಧರರು ಇಂದಿಗೂ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡಲಿಕ್ಕೂ ಅವಕಾಶ ಸಿಗದೆ ನಿರುದ್ಯೋಗಿಗಳಾಗಿದ್ದಾರೆ. ಬಹು ಮಂದಿಯಂತೂ ಅತ್ಯಂತ ನಿರಾಶೆಯಿಂದ ಕನ್ನಡ ಎಂ.ಎ. ಮಾಡಲೇಬಾರದಿತ್ತು ಅಂತ ಹೇಳ್ತಾರೆ. ಅಂತಹವರಿಗೆ ಇವೊತ್ತಿನ ಸಂದರ್ಭದಲ್ಲಿ ಏನು ಕಿವಿಮಾತು ಹೇಳುತ್ತೀರಿ?

**ಡಾ. ಬಿಳಿಮಲೆ:** ಇದು ಜಾಗತೀಕರಣದ ಕಾಲ. ಕನ್ನಡ ಕಲಿತವರು ಕೇವಲ ಉಪನ್ಯಾಸ ಹುದ್ದೆಗೆ ಕಾದು ಕುಳಿತುಕೊಳ್ಳಬಾರದು. ನಾನೂ ಕನ್ನಡ ಎಂ.ಎ. ಮಾಡಿ ವಿದೇಶೀ ಸಂಸ್ಥೆಯಲ್ಲಿ 15 ವರುಷ ಕೆಲಸ ಮಾಡಿಲ್ಲವೇ? ಹಾಗೇ ಕನ್ನಡ ಕಲಿತವರು ಎಲ್ಲ ಕಡೆ ಹರಡಿಕೊಂಡು ಕೆಲಸ ಮಾಡುತ್ತಾ ಬದುಕಲು ಕಲಿಯಬೇಕು. ಜೆಎನ್‌ಯು ವಿನಲ್ಲಿ ಪಿಎಚ್‌ಡಿ ಪದವಿ ಪಡೆದವನೊಬ್ಬ ಡಾಬಾ ನಡೆಸುತ್ತಿದ್ದಾನೆ. ತನ್ನ ಪರಿಧಿಗಳನ್ನು ವಿಸ್ತರಿಸಿಕೊಳ್ಳುವ ಕಲೆಯನ್ನು ಕನ್ನಡ ಕಲಿತವರು ರೂಢಿಸಿಕೊಳ್ಳಬೇಕು.

ಪ್ರಶ್ನೆ : ಹಿಂದೆಂದಿಗಿಂತಲೂ ಈಚಿನ ದಿನಗಳಲ್ಲಿ ಭಾಷಾಂತರ, ತೌಲನಿಕ ಅಧ್ಯಯನ ಮತ್ತು ಸಂಸ್ಕೃತಿ ಚಿಂತನೆ ಕ್ಷೇತ್ರಗಳು ವ್ಯಾಪಕವಾಗಿ ಬೆಳೆಯುತ್ತಿವೆ. ರಾಷ್ಟ್ರ ರಾಜಧಾನಿಯಲ್ಲಿದ್ದುಕೊಂಡು ಈ ಕ್ಷೇತ್ರಗಳಲ್ಲಿ ಕನ್ನಡವನ್ನು ಇನ್ನೂ ಹೆಚ್ಚಿಗೆ ವಿಕಾಸಗೊಳ್ಳುವುದಕ್ಕೆ ಏನಾದರೂ ಯೋಜನೆಗಳು ಅಂದರೆ, ಸೆಮಿನಾರ್, ಕಾನ್ಫರೆನ್ಸ್ ಗಳನ್ನು ಆಯೋಜಿಸುವ ಯೋಚನೆ ಇದೆಯೇ?

**ಡಾ. ಬಿಳಿಮಲೆ:** ಇದೆ. ಕನ್ನಡ ಅಭಿಜಾತ ಪರಂಪರೆಗೆ ಸೇರಿದ ಕೃತಿಗಳು ಹಿಂದಿ ಮತ್ತು ಇಂಗ್ಲಿಷಿಗೆ ಹೋಗಲೇ ಬೇಕು. ತೌಲನಿಕ ಅಧ್ಯಯನವನ್ನು ಪ್ರೋತ್ಸಾಹಿಸುವ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನೂ, ಕೆಲವು ವಿಶೇಷ ಉಪನ್ಯಾಸಗಳನ್ನೂ ಆಯೋಜಿಸಲಾಗುವುದು.

ಪ್ರಶ್ನೆ : ಕನ್ನಡ ಸಂಶೋಧನೆ, ಹಳೆಗನ್ನಡ ಅಧ್ಯಯನಗಳ ಬಗ್ಗೆ ಇಂದಿನ ಯುವ ಜನತೆಗೆ ಆಸಕ್ತಿ ಆಕರ್ಷಣೆ ಬರುವಂತಹ ಕಾರ್ಯಕ್ರಮ ಏನನ್ನಾದರೂ ರೂಪಿಸುತ್ತೀರಾ?

**ಡಾ. ಬಿಳಿಮಲೆ:** ಕನ್ನಡ ಅಧ್ಯಯನ ಪೀಠದ ಉದ್ಘಾಟನಾ ಸಂದರ್ಭದಲ್ಲಿ ಪ್ರೊ. ಶೆಟ್ಟರ್ ಅವರು ಪ್ರಾಚೀನ ಕೃತಿಗಳನ್ನು ಆಧುನಿಕ ಕನ್ನಡಕ್ಕೆ ತಂದು, ಹೊಸ ತಲೆಮಾರನ್ನು ಪರಂಪರೆಯೊಡನೆ ಜೋಡಿಸಬೇಕಾಗಿದೆ ಎಂದದ್ದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ.

ಪ್ರಶ್ನೆ : ಬಹಳಷ್ಟು ಜನ ಕನ್ನಡ ಅಧ್ಯಾಪಕರಾಗಿರುವ ನನ್ನ ಸ್ನೇಹಿತರು "ಕನ್ನಡ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಕುಳಿತುಕೊಳ್ಳುವಂತೆ ಮಾಡುವುದೇ ಬಹಳ ಕಷ್ಟ. ಕನ್ನಡ ತರಗತಿಗಳಲ್ಲಿ ಅವರಿಗೆ ಆಸಕ್ತಿಯೇ ಇರುವುದಿಲ್ಲ" ಎಂದೆಲ್ಲ ಅಲವತ್ತುಕೊಳ್ಳುತ್ತಿರುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಕಲಿಯುವ ಆಸಕ್ತಿಯನ್ನು ಹುಟ್ಟಿಹಾಕುವ ಪ್ರಯತ್ನವನ್ನು ಹೇಗೆ ಮಾಡಬಹುದು?

**ಡಾ. ಬಿಳಿಮಲೆ:** ಮುಖ್ಯವಾಗಿ ಕನ್ನಡ ಪಾಠ ಮಾಡುವ ಅಧ್ಯಾಪಕರು, ತಮ್ಮನ್ನು ಹೊಸ ತಲೆಮಾರಿನ ಅಗತ್ಯಗಳಿಗೆ ಅನುಗುಣವಾಗಿ ಸಜ್ಜುಗೊಳಿಸಿಕೊಳ್ಳಬೇಕಾಗಿದೆ. ಜೊತೆಗೆ ಸಾಹಿತ್ಯವನ್ನು ಪಾಠ ಮಾಡುವ ಕ್ರಮದಲ್ಲಿ ಅಗತ್ಯ ಬದಲಾವಣೆಗಳನ್ನೂ ಮಾಡಿಕೊಳ್ಳಬೇಕು. ನೀವು ಹೇಳಿದ ಸಮಸ್ಯೆಯನ್ನೂ ನಾನೆಂದೂ ಎದುರಿಸಿಲ್ಲ.

ಪ್ರಶ್ನೆ : ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ನೀವು ದೆಹಲಿಗೆ ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕರಾಗಿ ಬಂದ ಸಂದರ್ಭದ ಕುರಿತು ತಿಳಿಸುತ್ತೀರಾ?

**ಡಾ. ಬಿಳಿಮಲೆ:** ಅನೇಕ ಕನಸುಗಳೊಂದಿಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡಿದ್ದೆ. ಆರಂಭಿಕ ಹಂತದಲ್ಲಿ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಬಹಳ ಕೆಲಸಗಳನ್ನೂ ಮಾಡಿದ್ದೆ. ಆದರೆ ವರುಷಗಳು ಸಾಗಿದಂತೆ ಬಗೆ ಬಗೆಯ ಒತ್ತಡಗಳನ್ನು ಇದಿರಿಸಬೇಕಾಯಿತು. ಬೇಸರ ಬಂದು ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ ದೆಹಲಿಗೆ ಬಂದೆ. ಮುಂದಿನ 16 ವರ್ಷಗಳನ್ನು ಮತ್ತೆ ಹೊಸದನ್ನು ಕಲಿಯುತ್ತಾ ಬದುಕಿದೆ.

ಪ್ರಶ್ನೆ : ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ನಿಮಗೆ ಹೊರನಾಡಿನಲ್ಲಿ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಇರುವ ಸವಾಲುಗಳು ಮತ್ತು ಅದನ್ನ ಸಾಕಾರಗೊಳಿಸಲಿಕ್ಕೆ ಕಂಡುಕೊಳ್ಳಬೇಕಾದ ಮಾರ್ಗಗಳ ಬಗ್ಗೆ ಚೆನ್ನಾಗಿ ಅರಿವಿದೆ. ಈ ನಿಟ್ಟಿನಲ್ಲಿ ಕನ್ನಡಕ್ಕಿರುವ ಸವಾಲುಗಳು ಮತ್ತು ಪರಿಹಾರ ಮಾರ್ಗಗಳೇನು?

**ಡಾ. ಬಿಳಿಮಲೆ:** ಮನಸ್ಸಿಲ್ಲದಿದ್ದರೂ ಗೆಳೆಯರ ಒತ್ತಾಯಕ್ಕೆ ಮಣಿದು, ರಾಜಧಾನಿಯಲ್ಲಿ ಕರ್ನಾಟಕದ ಧ್ವನಿಯನ್ನು ಗಟ್ಟಿಗೊಳಿಸಲು ಸಾಧ್ಯವಾದರೆ, ಕನ್ನಡದ ಋಣ ತೀರಿಸಲೊಂದು ಅವಕಾಶ ಅಂತ ಭಾವಿಸಿಕೊಂಡು ದೆಹಲಿ ಕರ್ನಾಟಕ ಸಂಘದ ಚುನಾವಣಾ ಕಣಕ್ಕಿಳಿದು, ಗೆದ್ದು ಚದುರಿ ಹೋಗಿದ್ದ ದೆಹಲಿ ಕನ್ನಡಿಗರನ್ನು ಒಂದೆಡೆಗೆ ತರುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದೆ. ಅಗಲೇ ಮೇಲೇಳುತ್ತಿದ್ದ ಹೊಸ ಕಟ್ಟಡದ ಕೆಲಸಗಳನ್ನು ಪೂರೈಸಲು ಹಣ ಸಂಗ್ರಹ ಆಗಬೇಕಿತ್ತು, ಮತ್ತು ರಾಜಧಾನಿಯಲ್ಲಿ ದುರ್ಬಲವಾಗಿರುವ ಕರ್ನಾಟಕದ ಧ್ವನಿಯನ್ನು ಕರ್ನಾಟಕ ಸಂಘದ ಮೂಲಕ ಬಲಗೊಳಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತು. ಕಾರ್ಯಕಾರೀ ಸಮಿತಿಯ ಸೂಕ್ತ ಮಾರ್ಗದರ್ಶನದಲ್ಲಿ ಮೇಲಿನ ಯೋಜನೆಗಳನ್ನು ಕಾರ್ಯಗತಗೊಳಿಸಲು ಶಕ್ತಿಮೀರಿ ದುಡಿದದ್ದು ತಮಗೆಲ್ಲಾ ತಿಳಿದೇ ಇದೆ. ಕಟ್ಟಡ ನಿರೀಕ್ಷಿತ ಅವಧಿಯಲ್ಲಿ ಎದ್ದು ನಿಂತಿತು. ಸಂಘ ನಡೆಸುತ್ತಿದ್ದ ವಿಚಾರ ಸಂಕಿರಣ ಮತ್ತಿತರ ಕಾರ್ಯಕ್ರಮಗಳಿಂದ ಸಂಘಕ್ಕೆ ವಿಶ್ವವಿದ್ಯಾಲಯವೊಂದರ ಆಯಾಮ ಬರತೊಡಗಿತು. ಅದೀಗ ಮತ್ತಷ್ಟು ಬೆಳೆದು ನಿರೀಕ್ಷಿತ ಫಲ ನೀಡುತ್ತಿದೆ.

ಪ್ರಶ್ನೆ : ಜೆಎನ್‌ಯು ವಿನಲ್ಲಿ ಕನ್ನಡ ಅಧ್ಯಯನ ಪೀಠದ ಮೊಟ್ಟ ಮೊದಲ ಪ್ರಾಧ್ಯಾಪಕರಾಗಿ ನೇಮಕಗೊಂಡ ನಂತರ ಹೊರನಾಡಿನಲ್ಲಿ ಕನ್ನಡವನ್ನು ಕಟ್ಟುವ ಗುರುತರವಾದ ಜವಾಬ್ದಾರಿ ನಿಮ್ಮ ಮೇಲಿರುತ್ತದೆ. ಈ ನಿಟ್ಟಿನಲ್ಲಿ ನೀವು ಯಾವುದಾದರೂ ಕಾರ್ಯಯೋಜನೆಗಳನ್ನು ಇಟ್ಟುಕೊಂಡಿದ್ದೀರಾ?

**ಡಾ. ಬಿಳಿಮಲೆ:** ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯಕ್ಕೆ ಏಷಿಯಾದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿಯೇ ಒಂದು ಮಹತ್ವದ ಸ್ಥಾನವಿದೆ. ಇಲ್ಲಿ ಭಾರತದ ಅನೇಕ ಭಾಷೆಗಳ ವಿದ್ಯಾರ್ಥಿಗಳು ವಿವಿಧ ಪದವಿಗಳಿಗಾಗಿ ಗಂಭೀರವಾಗಿ ಅಭ್ಯಾಸ ಮಾಡುತ್ತಾರೆ. ವಿವಿಧ ದೇಶಗಳ ನೂರಾರು ವಿದ್ಯಾರ್ಥಿಗಳೂ ಇಲ್ಲಿದ್ದಾರೆ. ಇವರೆಲ್ಲರ ಅಧ್ಯಯನಗಳು ಬಹುಮಟ್ಟಿಗೆ ಅಂತರಶಿಸ್ತೀಯವೂ ತೌಲನಿಕವೂ ಆಗಿರುತ್ತದೆ. ಇಂಥ ಕಡೆ ಕನ್ನಡಕ್ಕೊಂದು ಅಸ್ತಿತ್ವ ಇರಬೇಕಾದ್ದು ಅವಶ್ಯಕ. ಸುದೀರ್ಘ ಹಾಗೂ ಅತ್ಯಂತ ಸಂಪದ್ಭರಿತ ಇತಿಹಾಸ ಮತ್ತು ವರ್ತಮಾನವಿರುವ ಕನ್ನಡದ ಬಗ್ಗೆ ಇತರರಿಗೆ ತಿಳಿಸುವುದು ಇಂದಿನ ತುರ್ತು ಅಗತ್ಯಗಳಲ್ಲಿ ಒಂದು. ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯವಾದ ಒಂದು ಮನ್ನಣೆ ದೊರಕಿಸಿಕೊಡುವಲ್ಲಿ ಈ ಪೀಠ ವಿಶೇಷವಾಗಿ ಸಹಕರಿಸಲಿದೆ.

ಜೊತೆಗೆ ಕನ್ನಡದ ಆಂತರಿಕ ಸತ್ವವನ್ನು ಭಾರತದ ವಿವಿಧ ಭಾಷೆಗಳಿಗೆ ಮತ್ತು ಇಂಗ್ಲಿಷಿಗೆ ಸಮರ್ಥವಾಗಿ ಪರಿಚಯಿಸುವ ಕೆಲಸ ಸಮರೋಪಾದಿಯಲ್ಲಿ ನಡೆಯಬೇಕಾಗಿದೆ. ನಮ್ಮ ಪಂಪ, ನಾಗಚಂದ್ರ, ಜನ್ನ, ಅಲ್ಲಮ, ಬಸವ, ಅಕ್ಕ, ಹರಿಹರ, ಕುಮಾರವ್ಯಾಸ, ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ, ಅಡಿಗ, ಮೊದಲಾದ ಬರೆಹಗಾರರ ಬಗ್ಗೆ, ಯಕ್ಷಗಾನ, ಶ್ರೀಕೃಷ್ಣ ಪಾರಿಜಾತ, ಮಲೆ ಮಾದೇಶ್ವರ ಮಹಾಕಾವ್ಯ, ಮೊದಲಾದ ಸಶಕ್ತ ಜನಪದ ಪರಂಪರೆಗಳ ಬಗ್ಗೆ ಕರ್ನಾಟಕದ ಹೊರಗಿನ ಜನಕ್ಕೆ ಏನೇನೂ ತಿಳಿದಿಲ್ಲ. ಇದಕ್ಕಾಗಿ ಜೆಎನ್‌ಯು ಕನ್ನಡ ಪೀಠ ವಿಶೇಷವಾಗಿ ಶ್ರಮಿಸಲಿದೆ.

ಇದಕ್ಕಾಗಿ ಹಾಕಿಕೊಳ್ಳಬೇಕಾದ ಕೆಲವು ಕಾರ್ಯಯೋಜನೆಗಳ ಬಗ್ಗೆ ಚಿಂತಿಸಲಾಗುತ್ತಿದೆ. ಮುಖ್ಯವಾಗಿ ಅನುವಾದ, ತೌಲನಿಕ ಅಧ್ಯಯನ, ಮಹಿಳಾವಾದಿ ಚಿಂತನೆ ಮತ್ತು ಮೌಖಿಕ ಸಾಹಿತ್ಯವನ್ನು ಮುನ್ನೆಲೆಗೆ ತರಲು ಪ್ರಯತ್ನಿಸಲಾಗುವುದು. ಸಾಹಿತ್ಯದ ಅನುವಾದಗಳಿಗೆ ನಮ್ಮಲ್ಲಿ ಸಾಹಿತ್ಯ ಅಕಾಡೆಮಿ, ನೇಶನಲ್‌ಬುಕ್ ಟ್ರಸ್ಟ್ ಅಂಥ ಸಂಸ್ಥೆಗಳಿವೆ. ಆದರೆ ಸಾಹಿತ್ಯೇತರ ಕೃತಿಗಳ ಅನುವಾದಕ್ಕೆ ನಮ್ಮಲ್ಲಿ ಒಳ್ಳೆಯ ವೇದಿಕೆಗಳೇ ಇಲ್ಲ. ಹಾಗಾಗಿ ಮಂಜೇಶ್ವರ ಗೋವಿಂದ ಪೈ, ಶಂಭಾ ಜೋಷಿ, ಎ.ಎನ್. ಮೂರ್ತಿರಾಯ, ಜೀ.ಶಂ. ಪರಮಶಿವಯ್ಯ, ಕಾರಂತ–ಕುವೆಂಪು, ಜಿ.ಎಸ್. ಶಿವರುದ್ರಪ್ಪ, ಡಿ.ಆರ್. ನಾಗರಾಜ, ಮೊದಲಾದವರ ವಿಚಾರವಾದೀ ಬರೆಹಗಳು ಈ ದೇಶಕ್ಕೆ ತಿಳಿದೇ ಇಲ್ಲ. ಕಾರಣ, ವಿಚಾರ ಸಂಕಿರಣ, ಕಮ್ಮಟ, ಮತ್ತಿತರ ಮಾಧ್ಯಮಗಳ ಮೂಲಕ ಜನರನ್ನು ಇವರ ಕಡೆಗೆ ಸೆಳೆದು ಕನ್ನಡದ ಸೃಜನೇತರ ಬರೆಹಗಳು ಹಿಂದಿ, ಬಾಂಗ್ಲಾ ಮೊದಲಾದ ಭಾಷೆಗಳಿಗೆ ಹೋಗುವಂತೆ ಮಾಡಬೇಕೆಂಬಾಸೆ ಇದೆ. ಇದರ ಜೊತೆಗೆ ಕರ್ನಾಟಕದ ಮಹತ್ವದ ಕಲೆಗಳಾದ ಕಂಸಾಳೆ, ಯಕ್ಷಗಾನ, ದೊಡ್ಡಾಟ, ಡೊಳ್ಳು, ಅಂಟಿಗೆ ಪಂಟಿಗೆ, ಸಂಗ್ಯಾ ಬಾಳ್ಯಾ, ಗೊಂಬೆಯಾಟ, ತತ್ವ ಪದ ಮತ್ತಿತರವುಗಳನ್ನು ವಿದ್ವತ್ ವಲಯಕ್ಕೆ ಪರಿಚಯಿಸುವ

> **ಮುಖ್ಯವಾಗಿ ಅನುವಾದ, ತೌಲನಿಕ ಅಧ್ಯಯನ, ಮಹಿಳಾವಾದಿ ಚಿಂತನೆ ಮತ್ತು ಮೌಖಿಕ ಸಾಹಿತ್ಯವನ್ನು ಮುನ್ನೆಲೆಗೆ ತರಲು ಪ್ರಯತ್ನಿಸಲಾಗುವುದು**

ಕೆಲಸವನ್ನೂ ಮಾಡಲಾಗುವುದು. ಈ ಬಗೆಯ ಕೆಲಸಗಳಿಂದ ಕನ್ನಡ ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧಿಗೆ ಬಾರದಿರಲು ಸಾಧ್ಯವೇ ಇಲ್ಲ.

21ನೇ ಶತಮಾನದ ಅಗತ್ಯಗಳಿಗೆ ಕನ್ನಡವನ್ನು ನಾವು ಸಜ್ಜುಗೊಳಿಸದೇ ಹೋದರೆ, ನಮ್ಮ ಜವಾಬ್ದಾರಿಗಳಿಂದ ನಾವು ನುಣುಚಿಕೊಂಡಂತಾಗುತ್ತದೆ. ಈ ನಿಟ್ಟಿನಲ್ಲಿ ಜೆಎನ್‌ಯು ಕನ್ನಡ ಅಧ್ಯಯನ ಪೀಠ ಕೆಲಸ ಮಾಡಲು ಉದ್ದೇಶಿಸಿದೆ.

ಪ್ರಶ್ನೆ : ನೀವು ಕನ್ನಡದಲ್ಲಿ ಪಿಹೆಚ್‌ಡಿ. ಮಾಡಿದಾಗಿದ್ದ ಸಂಶೋಧನೆಯ ಗುಣಮಟ್ಟಕ್ಕೂ ಇಂದಿನ ಸಂಶೋಧನೆಗಳ ಗುಣಮಟ್ಟವನ್ನು ಗಮನಿಸಿದಾಗ ನಿಮಗೆ ಏನನ್ನಿಸುತ್ತದೆ. ಏನಾದರೂ ಸುಧಾರಣೆ ತರುವ ಪ್ರಯತ್ನ ಮಾಡುತ್ತೀರಾ?



**ಡಾ. ಬಿಳಿಮಲೆ:** ಈ ಕೆಲಸ ದೊಡ್ಡ ಮಟ್ಟದಲ್ಲಿ ಕರ್ನಾಟಕದಲ್ಲಿ ನಡೆಯಬೇಕಾಗಿದೆ. ಜೆಎನ್‌ಯು ವಿನಲ್ಲಿ ಸಂಶೋಧನೆ ಮಾಡುವ ವಿದ್ಯಾರ್ಥಿಗಳ ಗುಣಮಟ್ಟ ಕಾಪಾಡಿಕೊಳ್ಳುವ ಕೆಲಸವನ್ನು ಇಲ್ಲಿನ ವಾತಾವರಣವೇ ಮಾಡುತ್ತದೆ.

ಪ್ರಶ್ನೆ : ಮೂಲತ: ಜಾನಪದ ಹಿನ್ನೆಲೆಯವರಾದ ನೀವು ಜೆಎನ್‌ಯು ವಿನಲ್ಲಿದ್ದುಕೊಂಡು ಅಳಿವಿನ ಅಂಚಿನಲ್ಲಿರುವ ಜಾನಪದ ಸಾಹಿತ್ಯ ಪರಂಪರೆ ಹಾಗೂ ಕಲೆಗಳನ್ನು ಸಾಹಿತ್ಯದ ಮುಖ್ಯವಾಹಿನಿಗೆ ತರುವ ಕೆಲಸವನ್ನೇನಾದರೂ ಮಾಡುವ ಯೋಜನೆ ಹಾಕಿಕೊಂಡಿರುವಿರಾ?

**ಡಾ. ಬಿಳಿಮಲೆ:** ಸದ್ಯ ಜೆಎನ್‌ಯು ಗೆ ಕರ್ನಾಟಕ ಜಾನಪದವನ್ನು ಪರಿಚಯಿಸುವ ಕಾರ್ಯಕ್ರಮವೊಂದನ್ನು ಆಯೋಜಿಸುತ್ತಿದ್ದೇನೆ.

ಪ್ರಶ್ನೆ : ಹೊರನಾಡಿನಲ್ಲಿ ಮುಖ್ಯವಾಗಿ ದೆಹಲಿಯಲ್ಲಿ ಕನ್ನಡದ ಪ್ರಾತಿನಿಧ್ಯ ಕ್ಷೀಣಿಸಿದೆ ಎಂಬ ಅಭಿಪ್ರಾಯವನ್ನು ದಿಟ್ಟವಾಗಿ ಸಾರ್ವಜನಿಕ ವೇದಿಕೆಗಳಿಂದ ಹೊರ ಹಾಕುತ್ತಾ ಬಂದಿರುವ ನಿಮಗೆ ಸಿಕ್ಕಿರುವ ಈ ಶೈಕ್ಷಣಿಕ ಕ್ಷೇತ್ರದಲ್ಲಿನ ಉತ್ತಮ ಅವಕಾಶ ಬಳಸಿಕೊಂಡು ಹೊರನಾಡಿನಲ್ಲಿ ಕನ್ನಡ ಪ್ರಾತಿನಿಧ್ಯವನ್ನು ಬಲಗೊಳಿಸುವ ನಿಟ್ಟಿನಲ್ಲಿ ಏನಾದರೂ ಕೆಲಸ ಮಾಡು ಯೋಜನೆ ಇದೆಯೇ ?

**ಡಾ. ಬಿಳಿಮಲೆ:** ಕನ್ನಡ ಅತ್ಯಂತ ಸಶಕ್ತವಾದ ಮತ್ತು ಶ್ರೀಮಂತವಾದ ಭಾಷೆ. ಎಲ್ಲವನ್ನೂ ಬರಮಾಡಿಕೊಳ್ಳುವ ಕನ್ನಡ ಸಂಸ್ಕೃತಿಯ ಗುಣವೂ ಅನನ್ಯವಾದ್ದು. ಆದರೆ ಇದಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮನ್ನಣೆ ದೊರಕಲೇ ಇಲ್ಲ. ಡಾ. ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಇಡೀ ಕರ್ನಾಟಕ ಸಹಜವಾಗಿಯೇ ಸಂಭ್ರಮಿಸಿತು. ಆದರೆ ಕರ್ನಾಟಕ ಸಂಭ್ರಮಿಸಿದ ಹಾಗೆ ದೇಶ ಕಂಬಾರರ ಬಗೆಗೆ ಸಂಭ್ರಮಿಸಿತೇ? ರವೀಂದ್ರನಾಥ ಠಾಗೋರರ 150ನೇ ಹುಟ್ಟುಹಬ್ಬವನ್ನು ಈಚೆಗೆ ಒಂದು ಜಾಗತಿಕ ಉತ್ಸವವಾಗಿ ಆಚರಿಸಲಾಯಿತು. ದೆಹಲಿ, ಶಿಕಾಗೋ, ಮಾಸ್ಕೋ, ಲಂಡನ್, ಟೋಕಿಯೋ ಮತ್ತಿತರ ಮಹಾನಗರಗಳ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಠಾಗೋರರ ಬಗ್ಗೆ ಬಗೆಬಗೆಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಆದರೆ ಕುವೆಂಪು ಅವರಿಗೆ ನೂರು ತುಂಬಿದಾಗ ನಮಗೆ ಏನು ಮಾಡಲು ಸಾಧ್ಯವಾಯಿತು? ಅತ್ಯಂತ ಸತ್ವಭರಿತ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಕ್ತಿಯುತವಾದ ವೇದಿಕೆಯನ್ನು ನಿರ್ಮಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಬೇಂದ್ರೆ, ಮಾಸ್ತಿ, ಅಡಿಗ, ಲಂಕೇಶ್, ಕಾರಂತ, ನರಸಿಂಹ ಸ್ವಾಮಿ ನಮ್ಮ ದೇಶಕ್ಕೆ ಗೊತ್ತಿಲ್ಲ. ಜೊತೆಗೆ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ವಿದೇಶದ ಬಹಳ ವಿಶ್ವವಿದ್ಯಾಲಯಗಳಲ್ಲಿ ದಕ್ಷಿಣ ಏಷಿಯಾದ ಬಗ್ಗೆ, ಅದರಲ್ಲೂ ವಿಶೇಷವಾಗಿ ಹಿಂದಿ, ಬಾಂಗ್ಲಾ, ಪಂಜಾಬಿ, ಉರ್ದು ಮತ್ತು ತಮಿಳಿನ ಬಗ್ಗೆ ಬಗೆ ಬಗೆಯ ಅಧ್ಯಯನಗಳೂ ನಡೆಯುತ್ತಿವೆ. ಹೀಗಾಗಿ ಈ ಭಾಷೆಗಳಿಗೆ ಅಂತಾರಾಷ್ಟ್ರೀಯ ವಿದ್ವಾಂಸರ ಒಂದು ದೊಡ್ಡ ಪಡೆಯೇ ಇದ್ದು ಭಾಷಾಂತರ ಮತ್ತಿತರ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಆದರೆ ಕನ್ನಡಕ್ಕೆ ಅಂಥ ಭಾಗ್ಯ ಇನ್ನೂ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಹೊರನಾಡಿನಲ್ಲಿ ರಾಜ್ಯದ ಸಶಕ್ತ ಪ್ರತಿನಿಧೀಕರಣಕ್ಕೆ ನಾವೆಲ್ಲ ಹೊಸದಾಗಿ ದುಡಿಯಬೇಕಾಗಿದೆ. ಅ




# “ಕನ್ನಡದ ಪಠ್ಯಗಳನ್ನು ಭಾರತೀಯ ಭಾಷೆಗಳಿಗೆ ತರುವ ಕೆಲಸ ಮೊದಲು ಆಗಬೇಕು”

## **ಪ್ರೊ. ಷ. ಶೆಟ್ಟರ್** ಅವರ ವಿಶೇಷ ಉಪನ್ಯಾಸದ ಆಯ್ದ ಭಾಗ

“ಬಹಳಷ್ಟು ವರ್ಷಗಳ ಹಿಂದೆಯೇ ಕರ್ನಾಟಕವು ಅದರ ಭೌಗೋಳಿಕ ನೆಲೆಯ ಕಾರಣದಿಂದಾಗಿ ಹಲವಾರು ಭಾಷೆ, ಧರ್ಮ ಮತ್ತು ಸಂಸ್ಕೃತಿಯ ಸಂಗಮವಾಗಿತ್ತು. ಚಿತ್ರದುರ್ಗ ಜಿಲ್ಲೆಯ ಬೆಟ್ಟಗಳಲ್ಲಿರುವ ಮೌರ್ಯರ ಚಕ್ರವರ್ತಿ ಅಶೋಕನ ಕಾಲದ ಶಾಸನಗಳು, ಕ್ರಿಸ್ತಪೂರ್ವ ಮೂರನೇ ಶತಮಾನದಿಂದಲೂ ಕರ್ನಾಟಕದಲ್ಲಿ ಬ್ರಾಹ್ಮಿಲಿಪಿಯ ಪ್ರಯೋಗವನ್ನು ಮಾಡಿರುವ ಕುರುಹುಗಳಾಗಿವೆ. ಇಂತಹ ಬರಹ ರೂಪದ ಸಂದೇಶಗಳು ದಖ್ಖಣದಲ್ಲಿಯೇ ಮೊದಲು ಬಂದಿವೆ. ಕ್ರಿಸ್ತ ಪೂರ್ವ ಮೂರನೇ ಶತಮಾನದಿಂದ ಕ್ರಿಸ್ತಶಕ ಐದನೇ ಶತಮಾನದ ವರೆಗೆ ಕರ್ನಾಟಕದ ಜನರು ಪ್ರಾಕೃತ, ಸಂಸ್ಕೃತ ಮತ್ತು ಕನ್ನಡದೊಂದಿಗೆ ತನ್ನ ದಕ್ಷಿಣದ ಗಡಿಯಲ್ಲಿ ತಮಿಳಲ್ಲಿ ಮತ್ತು ಪಶ್ಚಿಮದ ಕರಾವಳಿಯಲ್ಲಿ ಕೊಂಕಣಿ ಮತ್ತು ತುಳು ಭಾಷೆಗಳ ಮೂಲಕ ಮಾತಾಡುತ್ತಿದ್ದರು.

ನಾಲ್ಕನೇ ಶತಮಾನದಲ್ಲಿ ಕನ್ನಡ ಲಿಪಿಯು ಸಂಸ್ಕೃತ ಭಾಷೆಯು ಚಲಾವಣೆಯಾಗುವಷ್ಟು ಬಲಶಾಲಿಯಾಗಿತ್ತು. ನಂತರ ತೆಲುಗು ಕೂಡಾ ಕನ್ನಡ ಲಿಪಿಯನ್ನೇ ಉಪಯೋಗಿಸಿತು. ನಾಗರಿ ಲಿಪಿಯು ಬರುವವರೆಗೆ ಅಂದರೆ ಏಳನೇ ಶತಮಾನದ ವರೆಗೆ ಸಂಸ್ಕೃತವು ಕನ್ನಡ ಲಿಪಿಯನ್ನೇ ಅವಲಂಬಿಸಬೇಕಾಗಿತ್ತು. ತೆಲುಗು ಏಳನೇ ಶತಮಾನದಿಂದ ಒಂದು ಸ್ವತಂತ್ರ ಭಾಷೆಯಾಗಿ ಬೆಳೆಯಲು ಆರಂಭವಾದರೂ 14ನೇ ಶತಮಾನದ ಮಧ್ಯದ ವರೆಗೆ ಕನ್ನಡದ ಲಿಪಿಯನ್ನೇ ಹಂಚಿಕೊಳ್ಳಬೇಕಾಗಿತ್ತು. ಆರಂಭದಲ್ಲಿ ಮರಾಠಿ ಭಾಷೆಯು ಗೋಚರಗೊಂಡಿರುವುದು ಈಗಿನ ಮಹಾರಾಷ್ಟ್ರದಲ್ಲಿ ಅಲ್ಲ ಬದಲು ದಕ್ಷಿಣ ಕರ್ನಾಟಕದ ಶ್ರವಣ ಬೆಳಗೊಳದಲ್ಲಿ ಎಂದರೆ ನಿಮಗೆಲ್ಲ ಆಶ್ಚರ್ಯವಾಗಬಹುದು.

> **ವ್ಯಾಸನ ಸಂಸ್ಕೃತದ ಮಹಾಭಾರತದ ನಂತರ ಭಾರತದ ಇತರ ಭಾಷೆಯಲ್ಲಿ ಬರೆದ ಮೊದಲ ಮಹಾಭಾರತವು ಪಂಪ ಭಾರತವೇ ಎಂಬ ಪ್ರಶ್ನೆ ಸಾಹಿತ್ಯದ ಎಲ್ಲಾ ಇತಿಹಾಸಕಾರರಿಗೆ ಆಸಕ್ತಿ ಹುಟ್ಟಿಸಬೇಕು.**

ಈಗಿನ ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿರುವ ಭಕ್ತಿ ಪಂಥದ ಶಬ್ದ ‘ವರ್ಕರಿ’ ಮತ್ತು ವಿಠಲನ ಆರಾಧನೆಯು ಮೊತ್ತ ಮೊದಲ ಬಾರಿ ಆರಂಭವಾಗಿರುವುದೇ ಕ್ರಮವಾಗಿ ಧಾರವಾಡ ಮತ್ತು ಶಿವಮೊಗ್ಗದಲ್ಲಿ ಆಗಿದೆ. ಹದಿನೈದು ಮತ್ತು ಹದಿನಾರನೇ ಶತಮಾನದಲ್ಲಿ ಮರಾಠಿಯು ಉತ್ತರ ಕರ್ನಾಟಕದಲ್ಲಿ ಎಷ್ಟೊಂದು ಆಳವಾಗಿ ಬೇರೂರಿತ್ತೆಂದರೆ ಮಧ್ಯಕಾಲದ ಕನ್ನಡದ ಕವಿಯೊಬ್ಬರು ಕುಮಾರವ್ಯಾಸ ಭಾರತ ಬರೆಯುವಾಗ ಮರಾಠಿ ಶಬ್ದಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾರೆ. ದಖ್ಖನಿ ಚಿತ್ರಕಲೆ ಮತ್ತು ಹಿಂದೂಸ್ಥಾನಿ ಸಂಗೀತದಂತೆ ಉರ್ದು ಭಾಷೆಯ ಮೂಲ ಕೂಡಾ ಬಿಜಾಪುರದ ಅದಿಲ್ ಷಾಹಿಗಳು. ಇವೆಲ್ಲದರ ತಪ್ಪು ಒಪ್ಪುಗಳ ಕುರಿತು ಚರ್ಚಿಸುವುದಾದರೆ ಅದು ಕರ್ನಾಟಕದ ಹೊರಗಿದ್ದು ಜೆಎನ್‌ಯುವಿನ ಕನ್ನಡ ಅಧ್ಯಯನ ಪೀಠದಲ್ಲಿ ವಿವಿಧ ವಿಷಯಗಳ ವಿದ್ವಾಂಸರ ನಡುವೆ ನಡೆದರೆ ಬಹಳ ಉತ್ತಮ ಎಂದೆನಿಸುತ್ತದೆ.

ಕನ್ನಡ ಸಾಹಿತ್ಯದ ಇತಿಹಾಸಕ್ಕೆ ಒಂಭತ್ತನೇ ಶತಮಾನದಲ್ಲಿ ಒಂದು ಸ್ಪಷ್ಟತೆ ಬಂದರೂ 10ನೇ ಶತಮಾನದ ನಂತರ ನಿರಂತರವಾಗಿ ಮುಂದುವರಿಯಿತು. ಕನ್ನಡದ ಕಾವ್ಯ, ಗದ್ಯ ಮತ್ತು ಇವೆರಡೂ ಬೆರೆತಿರುವ ಕನ್ನಡದ ಕೃತಿಗಳು ಒಂಭತ್ತನೇ ಶತಮಾನದ ಕವಿರಾಜ ಮಾರ್ಗ ಮತ್ತು ಹತ್ತನೇ ಶತಮಾನದ ವಡ್ಡರಾಧನೆ ಮತ್ತು ಆದಿಪುರಾಣಗಳ ಮೂಲಕ

ಪ್ರತಿನಿಧಿಸಲಾಗಿದೆ. ಹತ್ತರಿಂದ 21ನೇ ಶತಮಾನದ ವರೆಗಿನ ಕನ್ನಡ ಸಾಹಿತ್ಯದ ಇತಿಹಾಸದ ದಾಖಲೆಯು ವಿವಿಧ ಪ್ರಕಾರಗಳ ಸಾಹಿತ್ಯದ ಮೂಲಕ ನಮಗೆ ದೊರೆಯುತ್ತದೆ.

ರಾಮಾಯಣ, ಮಹಾಭಾರತ ಅಂತೆಯೇ ಭಾಗವತ ಕೂಡಾ ಕನ್ನಡದ ಪಾರಂಪಾರಿಕ ವಿದ್ವಾಂಸರ ಸಾಮಾನ್ಯ ಆಸಕ್ತಿಯಾಗಿತ್ತು. ಕನ್ನಡ ಕವಿಗಳು ಈ ಮಹಾಕಾವ್ಯಗಳಿಂದ ಪ್ರೇರಿತರಾಗಿ ಹೊಸದಾದ ರೀತಿಯಲ್ಲಿ ಬರೆದಿದ್ದಾರೆ. ಪಂಪನ ವಿಕ್ರಮಾರ್ಜುನ ವಿಜಯ, ರನ್ನನ ಗಧಾಯುದ್ಧ, ಕುಮಾರವ್ಯಾಸನ ಭಾರತ ಮತ್ತು ಲಕ್ಷ್ಮೀಶನ ಜೈಮಿನಿ ಭಾರತಗಳು ಜೈನ ಮತ್ತು ವೈಷ್ಣವ ಕವಿ ಪರಂಪರೆಯಲ್ಲಿ ಮಹಾಭಾರತ ಕಾವ್ಯವನ್ನು ವ್ಯಾಖ್ಯಾನಿಸಿದ ಉದಾಹರಣೆಗಳಾಗಿವೆ.

ವ್ಯಾಸನ ಸಂಸ್ಕೃತದ ಮಹಾಭಾರತದ ನಂತರ ಭಾರತದ ಇತರ ಭಾಷೆಯಲ್ಲಿ ಬರೆದ ಮೊದಲ ಮಹಾಭಾರತವು ಪಂಪ ಭಾರತವೇ ಎಂಬ ಪ್ರಶ್ನೆ ಸಾಹಿತ್ಯದ ಎಲ್ಲಾ ಇತಿಹಾಸಕಾರರಿಗೆ ಆಸಕ್ತಿ ಹುಟ್ಟಿಸಬೇಕು. ಮಹಾಭಾರತಕ್ಕೆ ತುಲನೆ ಮಾಡಿದರೆ ರಾಮಾಯಣವು ಹಳೆಯ ಮತ್ತು ಮಧ್ಯಕಾಲದ ಕವಿಗಳನ್ನು ಆಕರ್ಷಿಸಲಿಲ್ಲ. ಸುಮಾರು ಕ್ರಿ.ಶ. 1100ರ ಕಾಲದಲ್ಲಿ ಜೈನ ಕವಿ ಎರಡನೇ ನಾಗವರ್ಮನ ಕನ್ನಡದಲ್ಲಿ ಬಂದ ಮೊದಲ ರಾಮಾಯಣ, ಮಹಾಕಾವ್ಯಗಳ ಲೋಕದಲ್ಲಿ ಹೆಚ್ಚೇನು ಹೆಸರು ಮಾಡಲಿಲ್ಲ. ಹದಿನಾರನೇ ಶತಮಾನದಲ್ಲಿ ಮಾಧ್ವ ಕವಿಗಳು ರಾಮಾಯಣದ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವವರೆಗೆ ಯಾವುದೇ ಮಹತ್ವದ ರಚನೆಗಳು ಹುಟ್ಟಲಿಲ್ಲ. ಆದರೆ 16–17ರ ಶತಮಾನದಲ್ಲಿ ಕುಮಾರ ವಾಲ್ಮೀಕಿಯ ರಾಮಾಯಣ, ನರಹರಿಯ ತೊರವೆ ರಾಮಾಯಣ, 18ನೇ ಶತಮಾನದಲ್ಲಿ ಚಾಮರಾಜ ಅರಸನ ಚಾಮರಾಜೋಕ್ತಿವಿಲಾಸ, 19ನೇ ಶತಮಾನದಲ್ಲಿ ಮುದ್ದಣನ ಅದ್ಭುತ ರಾಮಾಯಣ, 20ನೇ ಶತಮಾನದಲ್ಲಿ ಕುವೆಂಪು ಅವರ ರಾಮಾಯಣ ದರ್ಶನ ಮತ್ತು 21ನೇ ಶತಮಾನದಲ್ಲಿ ವೀರಪ್ಪ ಮೊಯಿಲಿಯವರ ರಾಮಾಯಣ ಅನ್ವೇಷಣೆ ಈ ಅಂತರವನ್ನು ಕಡಿಮೆ ಮಾಡಿದೆ.

ಕನ್ನಡದ ಮಹಾಭಾರತ ಮತ್ತು ರಾಮಾಯಣಗಳಲ್ಲಿ ಮಧ್ಯಕಾಲದ ಕೊನೆವರೆಗೆ ಭಗವದ್ಗೀತೆಯಾಗಲೀ, ರಾಮನ ದೈವೀಕರಣವಾಗಲೀ ಮುಖ್ಯಸ್ಥಾನವನ್ನು ಪಡೆದಿರದೇ ಇರುವುದು ಆಸಕ್ತಿಯ ವಿಷಯವಾಗಿದೆ. ಆದರೆ ಮಹಾಕಾವ್ಯಗಳ ನಾಯಕರು ಕನ್ನಡದ ಕವಿಗಳಿಗಿಂತ ಶಿಲ್ಪಿಗಳ ಗಮನವನ್ನು ಹೆಚ್ಚು ಸೆಳೆದಿದ್ದಾರೆ ಎನ್ನಬಹುದು. ಯಾಕೆಂದರೆ ಬಾದಾಮಿ ಚಾಲುಕ್ಯರ ಕಾಲದ ದೇವಸ್ಥಾನಗಳ ಕಂಭಗಳಲ್ಲಿ ಮತ್ತು ಗೋಡೆಗಳಲ್ಲಿ ಮಹಾಕಾವ್ಯಗಳ ಕಥೆಯನ್ನು ಶಿಲ್ಪಗಳಲ್ಲಿ ಕಾಣಬಹುದು.

ನೆನಪುಗಳಲ್ಲಿ ಸಂಗ್ರಹಿಸಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟುವ ಮೌಖಿಕ ಸಾಹಿತ್ಯವು ಕನ್ನಡದಲ್ಲಿರುವ ಲಿಖಿತ ಸಾಹಿತ್ಯ ಭಂಡಾರಕ್ಕಿಂತಲೂ ಅಧಿಕವಿದೆ. ಕವಿರಾಜಮಾರ್ಗದಲ್ಲೂ ಉಲ್ಲೇಖಿಸಲಾದ ಜನಪದ ಸಾಹಿತ್ಯ ಮುಂದಿನ ಶತಮಾನಗಳಲ್ಲಿ ಮುಂದುವರಿದಿದೆ. ಜನಪದ ಸಾಹಿತ್ಯ ಎಷ್ಟು ಶ್ರೀಮಂತವಾಗಿದೆಯೆಂದರೆ ಬಹಳಷ್ಟು ವಿದ್ವಾಂಸರು ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳ ಜಾನಪದ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಅಲ್ಲದೇ ಸರಕಾರವು ಜಾನಪದ ಕಲೆ ಮತ್ತು ಸಾಹಿತ್ಯದ ಕೆಲಸಕ್ಕಾಗಿ ಪ್ರತ್ಯೇಕವಾದ ಒಂದು ವಿಶ್ವವಿದ್ಯಾಲಯವನ್ನೇ ತೆರೆದಿದೆ ಮತ್ತು ಪ್ರತ್ಯೇಕ ಜಾನಪದ ಅಕಾಡೆಮಿಯೂ ಇದೆ.

ಇವೆಲ್ಲಾ ಕನ್ನಡದ ಸಾಧನೆಗಳಾದರೆ, ಕನ್ನಡದ ಕೆಲವೊಂದು ಕೊರತೆಗಳನ್ನೂ ನಾವು ಗಮನಿಸಬೇಕಾಗುತ್ತದೆ. ಮುಖ್ಯವಾಗಿ ನಾವು ನಮ್ಮ ಅತ್ಯುತ್ತಮವಾದ ಕೃತಿಗಳನ್ನು ಹೊರಪ್ರಪಂಚಕ್ಕೆ ತೋರಿಸಲಾಗಿಲ್ಲ. ಕೆಲವೊಂದು ಯಾಂತ್ರಿಕವಾಗಿ ನಡೆದ ಭಾಷಾಂತರಗಳು ಅಷ್ಟೇನು ಮಹತ್ವವನ್ನು ಪಡೆಯಲಿಲ್ಲ. ಭಾಷಾಂತರಕ್ಕಾಗಿ ವಿಶ್ವವಿದ್ಯಾಲಯಗಳಿಗೆ ಮತ್ತು ಹೊರಗೆ ಅಪಾರ ಹಣವನ್ನು ವ್ಯಯಿಸಿ ಭಾಷಾಂತರ ಕೆಲಸವನ್ನು ಮಾಡಿದರೂ ಯಾವುದೇ ನಿರೀಕ್ಷಿತ ಪ್ರಯೋಜನವಾಗಿಲ್ಲ. ನಮ್ಮಲ್ಲಿ ಭಾಷಾಂತರದ ಕುಶಲತೆ ಇಲ್ಲ ಎಂದು ಇದರಿಂದ ತಿಳಿಯುತ್ತದೆ.

**ಕನ್ನಡದ ಪಠ್ಯಗಳನ್ನು ಭಾರತೀಯ ಭಾಷೆಗಳಿಗೆ ತರುವ ಕೆಲಸ ಮೊದಲು ಆಗಬೇಕು. ಅದೇ ರೀತಿ ಪ್ರಾಚೀನ ಮತ್ತು ಹಳೆಗನ್ನಡದಲ್ಲಿರುವ ಕೃತಿಗಳನ್ನು ಆಧುನಿಕ ಭಾಷೆಗೆ ತರದಿದ್ದರೆ, ನಮಗೆ ನಮ್ಮದೇ ಪರಂಪರೆಯು ಪರಕೀಯವೆನಿಸಬಹುದು**

ನಾವು ನಮ್ಮನ್ನು ಹೊರಪ್ರಪಂಚಕ್ಕೆ ತೆರೆದಿಟ್ಟು, ಬಹು ಭಾಷಾ ವಿದ್ವಾಂಸರೊಡನೆ ಸೇರಿ ಸಂವಾದ ಚರ್ಚೆಗಳನ್ನು ಮಾಡಿಕೊಂಡು, ಪ್ರತ್ಯೇಕವಾದ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ, ವಿಶೇಷ ಕಾರ್ಯಗಾರಗಳನ್ನು ನಡೆಸಿ ಭಾಷಾಂತರವನ್ನು ಬಹಳ ಗಂಭೀರವಾಗಿ ತೆಗೆದುಕೊಂಡರೆ ಈ ದೌರ್ಬಲ್ಯವನ್ನು ತೊಡೆದುಹಾಕಬಹುದು ಎಂದೆನಿಸುತ್ತದೆ. ಕನ್ನಡದ ಪಠ್ಯಗಳನ್ನು ಭಾರತೀಯ ಭಾಷೆಗಳಿಗೆ ತರುವ ಕೆಲಸ ಮೊದಲು ಆಗಬೇಕು. ಅದೇ ರೀತಿ ಪ್ರಾಚೀನ ಮತ್ತು ಹಳೆಗನ್ನಡದಲ್ಲಿರುವ ಕೃತಿಗಳನ್ನು ಆಧುನಿಕ ಭಾಷೆಗೆ ತರದಿದ್ದರೆ, ನಮಗೆ ನಮ್ಮದೇ ಪರಂಪರೆಯು ಪರಕೀಯವೆನಿಸಬಹುದು. ಪ್ರಾಚೀನ ಕನ್ನಡ ಹಾಗೂ ತಮಿಳು ಪಠ್ಯಗಳು ಈ ಸಮಸ್ಯೆಯನ್ನು ಎದುರಿಸುತ್ತಿವೆ. ಸಮರ್ಥ ಭಾಷಾಂತರಕಾರರ ಕೊರತೆಯಿಂದ ಸಮಸ್ಯೆ ಎದುರಾಗಿದೆ. ಇದಕ್ಕಾಗಿ ಜೆಎನ್‌ಯುನಲ್ಲಿ ಸ್ಥಾಪಿತವಾದ ಕನ್ನಡ ಅಧ್ಯಯನ ಪೀಠಕ್ಕಿಂತ ಪ್ರಶಸ್ತ ಸಂಸ್ಥೆ ಬೇರೆ ಇಲ್ಲ ಎನ್ನಬೇಕು.

ಕನ್ನಡ ಅಧ್ಯಯನ ಪೀಠಕ್ಕೆ ಕರ್ನಾಟಕ ಸರಕಾರವು ನಿಗದಿ ಪಡಿಸಿದಕ್ಕಿಂತ ಹೆಚ್ಚಿನ ಅನುದಾನ ಒದಗಿಸದಿದ್ದರೆ ಅದು ಉಳಿಯುವುದು, ಬೆಳೆಯುವುದು ಕಷ್ಟ. ಮುಂದಿನ ತಿಂಗಳಿಂದ ಶೇ. 25ರಷ್ಟು ಏರಿಕೆಯಾಗಲಿದೆ ಎಂದು ಭಾವಿಸಿದರೂ, ಒಬ್ಬರೇ ವಿದ್ವಾಂಸರು ಎಲ್ಲ ಕೆಲಸಗಳನ್ನು ಮಾಡಲಾಗದು. ತಕ್ಷಣಕ್ಕೆ ಮತ್ತೊಬ್ಬರು ಶಿಕ್ಷಕರು, ಸಂಶೋಧನಾ ಸಹಾಯಕರನ್ನು ನೇಮಕ ಮಾಡಬೇಕಾದ ಅಗತ್ಯವಿದೆ. ಈ ಪೀಠದಿಂದ ಗಂಭೀರ ಕೆಲಸಗಳು ನಡೆಯಬೇಕಾದರೆ ಸರಕಾರವು ಅನುದಾನದ ಪರಿಕಲ್ಪನೆಯನ್ನು ಪುನರ್‌ಯೋಜಿಸಬೇಕು. ಅಧ್ಯಯನ ಪೀಠವು ತನ್ನ ಗುರಿಗಳನ್ನು ಸಾಧಿಸಲು ರಾಜ್ಯ ಸರ್ಕಾರದ ಬೆಂಬಲ ಬಹಳ ಮುಖ್ಯ.” ಅ

***ಕನ್ನಡದಲ್ಲಿ ನಿರೂಪಣೆ : ಬಾನಾಡಿ***



# ಕರ್ನಾಟಕ ಭವನದ ಕರ್ನಾಟಕ ರಾಜ್ಯೋತ್ಸವ ಆಚರಣೆ



ದೆಹಲಿಯ ಕರ್ನಾಟಕ ಭವನದ ಆಶ್ರಯದಲ್ಲಿ 60ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ನವಂಬರ್ 1 ರಂದು ನವದೆಹಲಿಯ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದ ಆವರಣದಲ್ಲಿ ಕನ್ನಾಡಾಂಬೆಗೆ ಪೂಜೆ ಸಲ್ಲಿಸಿ ಧ್ವಜಾರೋಹಣ ಮಾಡಲಾಯಿತು.

ಅಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಛಯದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನವದೆಹಲಿಯಲ್ಲಿರುವ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ಅವರು ಮಾತಾಡುತ್ತಾ ಕರ್ನಾಟಕದ ಗತವೈಭವನ್ನು ನೆನಪಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಾಹಿತಿ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ನಿರ್ದೇಶಕರಾದ ಶ್ರೀ ಮನು ಪಿ. ಬಳಿಗಾರ್ ಅವರು ಕನ್ನಡ ನಾಡು–ನುಡಿ, ಕಲೆ, ಸಂಸ್ಕೃತಿ, ಜಾತಿ ಪದ್ಧತಿ, ಆಚಾರ– ವಿಚಾರ ಮತ್ತು ಕನ್ನಡದ ನೆಲೆಗಟ್ಟುಗಳ ಬಗ್ಗೆ ಅಚ್ಚುಕಟ್ಟಾಗಿ ಕನ್ನಡದಲ್ಲಿ ಸ್ಪಷ್ಟತೆಯಿಂದ ಮಾತನಾಡಿ ಎಲ್ಲಾ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾದರು. ಅಲ್ಲದೆ ದೆಹಲಿಯಲ್ಲಿಯೇ ಕುಳಿತು ಕರ್ನಾಟಕ ದರ್ಶವನ್ನು ಉಣಬಡಿಸಿದರು.

ಗೌರವಾನ್ವಿತ ಆಹ್ವಾನಿತರಾದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ಭಾಷಣದಲ್ಲಿ ಕನ್ನಾಡಾಂಬೆಯನ್ನು ನೆನೆದು ಕನ್ನಡ ನಾಡು ನುಡಿಯ ಬಗ್ಗೆ ಮನನ ಮಾಡಿಕೊಟ್ಟರು.

ಕಾರ್ಯಕ್ರಮದ ಎಲ್ಲಾ ಜವಾಬ್ದಾರಿಯನ್ನು ಕರ್ನಾಟಕ ಭವನ ನಿವಾಸಿ ಆಯುಕ್ತರಾದ ಶ್ರೀಮತಿ ವಂದನಾ ಗುರ್ನಾನಿ ಅವರು ವಹಿಸಿದ್ದರು. ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತ ಶ್ರೀ ಟಿ.ಎಂ ರಂಗಸ್ವಾಮಿ ಅವರು ತಮ್ಮ ಭಾಷಣದಲ್ಲಿ ಕರ್ನಾಟಕ ಇತಿಹಾಸವನ್ನು ನೆನಪಿಸಿಕೊಟ್ಟರು. ಸಹಾಯಕ ನಿವಾಸಿ ಆಯುಕ್ತರಾದ ಶ್ರೀ ಶೈಲೇಂದ್ರ ಸಿಂಗ್ ಮತ್ತು ಸಂಸದರ ಕೋಶದ ಸಮನ್ವಯಾಧಿಕಾರಿ ಶ್ರೀಮತಿ ಮೋನಿಕಾ ಕಸ್ತೂರಿ ಅವರು ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಉಪ ನಿವಾಸಿ ಆಯುಕ್ತರಾದ ಶ್ರೀ ಕೆ. ಶ್ರೀಕಾಂತ ರಾವ್ ಅವರು ವಂದನಾರ್ಪಣೆ ಸಲ್ಲಿಸಿದರು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಎಂ. ನಾಗೇಂದ್ರ ಮತ್ತು ಅವರ ತಂಡ, ಜಗ್ಗು ಜಾದುಗಾರ್, ಇವರಿಂದ ಜಾದು ಪ್ರದರ್ಶನ ಪ್ರೇಕ್ಷಕರ ಗಮನ ಸೆಳೆಯಿತು. ಮೋಹನ್ ನೃತ್ಯ ತಂಡ, ಗುಂಡ್ಲುಪೇಟೆ ಇವರ ನೃತ್ಯರೂಪಕವು ಎಲ್ಲರ ಮನಸೂರೆಗೊಂಡಿತು. ಕರ್ನಾಟಕ ಭವನ, ನವದೆಹಲಿಯ ಸಿಬ್ಬಂದಿ ವರ್ಗದ ಮಕ್ಕಳ ನೃತ್ಯದ ವಿವಿಧ ಪ್ರಕಾರಗಳು ಮುಖ್ಯವಾಗಿ ಗಮನ ಸೆಳೆಯಿತು.

ಹೊರನಾಡ ಕನ್ನಡಿಗರು ಒಂದೆಡೆ ಸೇರಿ ಸಡಗರ ಸಂಭ್ರಮದಿಂದ ತಮ್ಮ ಕುಟುಂಬ ಪರಿವಾರದೊಂದಿಗೆ ಸೇರಿ ವಿಜೃಂಭಣೆಯಿಂದ ರಾಜ್ಯೋತ್ಸವವನ್ನು ಒಂದು ಹಬ್ಬವಾಗಿ ಆಚರಿಸಿದರು. ಅ

***ಎಸ್. ಕುಮಾರ್***

---

ಮರೆಯಲಾಗದ ಅನುಭವ

# ಸೇಂಟ್ ಮೇರಿಸ್ ಶಾಲೆಯಲ್ಲಿ ಕರ್ನಾಟಕ ಉತ್ಸವ

ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಸೇಂಟ್ ಮೇರಿಸ್ ಶಾಲೆಯಲ್ಲಿ ಕರ್ನಾಟಕ ಉತ್ಸವವನ್ನು ಸೆಪ್ಟೆಂಬರ್ 8, 2015ರಂದು ಆಚರಿಸಲಾಯಿತು.

ನನ್ನ ಮಗ ಈ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಓದುತ್ತಿದ್ದಾನೆ. ಆದರೆ ಕರ್ನಾಟಕ ಉತ್ಸವವನ್ನು ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆಚರಿಸಿದರು.

ಇದರ ವಿಶೇಷತೆ ಏನೆಂದರೆ ಅವರಲ್ಲಿ ಯಾವ ವಿದ್ಯಾರ್ಥಿಯೂ ಕೂಡ ಕರ್ನಾಟಕದವರಲ್ಲ, ಎಲ್ಲರೂ ಬೇರೆ ಬೇರೆ ರಾಜ್ಯದವರಾಗಿದ್ದರು.

ನನಗೆ ಇದರಲ್ಲಿ ಭಾಗವಹಿಸಲು ಅವಕಾಶ ಹೇಗೆ ಸಿಕ್ಕಿತೆಂದರೆ ನನ್ನ ಸ್ನೇಹಿತೆಯ ಮಗಳು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದುದರಿಂದ ಅವರಿಗೆ ಗೊತ್ತಿತ್ತು. ನಾವು ಕರ್ನಾಟಕದವರೆಂದರು, ಆದಕಾರಣ ಅವಳು ನನ್ನನ್ನು ಈ ಕಾರ್ಯಕ್ರಮಕ್ಕೆ ಕರೆದರು. ನಾನು ತಪ್ಪದೇ ಈ ಕಾರ್ಯಕ್ರಮಕ್ಕೆ ಹೋದೆ. ಹೋಗುತ್ತಲೇ ಶಾಲೆಯಲ್ಲಿ ಬೋರ್ಡ್‌ನ ಮೇಲೆ ಜಗಮಗಿಸುತ್ತಿರುವ ನಮ್ಮ ಕರ್ನಾಟಕದ ನಕಾಶೆ. ಅಡಿಟೋರಿಯಂನ ಮುಂದೆ ರಂಗು ರಂಗಿನ ರಂಗೋಲೆ ದೀಪಗಳ ಮಧ್ಯದಲ್ಲಿ ಕಂಗೊಳಿಸಿತ್ತು. ಮಕ್ಕಳು ಕರ್ನಾಟಕದ ಬಗ್ಗೆ ಬಹಳಷ್ಟು ದಿನಗಳಿಂದ ವಿಷಯಗಳನ್ನು ಸಂಗ್ರಹಿಸಿದ್ದರು.

ಎಲ್ಲ ಮಕ್ಕಳು ಕರ್ನಾಟಕದ ಉಡುಪುಗಳನ್ನು ಧರಿಸಿ ಎಲ್ಲರನ್ನು ಸ್ವಾಗತಿಸುತ್ತಿದ್ದರು. ಕೋಣೆಯ ನಾಲ್ಕು ಮೂಲೆಗಳಲ್ಲಿ ಕರ್ನಾಟಕದ ಬಗ್ಗೆ ಸ್ಟಾಲ್‌ಗಳನ್ನು ಮಾಡಿದ್ದರು. ಒಂದು ಸ್ಟಾಲ್‌ನಲ್ಲಿ ಅವರು ತಮ್ಮ ಪ್ರಾಜೆಕ್ಟ್‌ನಲ್ಲಿ ಕರ್ನಾಟಕ ಭೂಗೋಳ, ಆಹಾರ, ಉಡುಪು, ಸುಪ್ರಸಿದ್ಧ ವ್ಯಕ್ತಿಗಳ ಬಗ್ಗೆ, ಕಲೆ ಹಾಗೂ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದರು. ನಾನು ನೋಡಿ ಆಶ್ಚರ್ಯಚಕಿತಳಾದೆ.

ಒಂದು ಸ್ಟಾಲ್‌ನಲ್ಲಿ ಕರ್ನಾಟಕದ ಸುಪ್ರಸಿದ್ಧ ಮೈಸೂರು ಸಿಲ್ಕ್ ಸೀರೆಗಳನ್ನು, ಇನ್ನೊಂದರಲ್ಲಿ ಕರ್ನಾಟಕದ ಖ್ಯಾತ ಆಹಾರಗಳಾದ ಬಿಸಿಬೇಳೆ ಬಾತ್, ಇಡ್ಲಿ, ದೋಸೆ, ರಾಗಿ ದೋಸೆ, ಚಕ್ಕುಲಿ, ಮೈಸೂರು ಪಾಕ್ ಇತ್ಯಾದಿ ತಿಂಡಿಗಳನ್ನಿಟ್ಟಿದ್ದರು. ಮತ್ತೊಂದರಲ್ಲಿ ಕರ್ನಾಟಕದ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿಯನ್ನು ಮಕ್ಕಳೇ ಹೇಳುತ್ತಿದ್ದರು.

ಕಾರ್ಯಕ್ರಮದಲ್ಲಿ ಸಮೂಹ ಗಾನ, ಶ್ರೀಕೃಷ್ಣ ಪಾರಿಜಾತದ ಒಂದು ಸನ್ನಿವೇಶ ಹಾಗೂ ಕಂಸಾಳೆ ನೃತ್ಯ ಪ್ರದರ್ಶನಗೊಂಡಿತು. ಹಾಡಿನಲ್ಲಿ ಯುಗಾದಿ



# ದೆಹಲಿಯ ಕನ್ನಡ ಶಾಲೆಯಲ್ಲಿ ಕನ್ನಡ ತಾಯಿಗೆ ಸಂಭ್ರಮದ ಉತ್ಸವ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ ದೆಹಲಿ ಕನ್ನಡ ಶಾಲೆಯಲ್ಲಿ ಆಚರಿಸಿದ 60ನೇ 'ಕರ್ನಾಟಕ ರಾಜ್ಯೋತ್ಸವ'ವು ದೆಹಲಿ ಕನ್ನಡಿಗರೆಲ್ಲಾ ನಾಡ ತಾಯಿಗೆ ತಲೆಬಾಗಿ ನಮಿಸಿದ ಸಡಗರದ ಕ್ಷಣಗಳಿಗೆ ಸಾಕ್ಷಿಯಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಭಾರತ ಸರ್ಕಾರದ ಕಾಫಿ ಬೋರ್ಡಿನ ದೆಹಲಿ ವಿಶೇಷಾಧಿಕಾರಿ, ಡಾ. ವಿ.ಆರ್. ಗುಡ್ಡೇಗೌಡ ಅವರು ಮಾತಾಡುತ್ತಾ "ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ದೆಹಲಿಯಲ್ಲಿ ಕಳೆದ 56 ವರ್ಷಗಳಿಂದ ಶಿಕ್ಷಣ ರಂಗದಲ್ಲಿ ಅಪ್ರತಿಮ ಸೇವೆ ಸಲ್ಲಿಸುತ್ತಿದೆ. ಈ ಸಾಲಿನಿಂದ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಕರ್ನಾಟಕದ ಅಭ್ಯರ್ಥಿಗಳಿಗೆ 'ಮಾರ್ಗದರ್ಶನ ಕೇಂದ್ರ'ವನ್ನು ಪ್ರಾರಂಭಿಸಲು ತೀರ್ಮಾನಿಸಿದೆ ಎಂದರು. ಶಾಲೆಗೆ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಹೆಚ್ಚುವರಿ ಕಟ್ಟಡ ಸಂಕೀರ್ಣವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದರು.

ಸಮಾರಂಭವನ್ನು ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಭಾರತ ಸರಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಉಪ ಕಾರ್ಯದರ್ಶಿ ಶ್ರೀ ಕೆ.ಎಂ. ಮಹೇಶ್, ಐ.ಆರ್.ಎಸ್ ಅವರು ಉದ್ಘಾಟಿಸಿದರು. ಬಳಿಕ ಸಮಾರಂಭವನ್ನು ಉದ್ದೇಶಿಸಿ ಮಾತಾಡುತ್ತಾ "ಕನ್ನಡ ನಾಡು-ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯನ್ನುಳಿಸಿ ಬೆಳೆಸಬೇಕು. ದೆಹಲಿಯಲ್ಲಿರುವ ಕನ್ನಡಿಗರು ಕರ್ನಾಟಕದ ರಾಯಭಾರಿಗಳಂತೆ ವರ್ತಿಸಿ ಕರ್ನಾಟಕಕ್ಕೆ ಕೀರ್ತಿ ತರಬೇಕು" ಎಂದರು.

ಇದೇ ಸಂದರ್ಭದಲ್ಲಿ ಡಾ. ಅಹಲ್ಯಾ ಚಿಂತಾಮಣಿ ಅವರ ತಂದೆ ದಿವಂಗತ ಬಿ.ಆರ್. ವೆಂಕಟೇಶ್ ಅವರು ಬರೆದಿರುವ ಉಭಯ ಭಾರತಿ' ಕನ್ನಡ ಪುಸ್ತಕವನ್ನು 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕರಾದ ಶ್ರೀ ಬಾ. ಸಾಮಗ ಅವರು ಬಿಡುಗಡೆಗೊಳಿಸಿದರು. ಜೊತೆಗೆ ಆಡಳಿತ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ನಿವೃತ್ತ ಐಎಎಸ್ ಅಧಿಕಾರಿಯಾದ ಶ್ರೀ ಎನ್.ಜೆ. ಕಾಮತ್, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ನಿವೃತ್ತ ಪ್ರಾಂಶುಪಾಲರಾದ ಶ್ರೀ ಕೆ. ಈಶ್ವರ್ ಭಟ್ ಹಾಗೂ ಕನ್ನಡಾಭಿವೃದ್ಧಿ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ಹಿರಿಯ ಪತ್ರಕರ್ತರಾದ ಶ್ರೀ ಬಾ. ಸಾಮಗ ಅವರನ್ನು ಫಲಪುಷ್ಪ, ಸ್ಮರಣಿಕೆ, ಸನ್ಮಾನ ಪತ್ರದೊಂದಿಗೆ ಗೌರವಿಸಲಾಯಿತು.

ನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಕಾರ್ಯಕ್ರಮಗಳಾದ 'ಕನ್ನಡ ನಾಡಿನ ಜೀವನದಿ ಕಾವೇರಿ', 'ಹಚ್ಚೇವು ಕನ್ನಡದ ದೀಪ' ಹಾಡಿಗೆ ನೃತ್ಯ ಪ್ರದರ್ಶನ, 'ಜಯಹೇ ಕನ್ನಡ ತಾಯೇ' ಹಾಡಿಗೆ ಕುಮಾರಿ ಶ್ರೇಯಳ ಭರತನಾಟ್ಯ, 'ಗಂಧರ್ವ ಸೇನ' ಕನ್ನಡ ಕಿರುಪ್ರಹಸನ ಹಾಗೂ ಕರ್ನಾಟಕದ ಸಾಂಪ್ರದಾಯಿಕ ವೇಷಭೂಷಣದ ಪ್ರದರ್ಶನ ನೆರೆದವರ ಮನಸೂರೆಗೊಂಡಿತು.

ಕನ್ನಡಾಭಿಮಾನವನ್ನು ಪ್ರೇರೇಪಿಸುವ 'ವಚನ ಗಾಯನ'ವನ್ನು ಶಿಕ್ಷಕರು ಪ್ರಸ್ತುತಪಡಿಸಿದರು. 'ಕರ್ನಾಟಕ ರಾಜ್ಯೋತ್ಸವ'ದ ಪ್ರಯುಕ್ತ ವಿದ್ಯಾರ್ಥಿಗಳಿಗೆ ನಡೆಸಿದ ವಿವಿಧ ರೀತಿಯ ಸ್ಪರ್ಧೆಗಳ ವಿಜೇತರಿಗೆ ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷರು, ಅತಿಥಿಗಳು ಪ್ರಮಾಣ ಪತ್ರ ಹಾಗೂ ಬಹುಮಾನ ನೀಡಿ ಗೌರವಿಸಿದರು. ಸಂಸ್ಥೆಯ ಆವರಣವನ್ನು ಕನ್ನಡ ಧ್ವಜ, ಬಣ್ಣಬಣ್ಣದ ಪತಾಕೆ, ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರ ಅಚ್ಚುಕಟ್ಟಾದ ಯೋಜನೆಗಳ ಫಲವೇ ಒಟ್ಟು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯಿತು. 'ನಮ್ಮ ಶಾಲೆಯೇ ನಮ್ಮ ದೇವಾಲಯವು' ಎಂಬ ಪ್ರಾರ್ಥನೆ ಜೊತೆಗೆ ಸುಶ್ರಾವ್ಯ ಕನ್ನಡ ನಾಡಗೀತೆಯ ಮೂಲಕ ಕಾರ್ಯಕ್ರಮ ಆರಂಭವಾಗಿತ್ತು.

ಸಮಾರಂಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ಖಜಾಂಚಿಯಾದ ಶ್ರೀ ಟಿ.ಎಂ. ಮೈಲಾರಪ್ಪ ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ. ನಾರಾಯಣ ಅವರು ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಶ್ರೀ ಸಿ.ಆರ್. ಶ್ರೀನಿವಾಸ್ ವಂದಿಸಿದರು. ಶಿಕ್ಷಕರಾದ ಶ್ರೀಮತಿ ಅಕ್ಕಮಹಾದೇವಿ ಮತ್ತು ಶ್ರೀಮತಿ ಮಾಲಾ ಗೋಪಾಲ್ ಕಾರ್ಯಕ್ರಮ ನಿರ್ವಹಿಸಿದರು. ಅ

*ಅರವಿಂದ ಬಿಜ್ಜಿ*

---




ಇನ್ನಿತರ ಹಬ್ಬಗಳ ಬಗ್ಗೆ ಮಾಹಿತಿ ಇತ್ತು. ಮಕ್ಕಳು ತುಂಬಾ ಚೆನ್ನಾಗಿ ಹಾಡಿದರು. ಅವರ ಶಬ್ದಗಳ ಉಚ್ಚಾರಣೆ ಸರಿ ಇರಲಿಲ್ಲ. ಆದರೂ ಲಯ, ರಾಗ ತುಂಬಾ ಚೆನ್ನಾಗಿತ್ತು. ಕಂಸಾಳೆ ನೃತ್ಯ ತುಂಬ ಮನೋಹರವಾಗಿತ್ತು.

ನನಗೆ ಎಲ್ಲೋ ಕರ್ನಾಟಕ ಸಂಘದಲ್ಲಿ ಕುಳಿತು ಈ ಕಾರ್ಯಕ್ರಮವನ್ನು ನೋಡುತ್ತಿರುವೆನೇನೊ ಅನ್ನಿಸಿತ್ತು. ಕೊನೆಯಲ್ಲಿ ಶಾಲೆಯ ಪ್ರಾಂಶುಪಾಲರಾದ ಅನ್ನಿ ಕೋಷಿ ಅವರು ಎಲ್ಲ ಪಾಲಕರಿಗೆ ಮಾತನಾಡಲು ಅವಕಾಶ ಕೊಟ್ಟರು. ಆಗ ನಾನು ಒಬ್ಬಳೇ ಕರ್ನಾಟಕದವಳಿದ್ದೆ. ಪ್ರಾಂಶುಪಾಲರು ನನಗೆ ಕಾರ್ಯಕ್ರಮದ ಸಂದರ್ಭದಲ್ಲಿ ಮಾತನಾಡಲು ಅವಕಾಶ ನೀಡಿದರು.

ನನಗೆ ತುಂಬಾ ಖುಷಿಯಾಯಿತು. ನಾನು ಮಕ್ಕಳಿಗೆ ಮತ್ತು ಎಲ್ಲರಿಗೂ ಕನ್ನಡದಲ್ಲಿ ಧನ್ಯವಾದಗಳನ್ನು ಅರ್ಪಿಸಿದೆನು. ಈ ಕಾರ್ಯಕ್ರಮದ ಹಿಂದೆ ಅವರ ಅಧ್ಯಾಪಕರ ಶ್ರಮ ತುಂಬಾ ಮೆಚ್ಚುವಂತಹದ್ದು. ಮಕ್ಕಳೇ ಕಾರ್ಯಕ್ರಮವನ್ನು ನಡೆಸಿಕೊಟ್ಟರು, ಕನ್ನಡದಲ್ಲೇ ಸ್ವಾಗತವನ್ನು ಮಾಡಿದರು. ಒಟ್ಟಾರೆ ನನ್ನ ಮಾತುಗಳಿಗೆ ಪ್ರಾಂಶುಪಾಲರು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದ ಮರೆಯಲಾಗದ ಅನುಭವ ಅದ್ಭುತವಾಗಿತ್ತು. ಅ

*ಲಲಿತಾ ಗೋಸಲ್*



# ಕೃಷಿಕ್ ಸರ್ವೋದಯ ಫೌಂಡೇಶನ್‌ನಿಂದ ಸಂವಾದ ಕಾರ್ಯಕ್ರಮ

ಕೃಷಿಕ್ ಸರ್ವೋದಯ ಫೌಂಡೇಶನ್ ನವದೆಹಲಿ ಶಾಖೆಯು "ಹಿರಿಯ ಐ.ಎ.ಎಸ್. ಅಧಿಕಾರಿಗಳು ಮತ್ತು ಕರ್ನಾಟಕದ ನಾಗರೀಕಾ ಸೇವಾಕಾಂಕ್ಷಿಗಳ ನಡುವೆ ಸಂವಾದ ಕಾರ್ಯಕ್ರಮ ಮತ್ತು ಕರ್ನಾಟಕ ರಾಜ್ಯೋತ್ಸವ ಆಚರಣೆಯನ್ನು ಇದೇ ನವೆಂಬರ್ 20ರಂದು ಹಮ್ಮಿಕೊಂಡಿತ್ತು.

ನಿವೃತ್ತ ಐ.ಸಿ.ಎಸ್. ಅಧಿಕಾರಿ ಶ್ರೀ ಎನ್. ಜೆ. ಕಾಮತ್ ಅವರು ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಅವರು ಅಧಿಕಾರಿಯಾಗಿ ವಿವಿಧ ರಾಜ್ಯಗಳಲ್ಲಿ ಎಲ್ಲಾ ಭಾರತೀಯ ಭಾಷೆಗಳನ್ನು ಕಲಿಯುತ್ತಾ ಜನರಿಗೆ ಹತ್ತಿರದಲ್ಲಿ ನಿಂತು ಸೇವೆ ಮಾಡುತ್ತಿದ್ದನ್ನು ಸ್ಮರಿಸಿದರು. ಬ್ರಿಟೀಷರಿಂದ ಅವರು ಕಲಿತ ಶಿಸ್ತಿನ ಬಗ್ಗೆ ಹೇಳುತ್ತಾ ಅಭ್ಯರ್ಥಿಗಳಿಗೆ ಜೀವನದಲ್ಲಿ ಶಿಸ್ತನ್ನು ಮೈಗೂಡಿಸಿಕೊಳ್ಳುವಂತೆ ಕರೆಕೊಟ್ಟರು.

ಇದೇ ಸಂದರ್ಭದಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆಯು ಕಳೆದ ಎಂಟು ವರ್ಷಗಳ ಚಟುವಟಿಕೆಗಳು ಮತ್ತು ಸಾಧನೆಗಳ ಬಗೆಗಿನ ವಿಚಾರಗಳನ್ನೊಳಗೊಂಡ ಕೈಪಿಡಿಯನ್ನು ಬಿಡುಗಡೆಗೊಳಿಸಿ ಅಭ್ಯರ್ಥಿಗಳಿಗೆ ವಿತರಿಸಲಾಯಿತು. ಸುಮಾರು 750ಕ್ಕೂ ಹೆಚ್ಚು ಕರ್ನಾಟಕದ ಅಭ್ಯರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಹಾಗೂ 16 ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ತಮ್ಮ ಅಮೂಲ್ಯವಾದ ಅನುಭವಗಳನ್ನು ಅಭ್ಯರ್ಥಿಗಳೊಡನೆ ಹಂಚಿಕೊಂಡರು. ಐ.ಎ.ಎಸ್. ತರಬೇತಿಗೆಂದು ದೆಹಲಿಗೆ ಬಂದಿರುವ ಅಭ್ಯರ್ಥಿಗಳು ತಮ್ಮ ಪ್ರಶ್ನೆಗಳು ಮತ್ತು ತಾವು ಅಧ್ಯಯನ ಮಾಡುವಾಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಅಧಿಕಾರಿಗಳಿಂದ ಉತ್ತರಗಳನ್ನು ಪಡೆದುಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆಯ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ಮಾತನಾಡುತ್ತಾ ಇಷ್ಟೊಂದು ಪ್ರಮಾಣದಲ್ಲಿ ಕನ್ನಡದ ಮಕ್ಕಳು ಬಂದು ಸೇರಿರುವುದು ಸಂತೋಷದ ವಿಚಾರ, ಹೆಚ್ಚು ಹೆಚ್ಚು ಕನ್ನಡಿಗರು ಅಧಿಕಾರಿಗಳಾಗಿ ಬರಬೇಕು, ಮುಖ್ಯವಾಗಿ ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಬೇಕು. ಗ್ರಾಮೀಣ ಭಾಗದ ಮಕ್ಕಳು ಹೆಚ್ಚು ಹೆಚ್ಚು ನಾಗರೀಕ ಸೇವೆಗಳಿಗೆ ಬರಬೇಕೆಂದು ಕರೆ ನೀಡುತ್ತಾ, ಫೌಂಡೇಶನ್ ಯಾವುದೇ ಸಮುದಾಯ, ಧರ್ಮ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳದೇ ಕರ್ನಾಟಕದ ಎಲ್ಲಾ ಅಭ್ಯರ್ಥಿಗಳಿಗೆ ಕಳೆದ 8 ವರ್ಷಗಳಿಂದ ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಾ ಬಂದಿದೆ ಹಾಗೂ ಈ ಯಶಸ್ಸಿನ ನೆರವು ನೀಡಿದ ಹಿರಿಯ ಅಧಿಕಾರಿಗಳ ಸೇವೆಯನ್ನು ನೆನೆದರು.

ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆಯ ಕಾರ್ಯದರ್ಶಿ ಡಾ.

**ಐ.ಎ.ಎಸ್. ತರಬೇತಿಗೆಂದು ದೆಹಲಿಗೆ ಬಂದಿರುವ ಅಭ್ಯರ್ಥಿಗಳು ತಮ್ಮ ಪ್ರಶ್ನೆಗಳು ಮತ್ತು ತಾವು ಅಧ್ಯಯನ ಮಾಡುವಾಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಅಧಿಕಾರಿಗಳಿಂದ ಉತ್ತರಗಳನ್ನು ಪಡೆದುಕೊಂಡರು**

ವಿ.ಆರ್. ಗುಡ್ಡೇಗೌಡರು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಹಿರಿಯ ಅಧಿಕಾರಿಗಳು ಮತ್ತು ಅಭ್ಯರ್ಥಿಗಳನ್ನು ಸ್ವಾಗತಿಸುತ್ತಾ ಫೌಂಡೇಶನ್ ಕಳೆದ ಎಂಟು ವರ್ಷಗಳಿಂದ ನಡೆದು ಬಂದ ಹಾದಿ ಅದರ ಚಟುವಟಿಕೆಗಳು, ಸಾಧನೆಗಳ ಬಗ್ಗೆ ಬೆಳಕು ಚೆಲ್ಲಿದರು. ಫೌಂಡೇಶನ್‌ನ ನವದೆಹಲಿ ಶಾಖೆಯ ಉದ್ಘಾಟನೆಗೆ ಕಾರಣಕರ್ತರಾದ ಡಾ. ವೈ.ಕೆ. ಪುಟ್ಟಸೋಮೇ ಗೌಡ, ಐ.ಎ.ಎಸ್. (ನಿವೃತ್ತ) ಹಾಗೂ ಶ್ರೀ ತಿಮ್ಮೇಗೌಡ ಐ.ಎ.ಎಸ್. (ನಿವೃತ್ತ) ಇವರನ್ನು ನೆನೆದುಕೊಂಡರು. ಇದೇ ಸಂದರ್ಭದಲ್ಲಿ ಫೌಂಡೇಶನ್‌ನ ಪ್ರಾರಂಭದ ದಿನಗಳಲ್ಲಿ ಅದರ ಕಾರ್ಯ ಚಟುವಟಿಕೆಗಳ ಯಶಸ್ಸಿಗೆ ಕಾರಣರಾದ ಶ್ರೀ ವಿ.ವಿ. ಭಟ್, ಐ.ಎ.ಎಸ್., ಶ್ರೀ ಡಾ. ಸಿ.ಎಸ್. ಕೇದಾರ್, ಐ.ಎ.ಎಸ್. (ನಿವೃತ್ತ), ಶ್ರೀ ವಿಜಯ್ ಭಾಸ್ಕರ್, ಐ.ಎ.ಎಸ್., ಶ್ರೀ ಸುಭಾಷ್‌ಚಂದ್ರ ಕುಂಟಿಯಾರವರ ಅನುಪಮ ಸೇವೆಯನ್ನು ನೆನೆದು ಕೃತಜ್ಞತೆ ಸಲ್ಲಿಸಿದರು.

ಕೃಷಿಕ್ ಸರ್ವೋದಯ ಫೌಂಡೇಶನ್, ದೆಹಲಿ ಶಾಖೆಯ ಸಲಹೆಗಾರರಾದ ಹಾಗೂ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ರಾಷ್ಟ್ರದ ರಾಜಧಾನಿಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಐ.ಎ.ಎಸ್. ಆಕಾಂಕ್ಷಿಗಳು ಬಂದು ಒಂದೆಡೆ ಸೇರಿರುವುದು ಒಂದು ಚಾರಿತ್ರಿಕ ಘಟನೆ. ಇಂದು ನಾವು ಎಲ್ಲಾ ಕ್ಷೇತ್ರಗಳಲ್ಲಿ ಕನ್ನಡಿಗರೆಂದು ಗುರುತಿಸಿಕೊಳ್ಳುತ್ತಿದ್ದೇವೆ. ನಿಧಾನವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡಿಗರ ಪ್ರಾತಿನಿಧ್ಯ ಹೆಚ್ಚುತ್ತಿರುವುದು ಸಂತೋಷದ ವಿಚಾರ. ಈ ಮಹಾಕಾರ್ಯದಲ್ಲಿ ಫೌಂಡೇಶನ್ ಅವಿರತವಾಗಿ ನಿಸ್ವಾರ್ಥದಿಂದ ಐ.ಎ.ಎಸ್. ಆಕಾಂಕ್ಷಿಗಳಿಗೆ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಬಂದಿರುವುದು ಶ್ಲಾಘನೀಯ ಎಂದರು. 'ಕನ್ನಡವನ್ನು ಬೋಧಿಸುವುದು ಎಂದೂ ನನಗೆ ಸಂತೋಷದ ವಿಷಯ. ಕನ್ನಡ ಯು.ಪಿ.ಎಸ್.ಸಿ.ಯಲ್ಲಿ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿರುವ ಅಭ್ಯರ್ಥಿಗಳಿಗೆ ನನಗೆ ಗೊತ್ತಿರುವ ಸಾಹಿತ್ಯ ಜ್ಞಾನವನ್ನು ಹಂಚಿಕೊಳ್ಳಲು ಸಿದ್ಧನಿದ್ದೇನೆ' ಎಂದು ತಮ್ಮ ಕನ್ನಡದ ಮೇಲಿನ ಅತೀವ ಪ್ರೀತಿಯನ್ನು ಅಭ್ಯರ್ಥಿಗಳೊಡನೆ ಹಂಚಿಕೊಂಡರು.

ಫೌಂಡೇಶನ್ ಜೊತೆ ಕಳೆದ ಏಳು ವರ್ಷಗಳಿಂದ ತಮ್ಮ ಅವಿರತವಾಗಿ ತೊಡಗಿಸಿಕೊಂಡಿರುವ ಶ್ರೀ ಟಿ.ಎಸ್. ಕೃಪಾನಿಧಿ, ಐ.ಡಿ.ಎ.ಎಸ್. (ನಿವೃತ್ತ), ಅವರು ಮಾತನಾಡುತ್ತಾ, ತಾವು ಪಡೆದದ್ದು ಇಂಜಿನಿಯರ್ ಪದವಿಯಾದರೂ ಮಾನವ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಯಶಸ್ವಾದ ವಿಚಾರವನ್ನು ಅಭ್ಯರ್ಥಿಗಳಿಗೆ ಹೇಳುತ್ತಾ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಡುವಾಗ ಪರಿವಿಡಿಯನ್ನು ಅಭ್ಯಸಿಸಿ ಬಹಳ ಜಾಗರೂಕತೆಯಿಂದ ಆಯ್ಕೆ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದರು. ಹಾಗೆಯೇ ಕೃಷಿಕ್ ಸರ್ವೋದಯ ಫೌಂಡೇಶನ್ ಐ.ಎ.ಎಸ್. ಆಕಾಂಕ್ಷಿಗಳಿಗೆ ಕಳೆದ ಕೆಲವು ವರ್ಷಗಳಿಂದ ಹಮ್ಮಿಕೊಳ್ಳುತ್ತಿರುವ ಚಟುವಟಿಕೆಗಳನ್ನು ಶ್ಲಾಘಿಸಿದರು.

2013ನೇ ಸಾಲಿನ ಐ.ಎ.ಎಸ್. ಅಧಿಕಾರಿಗಳಾದ ಡಾ. ಲಕ್ಷ್ಮೀಶ್, ಐ.ಎ.ಎಸ್., ಡಾ. ಅರುಣ್.ಟಿ. ಐ.ಎ.ಎಸ್., ಡಾ. ರಾಜೇಂದ್ರ, ಐ.ಎ.ಎಸ್., ಶ್ರೀ ಚಂದ್ರಶೇಖರ್, ಐ.ಎ.ಎಸ್., ಶ್ರೀ ಸಂದೀಪ್ ಜೆ.ಆರ್. ಐ.ಎ.ಎಸ್. ಹಾಗೂ 2014ನೇ ಸಾಲಿನ ಐ.ಪಿ.ಎಸ್. ಅಧಿಕಾರಿಗಳಾದ ಡಾ. ಮಂಜುನಾಥ್ ಐ.ಪಿ.ಎಸ್., ಶ್ರೀ ಕಾರ್ತಿಕೇಯನ್, ಐ.ಪಿ.ಎಸ್., ಶ್ರೀ ಲಕ್ಷ್ಮೀಪ್ರಸಾದ್, ಐ.ಪಿ.ಎಸ್., ಶ್ರೀ ರಾಹುಲ್ ಹೆಗ್ಡೆ, ಐ.ಪಿ.ಎಸ್., ಶ್ರೀ ಅಕುಲ್, ಐ.ಪಿ.ಎಸ್. ಹಾಗೂ 2011ನೇ ಸಾಲಿನ ಐ.ಆರ್.ಎಸ್. ಕಸ್ಟಮ್ಸ್ ಅಧಿಕಾರಿಯಾದ ಶ್ರೀ ತೇಜ್ ಕುಮಾರ್ ಮತ್ತು 2014ನೇ ಸಾಲಿನ ಐ.ಆರ್.ಎಸ್., ಕಸ್ಟಮ್ಸ್ ಅಧಿಕಾರಿಯಾದ ಕುಮಾರಿ ನಂದಿನಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಅಭ್ಯರ್ಥಿಗಳೊಡನೆ ತಮ್ಮ ಅಮೂಲ್ಯವಾದ ಜ್ಞಾನ ಮತ್ತು ಅನುಭವವನ್ನು ಹಂಚಿಕೊಂಡರು.

ಡಾ. ಲಕ್ಷ್ಮೀಶ್, ಐ.ಎ.ಎಸ್. ಅವರು ಮಾತನಾಡುತ್ತಾ, ಸಿವಿಲ್ ಸರ್ವಿಸಸ್‌ಗಳಿಗೆ ಅಧ್ಯಯನ ಮಾಡುವಾಗ, ಊಟ, ಕೊಠಡಿ, ವಾತಾವರಣ, ಹಣ ಇನ್ನಿತರೆ ಸಮಸ್ಯೆಗಳು ನಿಮಗೆ ದೊಡ್ಡದಾಗಿ ಕಾಣಬಾರದು. ಈ ರಂಗದಲ್ಲಿ ಬಹಳಷ್ಟು ವಿಚಾರಗಳನ್ನು ನಾವು ತ್ಯಾಗ ಮಾಡಬೇಕಾಗುತ್ತದೆ. ಇಲ್ಲಿ ಯಶಸ್ಸು ಎನ್ನುವುದು ಒಂದು ಬಹುವಾರ್ಷಿಕ ಬೆಳೆ ಇದ್ದ ಹಾಗೆ. ಕೇವಲ ಆರೇಳು ತಿಂಗಳಲ್ಲಿ ಯಶಸ್ಸು ಸಿಗುತ್ತದೆಂಬ ಭ್ರಮೆಯಲ್ಲಿ ಇರಬೇಡಿ, ಸತತ ಅಭ್ಯಾಸ ಮತ್ತು ತಾಳ್ಮೆ ಅತ್ಯವಶ್ಯಕ ಎಂದು ಅಭ್ಯರ್ಥಿಗಳಿಗೆ ಕಿವಿ ಮಾತು ಹೇಳಿದರು.

ವೇದಿಕೆಯಲ್ಲಿ ಹಾಜರಿದ್ದ ಇನ್ನಿತರ ಅಧಿಕಾರಿಗಳು ಮಾತನಾಡುತ್ತಾ ಇಷ್ಟು ಸಂಖ್ಯೆಯಲ್ಲಿ ಕನ್ನಡಿಗರು ಐ.ಎ.ಎಸ್. ತರಬೇತಿಗೆಂದು ಉತ್ಸಾಹ ತೋರಿಸುತ್ತಿರುವುದು ಸಂತೋಷದ ವಿಷಯ. ಯು.ಪಿ.ಎಸ್.ಸಿ. ಪರೀಕ್ಷೆಗಳಿಗೆ ಅಧ್ಯಯನ ಮಾಡುವಾಗ ವಿಶ್ಲೇಷಣಾತ್ಮಕವಾಗಿ

ಅಧ್ಯಯನ ಮಾಡಬೇಕು, ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಜಾಗರೂಕತೆಯಿಂದ ಹಿರಿಯ ಅಭ್ಯರ್ಥಿಗಳ ಸಹಾಯ ಪಡೆದು ಖರೀದಿಸಬೇಕು. ಅಧ್ಯಯನ ಮಾಡುವಾಗ ವಿವಿಧ ವಿಷಯಗಳಲ್ಲಿ ಎಷ್ಟನ್ನು ಹೇಗೆ ಓದಬೇಕು, ಇಂಗ್ಲಿಷ್ ಜ್ಞಾನದ ಅವಶ್ಯಕತೆ, ಬರವಣಿಗೆಯ ದಾಟಿ, ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ವಹಿಸಬೇಕಾದ ಜಾಗರೂಕತೆ, ಮುಂತಾದ ವಿಷಯಗಳನ್ನು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಕೊನೆಯಲ್ಲಿ ಅಭ್ಯರ್ಥಿಗಳು ಆಗಮಿಸಿದ್ದ ಅಧಿಕಾರಿಗಳಿಂದ ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಪಡೆದುಕೊಂಡರು.

ಐ.ಎ.ಎಸ್. ಆಕಾಂಕ್ಷಿ ಕುಮಾರಿ ಪವಿತ್ರ ಆಕಾಂಕ್ಷಿಗಳ ಪರವಾಗಿ ಮಾತನಾಡುತ್ತಾ, ನಾವು ಐ.ಎ.ಎಸ್. ತರಬೇತಿಗೆಂದು ಇಷ್ಟು ದೂರದಿಂದ ದೆಹಲಿಗೆ ಬಂದು ಅನಾಥಪ್ರಜ್ಞೆ ನಮ್ಮೆಲ್ಲರನ್ನು ಕಾಡುತ್ತಿತ್ತು. ಇಲ್ಲಿ ಊಟ, ವಾತಾವರಣ ಮುಂತಾದ ಸಮಸ್ಯೆಗಳು ನಮ್ಮನ್ನು ವಿಚಲಿತರನ್ನಾಗಿ ಮಾಡಿದ್ದವು. ಫೌಂಡೇಶನ್ ಈ ಕಾರ್ಯಕ್ರಮವನ್ನು ಆಯೋಜಿಸುವುದರ ಮುಖಾಂತರ ನಮ್ಮಲ್ಲಿನ ಅನಾಥಪ್ರಜ್ಞೆಯನ್ನು ಹೋಗಲಾಡಿಸುವುದರ ಜೊತೆಗೆ, ನಮ್ಮೆಲ್ಲರಲ್ಲೂ ಆತ್ಮಸ್ಥೈರ್ಯ ತುಂಬಿದೆ. ಬೇರೆ ಬೇರೆ ತರಬೇತಿ ಸಂಸ್ಥೆಗಳಲ್ಲಿ ಛಿದ್ರವಾಗಿದ್ದ ನಮ್ಮನ್ನು ಈ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡದ ಮಕ್ಕಳು ಒಂದೇ ಸೂರಿನಡಿ ಒಗ್ಗೂಡಿಸುವ ಮಹತ್ಕಾರ್ಯ ಮಾಡಿದೆ. ನಮ್ಮೆಲ್ಲರನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದು ಊಟದ ವ್ಯವಸ್ಥೆಯನ್ನು ಏರ್ಪಡಿಸಿ ಕುಟುಂಬದ ವಾತಾವರಣವನ್ನುಂಟು ಮಾಡಿದೆ, ನಾವೆಲ್ಲರೂ ಒಳ್ಳೆಯ ಫಲಿತಾಂಶವನ್ನು ಕರ್ನಾಟಕಕ್ಕೆ ಕೊಡುವುದರ ಮೂಲಕ ಫೌಂಡೇಶನ್‌ಗೆ ಗೌರವ ಮತ್ತು ಕೃತಜ್ಞತೆಗಳನ್ನು ಸಲ್ಲಿಸೋಣ ಎಂದು ಸಹ ಅಭ್ಯರ್ಥಿಗಳಲ್ಲಿ ಮನವಿ ಮಾಡಿಕೊಂಡರು.

ಕಾರ್ಯಕ್ರಮವನ್ನು ಕೃಷಿಕ್ ಸರ್ವೋದಯ ಫೌಂಡೇಶನ್, ಖಜಾಂಚಿಗಳಾದ ಶ್ರೀ ಪಿ.ಸಿ. ಶ್ರೀನಿವಾಸ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮ ನಾಡಗೀತೆಯೊಂದಿಗೆ ಪ್ರಾರಂಭವಾಯಿತು.

2007ನೇ ಸಾಲಿನಲ್ಲಿ ಕೇವಲ ಆರು ಕನ್ನಡದ ಅಭ್ಯರ್ಥಿಗಳ ಯಶಸ್ಸಿನೊಂದಿಗೆ ಪ್ರಾರಂಭವಾದ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಕಾರ್ಯಚಟುವಟಿಕೆಗಳು 2014ನೇ ಸಾಲಿನಲ್ಲಿ ಒಟ್ಟು 43 ಅಭ್ಯರ್ಥಿಗಳು ಸೌಲಭ್ಯ ಪಡೆದು ಯು.ಪಿ.ಎಸ್.ಸಿ. ನಾಗರೀಕ ಸೇವೆಗಳಲ್ಲಿ ಯಶಸ್ವಿಯಾಗುವುದರೊಂದಿಗೆ 200ಕ್ಕೂ ಹೆಚ್ಚು ಅಭ್ಯರ್ಥಿಗಳು ಉತ್ತೀರ್ಣರಾಗಿ ಇಂದು ದೇಶದ ವಿವಿಧ ರಾಜ್ಯ, ಇಲಾಖೆ ಹಾಗೂ ವಿವಿಧ ಸೇವೆಗಳಲ್ಲಿ ಸೇವೆ ಸಲ್ಲಿಸುತ್ತಾ, ದೇಶ ಸೇವೆಯ ಜೊತೆಗೆ ವಿವಿಧ ಭಾಗಗಳಲ್ಲಿ ಕನ್ನಡದ ಕಂಪನ್ನು ಬೀರುತ್ತಿದ್ದಾರೆ. 2014ನೇ ಸಾಲಿನಲ್ಲಿ ಕರ್ನಾಟಕದವರು 61 ಅಭ್ಯರ್ಥಿಗಳು ತೇರ್ಗಡೆಯಾಗಿದ್ದರು. ನೆರೆಹೊರೆಯ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಸಾಧನೆ ತೃಪ್ತಿದಾಯಕವಲ್ಲದಿದ್ದರೂ ಯಶಸ್ಸಿನ ಸಂಖ್ಯೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದ ಯಶಸ್ಸಿನ ಸಂಖ್ಯೆ ಕೇವಲ 61ಕ್ಕೆ ಸೀಮಿತವಾಗಿರದೆ ನೂರರ ಗಡಿಯನ್ನು ದಾಟಲು ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆ ದೃಢ ಹೆಜ್ಜೆ ಇಟ್ಟಿದೆ. ಅ

*ಪಿ.ಸಿ. ಶ್ರೀನಿವಾಸ*




ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಕರ್ನಾಟಕ ಕೇಂದ್ರದ ವತಿಯಿಂದ ಕೊಂಡಜ್ಜಿ ಬಸಪ್ಪನವರ ಜನ್ಮ ಶತಾಬ್ದಿ ಆಚರಣೆಯು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನವೆಂಬರ್ 28ರಂದು ನಡೆಯಿತು. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಕೊಂಡಜ್ಜಿ ಬಸಪ್ಪನವರ ಮೇಲೆ ಬರೆದಿರುವ ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರ ಸಚಿವ ಶ್ರೀ ಜಿ.ಎಂ. ಸಿದ್ದೇಶ್ವರ್ ಅವರು ವಹಿಸಿದ್ದರು. ರಾಜ್ಯ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯಾ ಸ್ವಾಗತ ಭಾಷಣ ಮಾಡಿದರು.



ರಾಷ್ಟ್ರಪತಿಯವರಿಂದ ರಾಷ್ಟ್ರಪ್ರಶಸ್ತಿ ಸ್ವೀಕಾರ ಮಾಡಿದ ಕರ್ನಾಟಕದ ಆರು ಮಂದಿ ಅಂಗನವಾಡಿ ಕಾರ್ಯಕರ್ತೆಯರನ್ನು ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 29, 2015ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಪುಷ್ಪಗುಚ್ಛ ಮತ್ತು ಸಂಘದ ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು.



ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 29, 2015ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಗುರ್‌ಗಾಂವ್‌ನ ಶ್ರೀಗಂಧ ಮಹಿಳಾ ತಂಡದ ಸದಸ್ಯೆಯರಿಂದ 'ಹಚ್ಚೇವು ಕನ್ನಡದ ದೀಪ' ಹಾಡನ್ನು ಪ್ರಸ್ತುತಪಡಿಸಿದರು

# ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರದಿಂದ ಕರ್ನಾಟಕ ರಾಜ್ಯೋತ್ಸವ



ಹೊಸ ತಲೆಮಾರಿಗೂ ಕನ್ನಡ ಪ್ರಸ್ತುತವಾಗಿರುವಂತೆ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬಾರಿಸು ಕನ್ನಡ ಡಿಂಡಿಮ ಕಿರು ಚಿತ್ರವನ್ನು ರಚಿಸಿ ಅಂತರ್‌ಜಾಲದಲ್ಲಿ ಅಪ್ ಮಾಡಿ, ಯುವ ಜನಾಂಗಕ್ಕೆ ಹೊಸ ಚೈತನ್ಯ ಮೂಡಿಸಿರುವುದು ಶ್ಲಾಘನೀಯ ಸಂಗತಿ ಎಂದು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಪ್ರೊ. ಪುರುಷೋತ್ತಮ ಬಿಳಿಮಲೆ ಪ್ರಶಂಸೆ ವ್ಯಕ್ತಪಡಿಸಿದರು.

ನವದೆಹಲಿಯಲ್ಲಿ ನವಂಬರ್ 21ರಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಮತ್ತು ದೆಹಲಿ ಕರ್ನಾಟಕ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅನೇಕ ವರ್ಷಗಳಿಂದ ಕರ್ನಾಟಕ ಸಾಹಿತ್ಯ, ಕಲೆ, ಸಂಸ್ಕೃತಿ ಪರಂಪರೆ, ಸಿನಿಮಾ ಸೇರಿದಂತೆ ಕನ್ನಡ ಪರವಾದ ಅನೇಕ ಕಾರ್ಯಕ್ರಮಗಳನ್ನು ದೆಹಲಿ ಸೇರಿದಂತೆ ಹೊರ ರಾಜ್ಯಗಳಲ್ಲಿ ಅನುಷ್ಠಾನಗೊಳಿಸುವ ಮೂಲಕ ಕನ್ನಡ ಭಾಷೆಯು ಮತ್ತಷ್ಟು ಪಸರಿಸುವಂತೆ ಮಾಡುತ್ತಿದೆ. ಕರ್ನಾಟಕ ಸರ್ಕಾರವು ದೆಹಲಿಯಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಇಂತಹ ಅನೇಕ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಹಮ್ಮಿಕೊಂಡು ಕನ್ನಡ ಪರವಾದ ಧ್ವನಿ ಮತ್ತಷ್ಟು ಗಟ್ಟಿಯಾಗಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿ ಕಚೇರಿಯ ಮಾಜಿ ಮಾಧ್ಯಮ ಸಲಹೆಗಾರರಾದ ಶ್ರೀ ಐ. ರಾಮಮೋಹನ ರಾವ್ ಅವರು ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯು ಸಮೃದ್ಧವಾಗಿದ್ದು, ಸಂರಕ್ಷಿಸಲು ಎಲ್ಲರೂ ಕಟಿಬದ್ಧರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ, ಕನ್ನಡ ಭಾಷೆ, ಕಲೆ, ಸಂಸ್ಕೃತಿ ಪರಂಪರೆಯು ದೆಹಲಿಯಲ್ಲಿ ಪಸರಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘವು ಅನೇಕ ಕನ್ನಡ ಪರ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ ಎಂದರು.

ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ.ಎಸ್. ಕಲ್ಲೂರು, ಹಾಸ್ಯ ಕಲಾವಿದರಾದ ಶ್ರೀ ರಿಚರ್ಡ್ ಲೂಯಿಸ್ ಮತ್ತಿತರರು ಉಪಸ್ಥಿತರಿದ್ದರು. ವಾರ್ತಾಧಿಕಾರಿ ಶ್ರೀ ಹೆಚ್. ಶ್ರೀನಿವಾಸ ಸ್ವಾಗತಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಶ್ರೀ ಸಖಾರಾಮ ಉಪ್ಪೂರು ಕಾರ್ಯಕ್ರಮ ನಿರ್ವಹಿಸಿದರು.

ಖ್ಯಾತ ಕಲಾವಿದ ಶ್ರೀ ರಾಮಚಂದ್ರ ಹಡಪದ ಮತ್ತು ತಂಡ ಅವರು ಸಂಗೀತ, ಜಾನಪದ ಗಾಯನ ದೆಹಲಿ ಕನ್ನಡಿಗರ ಮನಸೂರೆಗೊಂಡಿತು. ಹಾಸ್ಯ ಕಲಾವಿದರಾದ ಶ್ರೀ ರಿಚರ್ಡ್ ಲೂಯಿಸ್, ಆನಂದ ಮೈಸೂರ್ ಮತ್ತು ತಂಡ ದೆಹಲಿ ಕನ್ನಡಿಗರನ್ನು ಎದೆ ತುಂಬಿ ನಗಿಸಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನಿರ್ಮಾಣ ಮಾಡಿದ ಬಾರಿಸು ಕನ್ನಡ ಡಿಂಡಿಮ, ಜೀವಸ್ವರ ಹಾಗು ಕನ್ನಡ ನಮ್ಮ ಹೆಮ್ಮೆ ಕಿರುಚಿತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ದೆಹಲಿ ಕನ್ನಡಿಗರಿಗೆ ಕರ್ನಾಟಕ ದರ್ಶನ ಮಾಡಿಸಲಾಯಿತು. ಕನ್ನಡ ಸಂಸ್ಕೃತಿ ಪ್ರತಿಬಿಂಬಿಸುವ ಹಾಗೂ ಸರ್ಕಾರ ಅಭಿವೃದ್ಧಿ ಯೋಜನೆಗಳ ಕುರಿತು ಏರ್ಪಡಿಸಿದ್ದ ವಸ್ತುಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಅ








ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಮತ್ತು ಗುರ್‌ಗಾಂವ್ ಕರ್ನಾಟಕ ಸಂಘ ಇವರ ಸಂಯುಕ್ತಾಶ್ರಯಲ್ಲಿ ಹರಿಯಾಣ ರಾಜ್ಯದ ಗುರ್‌ಗಾಂವ್‌ನಲ್ಲಿ ನವಂಬರ್ 22 ರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಕನ್ನಡ ಸಂಗೀತ ಕಾರ್ಯಕ್ರಮಗಳು ಕನ್ನಡಿಗರ ಮನಸೂರೆಗೊಳಿಸಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಸುಧೀರ್ ಕೃಷ್ಣ, ಹೊರ ರಾಜ್ಯಗಳಲ್ಲಿ ಕನ್ನಡಿಗರಿಗೆ ನಿರಂತರವಾಗಿ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅನೇಕ ವರ್ಷಗಳಿಂದ ಕರ್ನಾಟಕ ಸಾಹಿತ್ಯ, ಕಲೆ, ಸಂಸ್ಕೃತಿ ಪರಂಪರೆ, ಸಿನಿಮಾ ಸೇರಿದಂತೆ ಕನ್ನಡ ಪರವಾದ ಅನೇಕ ಕಾರ್ಯಕ್ರಮಗಳನ್ನು ದೆಹಲಿ ಸೇರಿದಂತೆ ಹೊರರಾಜ್ಯಗಳಲ್ಲಿ ಅನುಷ್ಠಾನಗೊಳಿಸುವ ಮೂಲಕ ಕನ್ನಡ ಭಾಷೆಯು ಮತ್ತಷ್ಟು ಪಸರಿಸುವಂತೆ ಮಾಡುತ್ತಿದೆ. ಕರ್ನಾಟಕ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಇಂತಹ ಅನೇಕ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಆಯೋಜಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಮಂತ್ರಿ ಕಚೇರಿಯ ಮಾಜಿ ಮಾಧ್ಯಮ ಸಲಹೆಗಾರರಾದ ಶ್ರೀ ಐ. ರಾಮಮೋಹನ ರಾವ್ ಅವರು ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯು ಸಮೃದ್ಧವಾಗಿದ್ದು, ಸಂರಕ್ಷಿಸಲು ಎಲ್ಲರೂ ಕಟಿಬದ್ಧರಾಗಬೇಕು. ಇದಕ್ಕಾಗಿ ಕನ್ನಡಿಗರು ಸಂಘಟಿತರಾಗಬೇಕು ಎಂದರು. ಗುರ್‌ಗಾಂವ್ ಕನ್ನಡ ಸಂಘದ ಮಾಜಿ ಅಧ್ಯಕ್ಷ ಶ್ರೀ ವಸಂತ ರಾವ್, ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು. ವಾರ್ತಾಧಿಕಾರಿ ಶ್ರೀ ಹೆಚ್. ಶ್ರೀನಿವಾಸ ಸ್ವಾಗತಿಸಿದರು. ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಡಿ.ವಿ.ಎಸ್. ಮೂರ್ತಿ ವಂದಿಸಿದರು.

ಖ್ಯಾತ ಕಲಾವಿದ ಶ್ರೀ ರಾಮಚಂದ್ರ ಹಡಪದ ಮತ್ತು ತಂಡ ಅವರು ಸಂಗೀತ , ಜಾನಪದ ಗಾಯನ ಕನ್ನಡಿಗರ ಮನಸೂರೆಗೊಂಡಿತು. ಹಾಸ್ಯ ಕಲಾವಿದರಾದ ರಿಚರ್ಡ್ ಲೂಯೀಸ್, ಆನಂದ ಮೈಸೂರ್ ಮತ್ತು ತಂಡ ದೆಹಲಿ ಕನ್ನಡಿಗರನ್ನು ಎದೆ ತುಂಬಿ ನಗಿಸಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನಿರ್ಮಾಣ ಮಾಡಿದ ಬಾರಿಸು ಕನ್ನಡ ಡಿಂಡಿಮ, ಜೀವಸ್ವರ ಹಾಗು ಕನ್ನಡ ನಮ್ಮ ಹೆಮ್ಮೆ ಕಿರುಚಿತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ದೆಹಲಿ ಕನ್ನಡಿಗರಿಗೆ ಕರ್ನಾಟಕ ದರ್ಶನ ಮಾಡಿಸಲಾಯಿತು. ಕನ್ನಡ ಸಂಸ್ಕೃತಿ ಪ್ರತಿಬಿಂಬಿಸುವ ಹಾಗು ಸರ್ಕಾರ ಅಭಿವೃದ್ಧಿ ಯೋಜನೆಗಳ ಕುರಿತು ಏರ್ಪಡಿಸಿದ್ದ ವಸ್ತುಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಅ

---

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಮತ್ತು ಚಂಡೀಗಡ ಕನ್ನಡ ಸಂಘ ಇವರ ಸಂಯುಕ್ತಾಶ್ರಯಲ್ಲಿ ಚಂಡೀಗಢದಲ್ಲಿ ನವಂಬರ 25ರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮೆಚ್ಚುಗೆ ವ್ಯಕ್ತಪಡಿಸಿದ ಚಂಡೀಗಡದ ಉಪಮೇಯರ್ ಶ್ರೀಮತಿ ಗುರುಬಕ್ಸ್ ರಾವತ್ ಕನ್ನಡ ಸಂಘಕ್ಕೆ ನಿವೇಶನ ಕೊಡುವ ಭರವಸೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಂಸ್ಕೃತಿ ಕಾರ್ಯಕ್ರಮಗಳು ಮೋಹಕವಾಗಿದ್ದು, ಮನ ಮುಟ್ಟುತ್ತಿವೆ. ಇಂತಹ ಕಾರ್ಯಕ್ರಮಗಳಿಗೆ ಚಂಡೀಗಡ ಮಹಾನಗರ ಪಾಲಿಕೆಯಿಂದ ಎಲ್ಲಾ ನೆರವು ನೀಡಲಾಗುವುದು. ಸಂಘವು ನಿವೇಶನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿದರೆ ಪಾಲಿಕೆಯು ಅನುಮೋದಿಸುವಂತೆ ಶ್ರಮಿಸಲಾಗುವುದು. ಹರಿಯಾಣದ ಮುಖ್ಯ ಚುನಾವಣಾಧಿಕಾರಿ ಶ್ರೀಕಾಂತ ವಾಲ್ಗದ್ ಮಾತನಾಡಿ, ಚಂಡೀಗಡ ಸೇರಿದಂತೆ ಹೊರರಾಜ್ಯಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅರ್ಥಪೂರ್ಣವಾದ ಸಂಗತಿಯಾಗಿದೆ. ಹೊರ ರಾಜ್ಯಗಳಲ್ಲಿರುವ ಕನ್ನಡಿಗರು ಕನ್ನಡ ಭಾಷೆ, ಸಂಸ್ಕೃತಿಯನ್ನು ಪಸರಿಸುವಂತೆ ಮಾಡಲು ನೆರವಾಗುತ್ತದೆ. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಶ್ಲಾಘನೀಯ ಸಂಗತಿಯಾಗಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ಹಮ್ಮಿಕೊಳ್ಳಬೇಕು. ಕರ್ನಾಟಕ ಒಂದು ಜಗತ್ತು, ಕರ್ನಾಟಕದಲ್ಲಿ ಎಲ್ಲಾ ವಿಶೇಷತೆಯೂ ಇದೆ ಎಂದು ಬಣ್ಣಿಸಿದರು.

ಹಿರಿಯ ರಂಗಕರ್ಮಿ ಶ್ರೀ ಹಿರಣ್ಣಯ್ಯ ಮಾತನಾಡಿ, ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳು ಕನ್ನಡದ ಹಬ್ಬವಾಗಿ ಆಚರಿಸಬೇಕು. ಕನ್ನಡ ಚಿತ್ರರಂಗ, ಪುಸ್ತಕಗಳ ಪ್ರಕಟಣೆ ಸೇರಿದಂತೆ ಕನ್ನಡ ಭಾಷೆಗೆ ಪೂರಕವಾಗಿ ಅನೇಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವುದು ಭಾಷೆಯ ಸಮೃದ್ಧಿಯ ಸಂಕೇತವಾಗಿದೆ ಎಂದು ತಿಳಿಸಿದರು.




ಕೇಂದ್ರ ಕಾನೂನು ಸಚಿವರ ಅಪರ ಆಪ್ತ ಕಾರ್ಯದರ್ಶಿ ಶ್ರೀ ಚಿರಂಜೀವಿ ಮಾತನಾಡಿ, ಕನ್ನಡ ಸಂವಹನ ಭಾಷೆ. ಕನ್ನಡಿಗರಿಂದಲೇ ಕನ್ನಡ ಬೆಳೆಯಬೇಕು. ಹೊರ ರಾಜ್ಯಗಳಲ್ಲಿರುವ ಎಲ್ಲಾ ಕನ್ನಡಿಗರ ಮನೆಯಲ್ಲಿ ಮಕ್ಕಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಮೂಲಕ ಭಾಷೆಯ ಪ್ರೇಮವನ್ನು ಬೆಳೆಸಬೇಕು. ಕನ್ನಡ ಭಾಷೆಗೆ 2000 ವರ್ಷಗಳ ಇತಿಹಾಸವಿದ್ದು, ಉತ್ತಮವಾದ ಪರಂಪರೆಯನ್ನು ಹೊಂದಿದೆ ಎಂದು ವಿವರಿಸಿದರು.

ಚಂಡೀಗಢ ಕನ್ನಡ ಸಂಘದ ಅಧ್ಯಕ್ಷ ಶ್ರೀ ಮನೋಹರ ಅಧ್ಯಕ್ಷತೆ ವಹಿಸಿದ್ದರು. ವಾರ್ತಾಧಿಕಾರಿ ಶ್ರೀ ಹೆಚ್. ಶ್ರೀನಿವಾಸ ವಂದಿಸಿದರು. ಅ

*ಅಮರೇಶ್*

# ಬದುಕಿನ ಸತ್ಯಗಳನ್ನು ತೋರಿಸಿದ ಎರಡು ನಾಟಕಗಳು



ನಾ ಬದುಕಲಿಕ್ಕೆ ಒಲ್ಲೆಪಾ

ದೆಹಲಿಯ 'ದಿನಕರ' ತಂಡದವರಿಂದ ಶಿವಾನಂದ ಇಂಗಳೇಶ್ವರ್ ಅವರ ನಿರ್ದೇಶನದಲ್ಲಿ "ಕೋರ್ಟ್ ಮಾರ್ಷಲ್" ಮತ್ತು "ನಾ ಬದುಕಲಿಕ್ಕೆ ಒಲ್ಲೆಪಾ" ಎಂಬ ಎರಡು ನಾಟಕಗಳನ್ನು ದೆಹಲಿ ಕರ್ನಾಟಕ ಸಂಘದ ರಂಗದ ಮೇಲೆ ಇದೇ ನವಂಬರ್ 15ರಂದು ಪ್ರದರ್ಶಿಸಲಾಯಿತು.

ಡಾ. ಲೋಹಿತ್ ನಾಯ್ಕರ, ಧಾರವಾಡ ರಚಿಸಿದ ಈ ಪ್ರಸ್ತುತಿಗಳು ವಿಶಿಷ್ಟವಾಗಿದ್ದವು. ಮಿಲಿಟರಿಯಿಂದ ನಿವೃತ್ತನಾಗಿ ಬಹಳ ಕಟ್ಟುನಿಟ್ಟಿನ ಜೀವನ ನಡೆಸುತ್ತಿದ್ದೇನೆ ಎಂದು ತಿಳಿದುಕೊಂಡಿರುವ ಲೆಫ್ಟಿನೆಂಟ್‌ನೊಬ್ಬ ತನ್ನ ಮನೆಯಲ್ಲಿ ನಡೆಸುತ್ತಿದ್ದ ಕೋರ್ಟ್ ಮಾರ್ಷಲ್‌ನ ಒಂದು ಮಾದರಿಯನ್ನು (ಕೃಷ್ಣರಾಜ್ ನೆಲ್ಲಿ ಹಾಗೂ ವಿನೋದ್)–ತಂದೆ ಮಗನ ನಡುವೆ ನಡೆಯುವ ಮಿಲಿಟರಿ ಮಾದರಿ ಸಂಭಾಷಣೆಗಳ ಮೂಲಕ ಅತ್ಯಂತ ವಿಭಿನ್ನ ರೀತಿಯಲ್ಲಿ ಬಿಚ್ಚಿಡುತ್ತಾ ಹೋಗುವ ಈ ಕಿರು ನಾಟಕ ಇಂದಿನ ಆಧುನಿಕ ಜಗತ್ತಿನಲ್ಲಿ ತಂದೆ–ಮಗ, ಗಂಡ–ಹೆಂಡತಿ ಹಾಗೂ ಸಂಸಾರ, ಮನೆ, ಸಮಾಜದ ಒಂದು ಕಿರುಚಿತ್ರವನ್ನು ಪ್ರೇಕ್ಷಕರಿಗೆ ಕಟ್ಟಿಕೊಡುತ್ತದೆ.

ತಾನೊಬ್ಬ ಮಿಲಿಟರಿ ಅಧಿಕಾರಿ ಹಾಗಾಗಿ ಬಹಳ ಶಿಸ್ತುವಂತ ಮತ್ತು ಪ್ರಾಮಾಣಿಕ ಎಂದು ಅಂದುಕೊಂಡು ಮಗ ಮಡದಿಯನ್ನು ದಿನನಿತ್ಯ ಕೋರ್ಟ್ ಮಾರ್ಷಲ್ ಮಾಡಿ, ತೀರ್ಪು ನೀಡಿ ಶಿಕ್ಷಿಸುತ್ತಿದ್ದ ಲೆಫ್ಟಿನೆಂಟ್ ತಂದೆಯನ್ನು ಮಗನೇ ಒಂದು ದಿನ ತಿರುಗೇಟು ಹಾಕಿ "ಕೋರ್ಟ್ ಮಾರ್ಷಲ್" ನಡೆಸಿ ಪೇಚಿಗೆ ಸಿಕ್ಕಿಸಿ ಹಾಕುವ ಒಂದು ಪ್ರಸಂಗ ನಾಟಕದ ಮುಖ್ಯ ವಸ್ತು.

ಒಳ್ಳೆಯ ರಂಗಸಜ್ಜಿಕೆ, ಪ್ರಸಾದನ ಹಾಗೂ ನಿರ್ದೇಶನವಿದ್ದ ನಾಟಕದಲ್ಲಿ ಎಲ್ಲೋ ತಾಲೀಮು ಕಡಿಮೆ ಆದಂತೆ ಭಾಸವಾಗುತ್ತಿತ್ತು. ಮುಖ್ಯ ಪಾತ್ರಧಾರಿ ಅಲ್ಲಲ್ಲಿ ಎಡವಿದ್ದು ಹಾಗೂ ಮಿಲಿಟರಿ ದರ್ಪ ತೋರಿಸುವಲ್ಲಿ ಫೈಲಾದಂತೆ ಕಂಡು ಬಂತು. ಬೆಳಕು ಹಾಗೂ ಧ್ವನಿ ವ್ಯವಸ್ಥೆ ಹಾಗೂ ಸಂಗೀತ ಇನ್ನು ಉತ್ತಮ ಮಟ್ಟದ್ದಾಗಿದ್ದರೆ ನಾಟಕ ಇನ್ನಷ್ಟು ಚೆನ್ನಾಗಿ ಮೂಡಿ ಬರುತ್ತಿತ್ತು ಅನ್ನಿಸಿತ್ತು. ಇಬ್ಬರೂ ನಟರು ಇಷ್ಟು ಮಾಡಿದ್ದನ್ನು ಮಾತ್ರ ಅಭಿನಂದಿಸಲೇಬೇಕು.

"ನಾ ಬದುಕಲಿಕ್ಕೆ ಒಲ್ಲೆಪಾ" ನಾಟಕ ಓರ್ವ ಮುದಿ ಹೆಂಗಸು ಆಸ್ಪತ್ರೆಯ ಬೆಡ್ಡ್‌ನ ಮೇಲೆ ನರಳುತ್ತಾ ಸಂಸಾರದ ಎಲ್ಲಾ ಕಷ್ಟಗಳನ್ನು ಮರುಕಳಿಸುತ್ತಾ ಕೊನೆಗೆ ತಾನೇ ತನ್ನ ಕೈಯಾರೆ ತನ್ನ ಗಂಡನನ್ನು ತಿಳಿಯದೆ ಕೊಂದೆನೆಂಬ ಅರಿವಾಗಿ ಸಾಯುವ ಒಂದು ಗಂಭೀರ ಹಾಗೂ ಸರಳ ಸತ್ಯದ ಕತೆಯಾಗಿತ್ತು.

ಈಗಾಗಲೇ ತಮ್ಮ ವಿಶೇಷ ಪ್ರತಿಭೆ ಮತ್ತು ಕ್ರಿಯಾಶೀಲತೆಗಳಿಂದ ಓರ್ವ ಉತ್ತಮ ನಟಿ ಎಂದು ಗುರುತಿಸಿಕೊಂಡಿರುವ ಶಿಲ್ಪಾ ಹರಿಪ್ರಿಯ ಅವರು ಮುದುಕಿ, ರೋಗಿ ತಾಯಿಯ ಪಾತ್ರದಲ್ಲಿ ಮತ್ತೊಮ್ಮೆ ತಮ್ಮ ನಟನಾ ಸಾಮರ್ಥ್ಯವನ್ನು ಮೆರೆದಿದ್ದಾರೆ. ಸಾಧಾರಣವಾಗಿ ಅಷ್ಟು ಚಿಕ್ಕ ವಯಸ್ಸಿನಲ್ಲಿ ಅಂತಹ ಗಂಭೀರ ಹಿರಿಯ ರೋಗಿಯ ಪಾತ್ರವನ್ನು ಮಾಡುವುದು ಸಾಮಾನ್ಯದ ಮಾತಲ್ಲ. ಮಗನಾಗಿ ನಟಿಸಿದ ಶಿವಪ್ಪನವರು ಕೂಡಾ ತಮ್ಮ ಪಾತ್ರಕ್ಕೆ ಜೀವ ತುಂಬಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ತಾಯಿಯ ರೋಗ–ನೋವಿನ ಸಂಕಟದ ನಡುವೆ ಆಗಾಗ ಕೇಳಿ ಬರುವ ಜೀವನದ ಕೆಲವು ಕಟು ಸತ್ಯಗಳನ್ನು – ಬಂಗಾರ, ಅತ್ತೆ–ಸೊಸೆಯರ ಜಗಳ, ಮಗನ ಮೇಲಿನ ಪ್ರೇಮ ಇತ್ಯಾದಿಗಳನ್ನು ತಾಯಿ ಮಗನ ಸಂಭಾಷಣೆಗಳು ಮಾರ್ಮಿಕವಾಗಿ ಸಭಿಕರನ್ನು ಮುಟ್ಟಿಸುವಲ್ಲಿ ಈ ಜೋಡಿ ಯಶಸ್ವಿಯಾಗಿದೆ.

ಈ ನಾಟಕದ ರಂಗಸಜ್ಜಿಕೆ, ಬೆಳಕು, ಸಂಗೀತ ಹಾಗೂ ವಸ್ತ್ರಾಲಂಕಾರಗಳು ಬಹಳ ಅಚ್ಚುಕಟ್ಟಾಗಿದ್ದವು. ಕೆಲವೊಮ್ಮೆ ಮುದುಕಿಯ ಮಾತುಗಳು ಎಲ್ಲೋ ರಿಪೀಟಾದಂತೆ ಅನ್ನಿಸಿ ನಾಟಕ ಸ್ವಲ್ಪ ಜಗ್ಗಿದಂತೆ ಕಾಣಿಸಿತ್ತು. ಇಂಗಳೇಶ್ವರ ಅವರ ಈ ಪ್ರಯತ್ನಕ್ಕೆ ಸಲಾಮ್. ಅ

**ಸಖಾರಾಮ ಉಪ್ಪೂರು**



# ಹೊಸ ಪ್ರಯೋಗದ ಕಿರು ನಾಟಕಗಳು

## "ನಾ ಬದುಕಲಿಕ್ಕೆ ಒಲ್ಲೆಪಾ" ಮತ್ತು 'ಕೋರ್ಟ್ ಮಾರ್ಷಲ್'

'ದಿನಕರ' ತಂಡ ಪ್ರಸ್ತುತಪಡಿಸಿದ ಡಾ. ಲೋಹಿತ್ ನಾಯ್ಕರ ಅವರು ರಚಿಸಿರುವ 'ಕೋರ್ಟ್ ಮಾರ್ಷಲ್' ಮತ್ತು 'ನಾ ಬದುಕಲಿಕ್ಕೆ ಒಲ್ಲೆಪಾ' ಎಂಬ ಎರಡು ಕಿರುನಾಟಕಗಳನ್ನು ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ, ದೆಹಲಿ ಕರ್ನಾಟಕ ಸಂಘದ ರಂಗಮಂದಿರದಲ್ಲಿ ಇದೇ ನವೆಂಬರ್ 15ರಂದು ಪ್ರದರ್ಶನಗೊಂಡವು. ಸುಮಾರು 40 ರಿಂದ 50 ನಿಮಿಷಗಳ ಕಾಲಾವಧಿಯ ಈ ಎರಡು ನಾಟಕಗಳು ವಿಭಿನ್ನ ಪ್ರಯೋಗವಾಗಿದ್ದು, ನಾವು ಮೊದಲೆಲ್ಲಾ ನೋಡಿರುವ/ಮಾಡಿರುವ ನಾಟಕಗಳಲ್ಲಿ ಕನಿಷ್ಠ ಎಂದರೂ 6 ರಿಂದ 10 ಪಾತ್ರಧಾರಿಗಳು ಇದ್ದೇ ಇರುತ್ತಿದ್ದರು. ಆದರೆ ನನಗೆ ತಿಳಿದ ಪ್ರಕಾರ, ಇದೇ ಮೊದಲ ಬಾರಿಗೆ ನಿರ್ದೇಶಕರಾದ ಶಿವಾನಂದ ಇಂಗಳೇಶ್ವರ ಅವರು ಹೊಸ ಪ್ರಯೋಗಕ್ಕೆ ನಾಂದಿ ಹಾಕಿ, ಈ ಎರಡೂ ದ್ವಿಪಾತ್ರ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿ, ಪ್ರೇಕ್ಷಕರಿಂದ ಅಪಾರ ಮೆಚ್ಚುಗೆಯನ್ನು ಗಳಿಸಿದರು.

ಮೊದಲು ಈ ನಾಟಕದ ಬಗ್ಗೆ ನಮಗೆ ತಿಳಿದಾಗ ನಮಗೆಲ್ಲಾ ಇದೊಂದು ಕುತೂಹಲದ ವಿಷಯವಾಗಿತ್ತು. ಯಾಕೆಂದರೆ ಎರಡೇ ಎರಡು ಪಾತ್ರಧಾರಿಗಳಿಂದ ಸುಮಾರು ಒಂದು ಗಂಟೆಯ ಕಾಲ ನಾಟಕವನ್ನು ಹೇಗೆ ಮಾಡಬಹುದು? ಅಂಥದ್ದೇನು ವಿಶೇಷತೆ ಇದೆ ಇದರಲ್ಲಿ? ಇಂತಹ ತವಕ ನಮ್ಮಲ್ಲೆಲ್ಲಾ ಇದ್ದಿದ್ದರಿಂದ ನಾವೆಲ್ಲಾ ಸಮಯಕ್ಕೆ ಸರಿಯಾಗಿ ದೆಹಲಿ ಕರ್ನಾಟಕ ಸಂಘದ ಸಭಾಂಗಣಕ್ಕೆ ತಲುಪಿದ್ದೆವು.

ಮೊದಲು ಕೋರ್ಟ್ ಮಾರ್ಷಲ್ ಎಂಬ ಕಿರುನಾಟಕದ ಪ್ರದರ್ಶನವಾಯಿತು. ಸುಮಾರು 40 ರಿಂದ 50 ನಿಮಿಷಗಳವರೆಗೆ ಈ ನಾಟಕ ನಡೆದಿತ್ತು. ಮಗನ ಪಾತ್ರಧಾರಿಯಾಗಿ ವಿನೋದ ಕುಮಾರ ಮತ್ತು ತಂದೆಯ ಪಾತ್ರಧಾರಿಯಾಗಿ ಕೃಷ್ಣರಾಜ್ ನೆಲ್ಲಿಯವರು ತುಂಬಾ ಚೆನ್ನಾಗಿ ಅಭಿನಯಿಸಿದ್ದರು. ತಂದೆಯ ಪಾತ್ರಕ್ಕೆ ದಿನಕರ ತಂಡದಿಂದ ಇವರೇ ಸೈ ಎಂದೆನಿಸುತ್ತಿತ್ತು. ಹಾಗೂ ಮಗನ ಪಾತ್ರಕ್ಕೆ ತಂಡದ ಕಿರಿಯ ಕಲಾವಿದ ವಿನೋದನೇ ಸರಿ ಅನ್ನುವಂತಿತ್ತು.

ಜನರೇಶನ್ ಗ್ಯಾಪ್ ಮೇಲೆ ಬೆಳಕು ಚೆಲ್ಲುವ ನಾಟಕ ಕೋರ್ಟ್ ಮಾರ್ಷಲ್, ನಿವೃತ್ತ ಆರ್ಮಿ ಆಫೀಸರ್ ಆಗಿರುವ ತಂದೆ, ತುಂಬಾ ಶಿಸ್ತಿನ ಜೀವನ ಮಾಡುತ್ತಿದ್ದು, ತನ್ನ ಪ್ರತಿಯೊಂದು ದಿನಚರಿಯನ್ನೂ ಸಮಯಕ್ಕೆ ಸರಿಯಾಗಿ ಪಾಲಿಸುತ್ತಿರುತ್ತಾನೆ. ಅದೇ ರೀತಿ ತನ್ನ ಹೆಂಡತಿ ಮತ್ತು ಮಗನೂ ಕೂಡ ಅನುಸರಿಸಬೇಕೆಂಬ ಬಯಕೆ ಹೊಂದಿರುತ್ತಾನೆ. ಆದರೆ ಮಗ ಈಗ ತಾನೇ ಕಾಲೇಜು ಮೆಟ್ಟಲೇರಿದ ಹದಿಹರೆಯ ಹುಡುಗನಾಗಿದ್ದು, ಮನೆಯ ಶಿಸ್ತಿನ ಸಂಕೋಲೆಯಿಂದ ಬೇಸತ್ತು, ತನಗನಿಸಿದಂತೆ ಸ್ವತಂತ್ರವಾಗಿ ಬದುಕ ಬಯಸುತ್ತಿರುತ್ತಾನೆ. ತಪ್ಪೇ ಮಾಡದಿರುವ ಮನುಷ್ಯ, ಪರ್ಫೆಕ್ಟ್ ಸೋಲ್ಜರ್ ಎಂದುಕೊಂಡ ತಂದೆ, ಮಗನ ಕೆಲವು ತಪ್ಪುಗಳನ್ನು ಕಂಡುಹಿಡಿದು, ಅವನನ್ನು ಕಟಕಟೆಯಲ್ಲಿ ನಿಲ್ಲಿಸಿ, ಅದಕ್ಕೆ ತಕ್ಕ ಶಿಕ್ಷೆಗಳನ್ನು ಕೊಡಲು ಮುಂದಾಗುತ್ತಾನೆ. ಆದರೆ ಮಗನು ತನ್ನ ಚಾಣಾಕ್ಷತನದಿಂದ ತಂದೆಯನ್ನೇ ಕಟಕಟೆಯಲ್ಲಿ ನಿಲ್ಲಿಸಿ, ಅವನೇ ತನ್ನ ತಪ್ಪುಗಳನ್ನು ಒಪ್ಪಿಕೊಂಡು ತಲೆತಗ್ಗಿಸುವಂತೆ ಮಾಡುತ್ತಾನೆ.

ಈ ನಾಟಕದಲ್ಲಿ ಕಂಡುಬಂದ ಒಂದು ಮುಖ್ಯವಾದ ಸಂದೇಶವೆಂದರೆ, ನಾವು ನಮ್ಮ ಜೀವನದಲ್ಲಿ ಎಷ್ಟೇ ಶಿಸ್ತನ್ನು ಅಳವಡಿಸಿಕೊಂಡರೂ, ಮನುಷ್ಯ ತಪ್ಪು ಮಾಡುವುದು ಸಹಜ. ಗೊತ್ತಿದ್ದೋ ಗೊತ್ತಿಲ್ಲದೆಯೋ ತಪ್ಪುಗಳಾಗುತ್ತವೆ. ಆದರೆ ಅದನ್ನು ಒಪ್ಪಿ ತಿದ್ದಿಕೊಳ್ಳುವ ಬದಲಾಗಿ, ತನ್ನ ತಪ್ಪನ್ನು ಮುಚ್ಚಿಟ್ಟು ಇನ್ನೊಬ್ಬರ ಮೇಲೆ ಹೇರುವುದು ಅಥವಾ ಇನ್ನೊಬ್ಬರ ತಪ್ಪನ್ನು ಎತ್ತಿ ತೋರಿಸುವುದು ಮನುಷ್ಯನ ಒಂದು ಸ್ವಭಾವ.

ಮತ್ತೊಂದು ಕಿರುನಾಟಕ 'ನಾ ಬದುಕಲಿಕ್ಕೆ ಒಲ್ಲೆಪಾ'. ತಾಯಿಯ ಪಾತ್ರದಲ್ಲಿ ಶಿಲ್ಪಾ ಹರಿಪ್ರಿಯ ಮತ್ತು ಮಗನ ಪಾತ್ರದಲ್ಲಿ ಶಿವಪ್ಪ ಅವರು ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬಿದರು. ಇದರಲ್ಲಿ ತಾಯಿ ಅಸ್ವಸ್ಥತೆಯಿಂದ ಹಾಸಿಗೆ ಹಿಡಿದಿದ್ದು, ಆಸ್ಪತ್ರೆಯಲ್ಲಿ ತನ್ನ ಜೀವನದ ಅಂತಿಮ ಘಟ್ಟದ ಹಂತದಲ್ಲಿರುತ್ತಾಳೆ. ನೋವಿನಿಂದ ಬಳಲುತ್ತಿರುವ ತಾಯಿ ನೋವನ್ನು ಸಹಿಸಲಾಗದೇ ಸಾಯುವ ಆಸೆ ವ್ಯಕ್ತಪಡಿಸಿದಾಗ, ಮಗನು ಅದು ಕಾನೂನಿನ ವಿರುದ್ಧ ಎಂದು ಸಮಾಧಾನಿಸಲು ಪ್ರಯತ್ನಿಸುವನು. ದಯಾಮರಣ ನಮ್ಮ ಧರ್ಮದಲ್ಲಿದೆ, ಆದರೆ ಕಾನೂನಿನಲ್ಲಿ ಇಲ್ಲದಿರಲು ಕಾರಣ ಕೇಳುವಳು. ಮಗನು ವಕೀಲರನ್ನು ಕಂಡು ತಾಯಿಗೆ ದಯಾಮರಣದ ವಿವರ ನೀಡುವನು. ಅವಳ ಶರೀರದ ಎಲ್ಲಾ ಅಂಗಾಂಗಗಳು ನಿಷ್ಕ್ರಿಯಗೊಂಡು, ಏನೂ ಕೆಲಸ ಮಾಡದ ಸ್ಥಿತಿಯಲ್ಲಿದ್ದರೂ, ಅವಳ ಆಸೆ ಮಾತ್ರ ಇನ್ನೂ ತಾಜಾವಾಗಿರುತ್ತದೆ. ಅವಳಿಗೆ ತನ್ನ ಆಸ್ತಿ, ಒಡವೆಗಳ ಮೇಲಣ ವ್ಯಾಮೋಹ, ಚಿಕ್ಕ ಮಗನ ಮೇಲಿನ ಒಲವು ಮತ್ತು ಸೊಸೆಯಂದಿರ ಮೇಲಣ ಅತ್ತೆತನ ಇನ್ನೂ ಹಸಿರಾಗಿಯೇ ಇರುತ್ತದೆ. ಮನುಷ್ಯನ ಆಸೆಗೆ ಅಂತ್ಯವೇ ಇಲ್ಲ. ಅವನು ಸಾಯುವ ಸ್ಥಿತಿಯಲ್ಲಿದ್ದರೂ ಅವನ ಆಸ್ತಿ, ಐಶ್ವರ್ಯ ಸಂಪತ್ತಿನ ಆಸೆ ಮಾತ್ರ ಇನ್ನೂ ಸಾಯುವ ಸ್ಥಿತಿಯಲರಲಿ ಇರುವುದಿಲ್ಲ ಅನ್ನುವ ವಿಚಾರ ಈ ನಾಟಕದಲ್ಲಿ ಕಂಡು ಬಂತು.

ಈ ನಾಟಕಗಳು ಯಶಸ್ವಿಯಾಗಲು ರಂಗಸಜ್ಜಿಕೆಗೆ ಸುಧೀರ್ ಫಡ್ನೀಸ್, ತಾಂತ್ರಿಕ ಮತ್ತು ಸಂಗೀತಕ್ಕೆ ಹರಿಪ್ರಿಯ ಮತ್ತು ಪ್ರಸಾದನಕ್ಕೆ ಶಶಿಕಾಂತ ಪಾಟೀಲ್ ಅವರ ಸಹಾಯ ಹಸ್ತವನ್ನು ಇಲ್ಲಿ ನೆನಪಿಸಲೇಬೇಕು. ಇಷ್ಟೇ ಅಲ್ಲದೆ ಇಂತಹ ಹಲವು ಕಾರ್ಯಕ್ರಮಗಳಿಗೆ ದೆಹಲಿ ಕರ್ನಾಟಕ ಸಂಘವು ಒಂದು ವೇದಿಕೆಯಾಗಿದ್ದು ನಮ್ಮ ನಿಮ್ಮೆಲ್ಲರಿಗೂ ಇಲ್ಲಿ ಸಿಗುವ ಅವಕಾಶ ಮತ್ತು ಪ್ರೋತ್ಸಾಹವನ್ನು ಮರೆಯುವಂತಿಲ್ಲ. ಅ

*ವಿದ್ಯಾ ಎಸ್. ಭಟ್*


ಕೋರ್ಟ್ ಮಾರ್ಷಲ್

# ಕನಕದಾಸರ ಜಯಂತಿ ಆಚರಣೆ




ಕರ್ನಾಟಕ ಸರಕಾರದೊಂದಿಗೆ ರಾಷ್ಟ್ರಮಟ್ಟದಲ್ಲಿ ಕನಕದಾಸರ ಜಯಂತಿಯನ್ನು ನವದೆಹಲಿಯಲ್ಲಿ ನಡೆಸಲು ತಯಾರಿ ನಡೆದಿದ್ದು ಕರ್ನಾಟಕದ ಮುಖ್ಯಮಂತ್ರಿಯವರಿಂದ ದಿನಾಂಕದ ನಿಗದಿಗಾಗಿ ಕಾಯಲಾಗುತ್ತಿದೆ ಎಂದು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ತಿಳಿಸಿದ್ದಾರೆ.ಅವರು ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಬಳಗ, ನವದೆಹಲಿ ಮತ್ತು ದೆಹಲಿಯ ಸುತ್ತಮುತ್ತಲಿನ ಕನ್ನಡಿಗರು ಜೊತೆಗೂಡಿ ಕರ್ನಾಟಕದ ದಾಸ ಶ್ರೇಷ್ಠರಾದ ಕನಕದಾಸರ 598ನೇ ಜಯಂತಿಯನ್ನು ನವೆಂಬರ್ 28ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಚರಿಸಿದ ಸಂದರ್ಭದಲ್ಲಿ ಮಾತಾಡುತ್ತಿದ್ದರು.

ಕನಕದಾಸರ 598ನೇ ಜಯಂತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಬಳಗದ ಅಧ್ಯಕ್ಷರಾದ ಶ್ರೀ ವೈಜನಾಥ್ ಅವರು ದೀಪ ಬೆಳಗಿಸಿ ಆರಂಭಿಸಿದರು. ಬಳಗದ ಕಾರ್ಯದರ್ಶಿ ಮಹಾದೇವ್, ಸದಸ್ಯರಾದ ಶ್ರೀ ರಾಜಣ್ಣ ಬಿರಾದಾರ, ಡಾ. ಮುನಿರಾಜು, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆಯರಾದ ಶ್ರೀಮತಿ ಆಶಾ ಮಹಾದೇವ್ ಮತ್ತು ಶ್ರೀಮತಿ ಎಸ್.ಸಿ. ಹೇಮಲತ, ಖಜಾಂಜಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಸಖಾರಾಮ ಉಪ್ಪೂರು ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಎನ್.ಟಿ.ಪಿ.ಸಿ. ಸ್ಕೂಲ್ ಆಫ್ ಬ್ಯುಸಿನೆಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಶ್ರೀ ಸಖಾರಾಮ ಉಪ್ಪೂರು ಅವರು ಕನಕದಾಸರು ಬೆಳೆದು ಬಂದ ದಾರಿ, ಅವರು ಸಮಾಜಕ್ಕೆ ನೀಡಿದ ಮಾನವೀಯ ಮೌಲ್ಯಗಳು ಮತ್ತು ಜಾತಿ ವ್ಯವಸ್ಥೆಯಲ್ಲಿ ಅಂದಿನ ಕಾಲದಲ್ಲಿದ್ದ ಮೇಲು-ಕೀಳು ಭಾವನೆಗಳ ವಿರುದ್ಧ ನಡೆಸಿದ ಹೋರಾಟವನ್ನು ವಿವರಿಸಿದರು. 'ನಾನು ಹೋದರೆ ಹೋದೇನು' ಎಂಬ ಭಾವನೆಯ ಬಗೆಗೆ ಕನಕದಾಸರು ಸಮಾಜಕ್ಕೆ ನೀಡಿದ ಮೌಲ್ಯಗಳನ್ನು ತಿಳಿಸಿ ಕೊಟ್ಟರು. ಕನಕದಾಸರು ತಮ್ಮ ಸಾಹಿತ್ಯದಲ್ಲಿ ಮನುಕುಲದ ಸಾರವನ್ನೇ ಎರಕ ಹೊಯ್ದಿದ್ದಾರೆ. ಅವರೊಬ್ಬ ಮಹಾ ಮಾನವತಾವಾದಿ ಹಾಗೂ ಸೃಜನಶೀಲ ಬುದ್ಧಿಜೀವಿ ಎಂದು ಶ್ರೀ ಉಪ್ಪೂರು ಅವರು ನುಡಿದರು.

ಭಾರತ ಸರ್ಕಾರದ ನೀತಿ ಆಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ. ಮುನಿರಾಜು ಅವರು ಕನಕದಾಸರ ಬಗೆಗೆ ಸದಸ್ಯರು ಮಂಡಿಸಿದ ವಿಚಾರಗಳನ್ನು, ಹಾಡುಗಳನ್ನು ಗುಣಗಾನಿಸುವುದರೊಂದಿಗೆ ಕನಕದಾಸರು ರಚಿಸಿದ ಕೃತಿಗಳ ಬಗ್ಗೆ ತಿಳಿಸುತ್ತಾ ಅವರು ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಹೋರಾಟಗಳನ್ನು ತಿಳಿಸುವುದರೊಂದಿಗೆ ಇಂದಿನ ಯುವ ಪೀಳಿಗೆಗೆ ಯಾವ ರೀತಿಯಲ್ಲಿ ಸಾಮಾಜಿಕ ಅಸಮಾನತೆಯನ್ನು ನಿವಾರಿಸಲು ಕಾರ್ಯ ಪ್ರವೃತ್ತರಾಗಬೇಕಾಗಿದೆ ಎಂಬುದನ್ನು ತಿಳಿಸಿಕೊಟ್ಟರು.

ದೆಹಲಿ ಕರ್ನಾಟಕ ಸಂಘದ ಕಲಾವಿದರಾದ ನೇತ್ರಾವತಿ ಕುಮಾರ್, ಮಮತಾ ಶಿವರಾಮ್, ಪ್ರವೀಣಾ ಕೋಟೆ, ಮಂಜುಳಾ ನಾಗರಾಜ, ಚಿದಂಬರ ಕೋಟೆ, ವಿದ್ಯಾಭಟ್, ಶಿಲ್ಪಾ ಹರಿಪ್ರಿಯ ಮೊದಲಾದವರು ತಮ್ಮ ಸುಶ್ರಾವ್ಯ ಕಂಠದಿಂದ ಕನಕದಾಸರು ರಚಿಸಿದ ವಿವಿಧ ಕೀರ್ತನೆಗಳನ್ನು ಹಾಡುಗಳ ರೂಪದಲ್ಲಿ ಹಾಡಿ ಜನರ ಮನಗೆದ್ದರು. ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಆಶಾಲತ ಮಹಾದೇವ್ ಅವರು ಕನಕದಾಸರ ಜೀವನ ಚರಿತ್ರೆಯನ್ನು ವಿವರಿಸಿದರು. ಕನಕದಾಸರ ಕುರಿತಾದ ಒಂದು ಕಿರು ಸಾಕ್ಷ್ಯಚಿತ್ರವನ್ನುಪ್ರದರ್ಶಿಸಲಾಯಿತು. ಅ

***ಆಶಾಲತ ಎಂ.***

# ರಾಷ್ಟ್ರೀಯ ಮಕ್ಕಳ ಪುರಸ್ಕಾರ ವಿಜೇತೆಗೆ ಅಭಿನಂದನೆ

ಭಾರತ ಸರಕಾರದ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಸಚಿವಾಲಯ ನೀಡುವ ರಾಷ್ಟ್ರೀಯ ಮಕ್ಕಳ ಪುರಸ್ಕಾರವನ್ನು (2015) ತನ್ನ ಎಳೆಯ ವಯಸ್ಸಿನಲ್ಲಿಯೇ ಸಂಗೀತ ಕ್ಷೇತ್ರದಲ್ಲಿನ ಸಾಧನೆಗಾಗಿ ತನ್ನದಾಗಿಸಿಕೊಂಡ ಬೆಂಗಳೂರಿನ ಕುಮಾರಿ ಬಿ.ಪಿ. ಅದಿತಿ (ಶ್ರೀ ಬಿ.ಎನ್.ಪ್ರಹ್ಲಾದ್ ಅವರ ಮಗಳು) ಅವರನ್ನು ನವೆಂಬರ್ 14, 2015, ಮಕ್ಕಳ ದಿನಾಚರಣೆಯ ಅಂಗವಾಗಿ ರಾಷ್ಟ್ರಪತಿಯವರಿಂದ ಈ ಪ್ರಶಸ್ತಿಯನ್ನು ಪಡೆದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಬರಮಾಡಿಕೊಂಡು ಅಭಿನಂದಿಸಲಾಯಿತು ಇದೇ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಎಂ. ಮತ್ತು ಶ್ರೀಮತಿ ಎಸ್.ಸಿ. ಹೇಮಲತ, ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ. ಎಸ್. ಶಶಿಕುಮಾರ್, ಶ್ರೀ ವಿ.ವಿ. ಬಿರಾದಾರ, ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಸುಮಿತಾ ಮುರಗೋಡ, ಶ್ರೀ ಶಶಿಕಾಂತ್ ಪಾಟೀಲ್ ಮತ್ತು ಶ್ರೀ ತ್ಯಾಗೇಶ್ ಮೂರ್ತಿ ಉಪಸ್ಥಿತರಿದ್ದರು. ಅ

***ಅಭಿಮತ ವರದಿ***



# ಲಂಡನ್‌ನಲ್ಲಿ ಭಾರತದ ಇಬ್ಬರು ದಾರ್ಶನಿಕರ ಸ್ಮಾರಕಗಳು

ಜಗತ್ತಿನ ಮುಂದುವರೆದ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವದ ಕಲ್ಪನೆ ರೂಪುಗೊಳ್ಳುವ ಮೊದಲೇ ಕನ್ನಡದ ನೆಲದಲ್ಲಿ ಅನುಭವ ಮಂಟಪವನ್ನು ಕಟ್ಟಿ ಸಮಾಜದಲ್ಲಿನ ಕೃಷಿಕ, ನೇಕಾರ, ಗಾಣಿಗ, ವಣಿಕ, ಅಂಬಿಗ ಹೀಗೆ ಎಲ್ಲ ಜನ ಸಮುದಾಯಗಳ ಸುಮಾರು 770 ಶರಣ ಸಂಕುಲವನ್ನು ಹುಟ್ಟುಹಾಕಿ ವರ್ಗರಹಿತ, ಜಾತಿರಹಿತ, ಸರ್ವ ಸಮಾನತೆ, ಸಹೋದರತ್ವ ಭಾವನೆಗಳನ್ನು ಒಳಗೊಂಡ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ವಾಸ್ತವಗೊಳಿಸಿದ ಕಾಯಕ ಯೋಗಿ ಬಸವಣ್ಣನವರ ಕಂಚಿನ ಪ್ರತಿಮೆ ಹಾಗೂ ಭಾರತದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಸ್ಮಾರಕಗಳನ್ನು ಲಂಡನ್‌ನಲ್ಲಿ ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನವೆಂಬರ್ 14ರಂದು ಲೋಕಾರ್ಪಣೆ ಮಾಡಿದರು. ಚಾರಿತ್ರಿಕ ಘಟನೆಯೊಂದರ ಪುನರ್ಮನನಕ್ಕೆ ನಾಂದಿಯಾಯಿತು.

ಸಂವಿಧಾನತಜ್ಞರು ಹೇಳುವಂತೆ ವಿಶ್ವದ ಎಲ್ಲ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಸಂವಿಧಾನಗಳಿಗೆ ಮಾತೃ ಮ್ಯಾಗ್ನಾಕಾರ್ಟ. ಮಧ್ಯಕಾಲೀನ ಜಗತ್ತಿನ ಇತಿಹಾಸದ ಪುಟಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ 13 ನೇ ಶತಮಾನ ವೇಳೆಗೆ ಅಂದರೆ ಕ್ರಿ.ಶ. 1215 ರಲ್ಲಿ ಇಂಗ್ಲೆಂಡಿನ ಭೂಮಾಲೀಕರು ಮತ್ತು ಅಂದಿನ ಇಂಗ್ಲೆಂಡಿನ ದೊರೆ ಜಾನ್ (ಕಿಂಗ್ ಜಾನ್) ನಡುವಿನ ಒಪ್ಪಂಧದ ಫಲಶ್ರುತಿಯೇ ಈ ಮ್ಯಾಗ್ನಾಕಾರ್ಟ ಎಂಬುದು ವೇದ್ಯವಾಗುತ್ತದೆ.

ಮಧ್ಯಕಾಲೀನ ಭಾರತದ, ಕರ್ನಾಟಕ ಚರಿತ್ರೆ ಸ್ಪಷ್ಟಪಡಿಸುವಂತೆ ಮ್ಯಾಗ್ನಾಕಾರ್ಟ ಜಾರಿಗೆ ಬರುವ ಸರಿ ಸುಮಾರು ಒಂದು ಶತಮಾನಕ್ಕೆ ಮುಂಚೆ ಅಂದರೆ ಕ್ರಿ.ಶ. 1132ರ ವೇಳೆಗಾಗಲೇ ವಿಶ್ವಗುರು ಬಸವಣ್ಣನವರು ಅನುಭವ ಮಂಟಪದ ಮೂಲಕ "ಭಾರತದ ಒಡಲಲ್ಲಿ ಅದರಲ್ಲೂ ಕನ್ನಡ ನೆಲದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹುಟ್ಟು ಹಾಕಿದ್ದರು" ಎಂಬುದು ಪ್ರತಿಯೊಬ್ಬ ಭಾರತೀಯ ಹೆಮ್ಮೆ ಪಟ್ಟುಕೊಳ್ಳಬೇಕಾದ ಚಾರಿತ್ರಿಕ ಸಂಗತಿ.

ಭಾಷೆಯ ಅರಿವಿನ ಅಭಾವಕ್ಕಾಗಿಯೋ, ಸಂಪರ್ಕ, ಮಾಹಿತಿ ಲಭ್ಯವಾಗದ ಕಾರಣಕ್ಕಾಗಿಯೋ ಚರಿತ್ರೆಯನ್ನು ಬರೆಯುವಲ್ಲಿ ಲೋಪದೋಷಗಳಾಗಿ ಚರಿತ್ರೆಯ ಪಾಠಗಳಲ್ಲಿ ಬದಲಾವಣೆ ಆಗಬಹುದು. ಆದರೆ ಚಾರಿತ್ರಿಕ ಘಟನೆಗಳು ಎಂದಿಗೂ ಬದಲಾಗುವುದಿಲ್ಲ. ಸಮಾಜದ, ದೇಶದ, ಜಗತ್ತಿನ ಕಲ್ಯಾಣಕ್ಕಾಗಿ ಘಟಿಸಿದ ಎಲ್ಲ ಮಹಾತ್ಮರ ಮಹಾನ್ ಕಾರ್ಯಗಳು ಸಮಾಜದಲ್ಲಿ, ಜನಮಾನಸದಲ್ಲಿ ನಿರಂತರವಾಗಿ ಧಾರೆಯಂತೆ ಪ್ರವಹಿಸುತ್ತಿರುತ್ತವೆ. ಅಂತಹ ಮಹಾನ್ ಪುರುಷರಿಗೂ ಕೂಡ ಸಮಾಜ ಯಥೋಚಿತವಾದ ಸ್ಥಾನ ನೀಡಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ತುಡಿತವನ್ನು ಹೊಂದಿರುತ್ತದೆ ಎಂಬುದಕ್ಕೆ ಸ್ಪಷ್ಟ ನಿದರ್ಶನ.

ನವೆಂಬರ್ 14, 2015ರಂದು ಲಂಡನ್‌ನ ಥೇಮ್ಸ್ ನದಿ ದಂಡೆಯ ಮೇಲೆ ಮಹಾನ್ ಮಾನವತಾವಾದಿ ಶ್ರೀ ಬಸವೇಶ್ವರರ ಕಂಚಿನ ಪ್ರತಿಮೆಯ ಪ್ರತಿಷ್ಠಾಪನೆ. ಇಂತಹ ಮಹತ್ವದ ಕೈಂಕರ್ಯಕ್ಕೆ ಕಾರಣೀಭೂತರಾದ ಲಂಡನ್ನಿನ ಮಾಜಿ ಮೇಯರ್ ಡಾ. ನೀರಜ್ ಪಾಟೀಲರು ನಿಜಕ್ಕೂ ಪ್ರಶಂಸಾರ್ಹರು. ಡಾ. ನೀರಜ್ ಪಾಟೀಲರ ಈ ಸಾಧನೆ ಕರ್ನಾಟಕದ



ಇನ್ನೂ ಅನೇಕ ಸಂತ ಶ್ರೇಷ್ಠರ, ಮಹಾನ್ ಪುರುಷರ ಮಹತ್ಕಾರ್ಯಗಳನ್ನು ಜಗತ್ತಿಗೆ ಪರಿಚಯಿಸುವಲ್ಲಿ ಇತರರಿಗೆ ದಾರಿದೀಪವಾಗಲಿ.

ವಿಶೇಷವೆಂದರೆ ಈ ಇಬ್ಬರೂ ಕೂಡಾ ಭಾರತೀಯರು. ಇಬ್ಬರೂ ಸಹ 'ಸಮಾಜದ ಕಟ್ಟಕಡೆಯ ವರ್ಗಗಳ ಉದ್ಧಾರ ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದ ಮಾತ್ರ ಸಾಧ್ಯ' ಎಂದು ನಂಬಿ ನಡೆದವರು. ಇಂತಹ ದಾರ್ಶನಿಕರ ಸ್ಮಾರಕಗಳನ್ನು ಜಗತ್ತಿನಲ್ಲೇ ಹಳೆಯ ಪ್ರಜಾತಂತ್ರ ರಾಷ್ಟ್ರ ಎಂದೇ ಗುರುತಿಸಿರುವ ಇಂಗ್ಲೆಂಡ್‌ನ ರಾಜಧಾನಿ ಲಂಡನ್‌ನಲ್ಲಿ ಪ್ರತಿಷ್ಠಾಪಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅ

*ಚಂದ್ರಶೇಖರ್ ಎನ್.ಪಿ.*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Dec-2015, Vol. No.26, Issue No.3, Price Rs.1/- RNI Regn. No. 53405/91, DL-SW-1/4016/13-15
Printout Date : Dec 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ಸ್ಥಳೀಯ ಕಲಾವಿದರಿಂದ ರಾಜ್ಯೋತ್ಸವ ಸಂಭ್ರಮ